|---|---|---|---|---|---|---|---|---|---|---|---|
| | Total ASBA Applications received | Application Banked but not in bid data file | Not Banked Enteries | Valid ASBA applications (A) | Multiple Application | Not A Eligible Equity Shareholders Of The Company | Application Through Third Party Bank Account | Invalid Application | Application Banked but not in bid data file | Total Particulars of Rejection (B) | Net Valid Applications |
| | (A) | | | | (B) | | | | | | (C) |
| Number of Applications received | *116 | 0 | 0 | 116 | 0 | 94 | 0 | 12 | 0 | 106 | 10 |
| Number of Right Shares applied for | 5239470 | 0 | 0 | 5239470 | 0 | 24367 | 0 | 1103 | 0 | 25470 | 5214000 |
| Total Amount received for the said application | 52394700.00 | 0 | 0 | 52394700.00 | 0 | 243670.00 | 0 | 11030.00 | 0 | 254700.00 | 52140000.00 |

#The total number of valid applications aggregated to 100% (100.52 Percent of total number of Rights Share allotted under the Issue, whereas the total number of net subscriptions is 8.62% (100.02 Percent.

* 5 application for 44,50,000 equity shares are through Non-ASBA against the conversions of Loan

In accordance with the Letter of Offer and based onthe basis of allotment being finalized on Tuesday,14thFebruary, 2023, in consultation with the Issuer Company, Lead Manager, the Registrar, and CSE, the Designated Stock Exchange for the Issue, the Company has onTuesday, 14th February, 2023,allotted 51,12,500 (Fifty One Lakh Twelve Thousand Five Hundred)fullypaid-upRights Shares to the successful applicants. We hereby confirm that all the valid applications considered for Allotment.

**1. Basis of Allotment**

| Category | Applications received | | Number of Equity Shares Accepted and Allotted against Rights Entitlement (A) | | | Number of Equity Shares accepted against Additional Rights applied (B) | | | Total Rights Shares Accepted and Allotted (A+B) | | |
|---|---|---|---|---|---|---|---|---|---|---|---|
| | Number | % | Number | Amount | % | Number | Amount | % | Number of Rights Shares | Amount | % |
| Eligible Shareholders | 9 | 90.00% | 2074800 | 2074800.00 | 89.81% | 2897200 | 28972000.00 | 99.83% | 4972000 | 49720000.00 | 95.39% |
| Renouncees | 1 | 10.00% | 235450 | 2354500.00 | 10.19% | 5050 | 50500.00 | 0.17% | 240500 | 2405000.00 | 4.61% |
| Total | 10 | 100.00 % | 2310250 | 23102500.00 | 100.00% | 2902250 | 29022500.00 | 100.00% | 5212500 | 52125000.00 | 100.00% |

**Including partial acceptance cases.**

**Intimations for Allotment/refund/rejection cases:** The dispatch of allotment advice cum refund intimation and question for the rejection, as applicable, to the investors vide email has been completed on Tuesday, 14/02/2023. The instructions to (i) Kotak Mahindra Bank Limited ('Bankers to the Issue') for processing refund NACH/NEFT/RTGS/direct credit for Application using SCSBs for the unblocking fund in case of ASBA Applications were given onTuesday, 14/02/2023. The Listing Application with CSEwas executed Tuesday, 21/02/2023. The credit of Equity Shares in dematerialized form to respectively demat accounts of allottees had been completed with the CDSL and NSDL on or before Friday, 24/02/2023. No physical Equity Shares were tendered in the Rights Issue. Pursuant to the listing and trading approvals granted by CSE, the Rights Shares Allottedin the Issue are to commence trading on CSEfrom Tuesday, 28/02/2023. In accordance with the SEBI circular bearing reference number 'SEBI/HO/CFD/DIL2/CIR/P/2020/13'dated January 22, 2020, the request for the extinguishment of rights entitlement had been sent to the Depositories on Monday, 27/02/2023.

**DECLAIMER CLAUSE OF CSE (DESIGNATED STOCK EXCHANGE):** It is to be distantly understood that the permission given by CSE should not, in anyway, be deemed or construed that the Letter of Offer has been cleared or approved by CSE, nor does it certify the correctness or completeness of any contents of Letter of Offer. The investors are advised to refer to the Letter of Offer in the foil text of the 'Disclaimer Clause of CSELimited'on the page 128 of the Letter of Offer.

| LEAD MANAGER TO THE ISSUE | REGISTRAR TO THE ISSUE |
|---|---|
| **PREMIER ROAD CARRIERS LIMITED** <br> **Corporate Identification Number:**L63090WB1968PLC027309; <br> **Registered Office:** 14th Floor, Suite No. 1405, Om Towers, 32 Chowringhee Road Kolkata - 700071, West Bengal India; <br> **Corporate Office:** 901/ 918 B Wing, Dalamal Tower, Nariman Point, Mumbai – 400021, Maharashtra, India; <br> **Contact Number:** +912267740623; <br> **Contact Person:** Mr. Agnivesh Moreshwar Sathe, Company Secretary and Compliance Officer; <br> **Email-ID:** info@prclimited.co.in; **Website:** www.prclimited.co.in; | **PURVA SHAREGISTRY (INDIA) PRIVATE LIMITED** <br> Unit No. 9, Ground Floor, Shiv Shakti Industrial Estate, J. R. Boricha Marg, Lower Parel East, Mumbai-400011, Maharashtra, India; <br> **Contact Details:** + 91-22-2301 2518 / 6761; <br> **Website:** www.purvashare.com; <br> **E-mail ID/ Investor Grievance ID:** support@purvashare.com; <br> **Contact Person:** Ms. Deepali Dhuri; <br> **SEBI Registration Number:** INR000001112; <br> **Validity:** Permanent <br> **Investor may contact the Registrar to Issue/ Compliance Officer in case of any Pre-Issue/Post-Issue related problems such as non-receipt of Allotment advice/demat credit etc.** |

Investors may contact the Registrar or the Company Secretary and Compliance Officer for any pre-Issue or post Issue related matter. All grievances relating to the ASBA process may be addressed to the Registrar, with a copy to the SCSBs giving full details such as name, address of the Applicant, contact number(s), e-mail address of the Sole/ first holder, folio number or demat account number, number of Rights Shares applied for, amount blocked, ASBA Account number, and the Designated Branch of the SCSBs where the Application Form or the plain paper application, as the case may be, was submitted by the Investors along with a photocopy of the acknowledgement slip.

**THE LEVEL OF SUBSCRIPTION SHOULD NOT BE TAKEN TO BE INDICATIVE OF EITHER THE MARKET PRICE OF THE EQUITY SHARES OR THE BUSINESS PROSPECTS OF THE COMPANY.**

**For Premier Road Carriers Limited**
**Sd/-**
**Vijay Kumar Gupta**
**Managing Director**
**Director Identification Number: 00798748**

**Place: Mumbai**
**Date: 22nd February 2023**

The Letter of Offer is available on the website of the SEBI at www.sebi.gov.in,BSE at www.bseindia.com, CSE at www.cse-india.com, PRCL at www.prclimited.co.in, Registrar at www.purvashare.com, and Lead Manager www.capitalsquare.in accessible at https://www.purvashare.com/rights-issue/input-form.php. Investor should note that investment in Equity Shares involves a high degree of risk and for details of risk and for details relating to the same, please see the section entitled 'Risk Factor' beginning on page 19 of the Letter of Offer.

The Rights Entitlements and the Rights Shares have not been, and will not be, registered under the United States Securities Act of 1933, as amended (the 'US Securities Act') or under any securities laws of any state or other jurisdiction of the United States and may not be offered, sold, resold, allotted, taken up, exercised, renounced, pledged, transferred or delivered, directly or indirectly withinUnited States or to, or for the account or benefit of U.S. person (as defined in regulation except for this purposes. U.S. Persons include person who would otherwise have been excluded from such term solely by virtue of rule 902(K)(1)(VIII)(B) or Rule 902(K)(2)(I), except pursuant to the exemption from, or in transaction not subject to, the registration requirement of U.S. Securities Act and in compliance with any applicable securities laws of any state or other jurisdiction of the United States. Accordingly, the Rights Entitlement and Rights Shares were offered and sold (i) in offshore transaction outside in the United States to the non U.S. person in compliance with the Regulation S to the Existing Shareholder located in the Jurisdiction where such offer and the state of Rights Shares is permitted under law of such jurisdiction, and (ii) in the United States to U.S.QIBs and are also Qualified Purchasers pursuant to applicable exemptions under the U.S Securities Act and Investment Company Act. There will be no public offering in the United States. The Rights Shares and Rights Entitlements are not transferable except in accordance with the restrictions.

---

*(This is an Advertisement for information purposes only and not for publication or distribution or release directly or indirectly outside India and is not an offer document announcement)*

# PACIFIC INDUSTRIES LIMITED

**Corporate Identification Number:** L14101KA1989PLC062041

Pacific Industries Limited ("Company" or "Issuer was incorporated as a public limited company under the Companies Act, 1956, at Jaipur, Rajasthan, as Pacific Granites Limited. Our Company was granted a certificate of incorporation and certificate of commencement of business dated July 13, 1989 and August 28, 1989, respectively, by the Registrar of Companies Jaipur, Rajasthan. Thereafter, the name of our Company was changed to Pacific Industries Limited and a fresh certificate of incorporation, consequent upon change of name, was issued by the Registrar of Companies, Bangalore on November 25, 1994. The registered office of our Company was shifted from the state of Rajasthan to the state of Karnataka pursuant to the order passed by the Hon'ble Company Law Board, New Delhi Bench on November 30, 2011.

**Registered Office:** Survey No. 13, National Highway 48, Kempalinganahalli Village, Nelamangala Taluk, Bangalore (R) 562123 Karnataka
**Corporate Office:** Village Sapetia, Brahmano Ka Guda, Bedla, Udaipur 313004, Rajasthan | **Tel:** +91-294-2440196/2440388/2440933/2440934
**Contact Person:** Mr. Sachin Shah, Company Secretary and Compliance Officer
**E-mail:** pilnorth@pacificgranites.com | pacificind@rediffmail.com | pilnorth@pacificgranites.com | pacificinvestor@rediffmail.com
**Website:** www.pacificindustriesltd.com

### OUR PROMOTERS: JAGDISH PRASAD AGARWAL, GEETA DEVI AGARWAL AND KAPIL AGARWAL

**ISSUE OF UPTO 34,46,325 EQUITY SHARES OF FACE VALUE OF ₹10 EACH ("RIGHTS EQUITY SHARES") OF OUR COMPANY FOR CASH AT A PRICE OF ₹139 PER EQUITY SHARE (INCLUDING A SHARE PREMIUM OF ₹129 PER EQUITY SHARE) (THE "ISSUE PRICE"), AGGREGATING UPTO ₹4790.39 LAKHS ON A RIGHTS BASIS TO THE EXISTING ELIGIBLE EQUITY SHAREHOLDERS OF OUR COMPANY IN THE RATIO OF 1 (ONE) RIGHTS EQUITY SHARE(S) FOR EVERY 1 (ONE) FULLY PAID-UP EQUITY SHARE(S) HELD BY SUCH EXISTING ELIGIBLE EQUITY SHAREHOLDERS ON THE RECORD DATE, THAT IS ON WEDNESDAY, JANUARY 11, 2023 (THE "ISSUE").**

### BASIS OF ALLOTMENT

The Board of Directors of our Company would like to thank all its shareholders and investors for their response to the Issue, which opened for subscription on January 19, 2023 and closed on February 02, 2023 and the last date for On Market Renunciation of Rights Entitlements was January 30, 2023.

Considering the fact that promoter and promoter group subscription was lower than that of their individual rights entitlement; which was not in consonance with the disclosure provided in the Letter of Offer, the Company had given an option to the public shareholders to withdraw their subscription in the Right Issue. The withdrawal window was opened for the subscribers commencing from Monday, February 13, 2023 and closed on February 14, 2023. The Basis of Allotment process was undertaken post completion of the above stated withdrawal process given to subscribers.

Out of the total 1,341 Applications for 48,92,957 Rights Equity Shares, 200 Applications for 1,28,029 Rights Equity Shares were rejected due to technical rejections as disclosed in the Letter of Offer. The total number of valid Applications received were 1,141 for 47,64,928 Rights Equity Shares, which was 141.98% of the Issue size. In accordance with the Letter of Offer, the Basis of Allotment was finalized on February 16, 2023, by the Company in consultation with BSE Limited ("BSE"), the Designated Stock Exchange, the Lead Manager to the Issue and the Registrar tothe Issue. The Board of Director of the Company has at its meeting held on February 21, 2023, approved the allotment of 34,46,325 Rights Equity Shares to the successful Applicants. All valid Applications after technical rejections have been considered for allotment. In the Issue, NIL Rights Equity Shares have been keptin abeyance.

**1. The breakup of valid applications received through ASBA (after technical rejections) is given below:**

| Applicants | No. of valid CAFs (including ASBA applications) received | No. of Equity Shares accepted and allotted against Entitlement (A) | No. of Equity Shares accepted and allotted against Additional applied (B) | Total Equity Shares accepted and allotted (A+B) |
|---|---|---|---|---|
| Non Renouncees | 1080 | 1968735 | 1466749 | 3435484 |
| Renouncees | 65 | 10841 | 0 | 10841 |
| **Total** | **1145** | **1979576** | **1466749** | **3446325** |

**2. Information regarding total Applications received:**

| Category | Applications Received | | Rights Equity Shares Applied for | | | Rights Equity Shares Allotted | | |
|---|---|---|---|---|---|---|---|---|
| | Number | % | Number | Value (₹) | % | Number | Value (₹) | % |
| Eligible Equity Shareholders | 1274 | 95.00% | 4844782 | 673424698.00 | 99.02% | 3435484 | 477532276.00 | 99.69% |
| Renouncees | 67 | 5.00% | 48175 | 6696325.00 | 0.98% | 10841 | 1506899.00 | 0.31% |
| **Total** | **1341** | **100.00%** | **4892957** | **680121023.00** | **100.00%** | **3446325** | **479039175.00** | **100.00%** |

**Includes far partially rejected cases.*

**Information for Allotment/refund/rejected cases:** The dispatch of Allotment Advice cum Refund intimation to the Allottees, as applicable, has been completed on February22, 2023. The instructions for unblocking of funds incase of ASBA Applications were issued ta SCSAs on February 16, 2023. The Listing applications were filed with the BSE Limited ("BSE ") on February 21, 2023, The Company received the listing approvals from the BSE on February 21, 2023. The credit ofRights Equity Shares to the respective demat accounts of the allottees in respect of Allotment in dematerialized form has been completed on February 22, 2023. For furtherdetails, see "Terms of the Issue —Allotment Advice' unblocking of ASBA Accounts" on page 248 of the Letter of Offer. The trading in fully paid-up Equity Shares issued in the Rights Issue shall commence on BSE upon receipt of trading permission. The trading is expected to commence on or about February 27, 2023. Further, in accordance with SEBI circular bearing reference - SEBVHONCFODIL2ICIRP/ 2020/13 dated January 22, 2020, the request for extinguishment of Rights Entitlements has been sent to NSDL & CDSL on February 21, 2023.

**INVESTORS MAY PLEASE NOTE THAT THE RIGHTS EQUITY SHARES CAN BE TRADED ON THE STOCK EXCHANGES ONLY IN DEMATERIALISED FORM.**

**DISCLAIMER CLAUSE OF SEBI:** It is to be distinctly understood that the submission of the Letter of Offer to SEBI should not in any way deemed or construed that the Letter of Offer has been cleared or approved by SEBI. The investors are advised to refer to the Letter of Offer for the full text as provided in "Other Regulatory and Statutory Disclosures – Disclaimer Clause of SEBI" on page 207 of the Letter of Offer.

**DISCLAIMER CLAUSE OF BSE (THE DESIGNATED STOCK EXCHANGE):** It is to be distinctly understood that the permission given by BSE should not, in anyway, be deemed or construed that the Letter of Offer has been Cleared or approved by BSE; nor does it certify the correctness or completeness of any of the contents of the Letter of Offer. The Investors are advised to refer to the full text of the Disclaimer clause of BSE as provided in 'other Regulatory and Statutory Disclosures - Disclaimer Clause of BSE" on page 211 of the Letter of Offer.

Unless otherwise spaced, all capitalised terms used herein shall have the same meaning ascribed to such terms in the Letter.

**THE LEVEL OF SUBSCRIPTION SHOULD NOT BE TAKEN TO BE INDICATIVE OF EITHER THE MARKET PRICE OF THE EQUITY SHARES OR THE BUSINESS PROSPECTS OF THE COMPANY.**

| LEAD MANAGER TO THE ISSUE | REGISTRAR TO THE ISSUE | COMPANY SECRETARY AND COMPLIANCE OFFICER |
|---|---|---|
| SRUJAN ALPHA CAPITAL ADVISORS <br> **SRUJAN ALPHA CAPITAL ADVISORS LLP** <br> **Registered Office:** 112A, Arun Bazar, Swami Vivekananda Road, Malad West, Mumbai-400064 Maharashtra <br> **Correspondence Address:** 824 & 825, Corporate Avenue, Sonawala Rd, opposite Atlanta Centre, Sonawala Industry Estate, Goregaon, Mumbai-400064 <br> **Tel:** +91–22– 4016 7322 <br> **E-mail:** pil.rightsissue@srujanalpha.com <br> **Website:** www.srujanalpha.com <br> **Contact Person:** Mr. Jinesh Doshi <br> **LLPIN No.:** AAW-1680 <br> **SEBI Registration No.:** INM000012829 | LINK Intime <br> **LINKINTIME INDIA PRIVATE LIMITED** <br> C 101, 1st Floor, 247 Park, L.B.S. Marg, Vikhroli (West), Mumbai-400083, Maharashtra, India <br> **Tel:** +91 22 49186200/ +91 8108114949 <br> **Email:** pacific.rights@linkintime.co.in <br> **Website:** www.linkintime.co.in <br> **Investor grievance email:** pacific.rights@linkintime.co.in <br> **Contact Person:** Mr. Sumeet Deshpande <br> **SEBI Registration Number:** INR000004058 | **PACIFIC INDUSTRIES LIMITED** <br> **Mr. Sachin Shah,** Company Secretary and Compliance Officer <br> **Registered Office:** Survey No. 13, National Highway 48, Kempalinganahalli Village, Nelamangala Taluk, Bangalore (R) 562123 Karnataka. <br> **Corporate Office:** Village Sapetia, Brahmano Ka Guda, Bedla, Udaipur 313004, Rajasthan. <br> **Telephone:** +91-294-2440196/2440388/2440934 \| 0807723004/ 77255974 <br> **E-mailid:** pilnorth@pacificgranites.com \| pacificind@rediffmail.com pilnorth@pacificgranites.com \| pacificinvestor@rediffmail.com <br> **Website:** www.pacificindustriesltd.com <br> **Corporate Identification Number:** L14101KA1989PLC062041 |

**For Pacific Industries Limited**
**On behalf of Board of Directors**
**Sd/-**
**Sachin Shah**
**Company Secretary and Compliance Officer**

**Place:** Udaipur
**Date:** February 22, 2023

*__PACIFIC INDUSTRIES LIMITED__ has filed a Letter of Offer with BSE, the designated stock exchange. The Letter of Offer is available on the website of SEBI at www.sebi.gov.in, and BSE at www.bseindia.com, the website of the Lead Manager to the Issue, i.e., Srujan Alpha Capital Advisors LLPat www.srujanalpha.com, website of the company at www.pacificindustriesltd.com and website of the Registrar at www.linkintime.co.in. Investors should note that investment in equity shares involves a degree of risk and for details relating to the same, please see the section entitled "Risk Factors" on page 24 of the Letter of Offer. The Rights Entitlements and the Rights Equity Shares have not been and will not be registered under U.S Securities Act and may not be offered, sold, resold or otherwise transferred within the United States, except in transaction not subject to, or exempt from the registration requirements ofthe US. Securities Act and applicable state securities laws. Accordingly, the Rights Entitlements and the Rights Equity Shares are only being offered and sold outside the United States in offshore transactions in compliance with Regulation 5 under the US. Securities Act and the applicable laws of the jurisdiction where those offers and sales occur. The RightE ntitlements and the Equity Shares may not be re-offered, re-sold, pledged or otherwisetransferred except in an offshore transection in accordance withRegulation $ under the U.S. Securities Act. The offering to which the Letter of offer relates is not, and under no circumstances is to be construed as, an offering of any Rights Equity Shares or the Rights Entitlement for sale in the United States or as a solicitation therein of an offer to buy any of the Rights Equity Shares or Rights Entitlement. There is no intention to register any portion of the Issue of any of the securities described herein in the United States or to conduct a public offering of securities in the United States. Accordingly, the Issue Documents and the Application Form should not be forwarded to or transmitted in or to the United States.*

Raka

ಬೆಂಗಳೂರು | ಬೆಳಗಾವಿ | ಕಲಬುರಗಿ | ಹುಬ್ಬಳ್ಳಿ - ಧಾರವಾಡ | ಶಿವಮೊಗ್ಗ | ಮಂಡ್ಯ

UK Since 1997
ಎಬಿಸಿ ಮಾನ್ಯತೆಯ ಕನ್ನಡ ದಿನಪತ್ರಿಕೆ
UDAYAKALA

# ಉದಯಕಾಲ

ಕನ್ನಡಿಗರ ಜೀವಾಳ

www.udayakala.news | epaper.udayakala.news | udayakaladaily@gmail.com | udayakala | @UdayakalaNews | Pages: 10 | Price ₹5

ಸಂಪಾದಕ - ಪ್ರಕಾಶಕ: ಕೆ. ಎನ್. ಪುಟ್ಟಲಿಂಗಯ್ಯ | Thursday, February 23, 2023 | ಗುರುವಾರ, ಫೆಬ್ರವರಿ 23, 2023 | ಮುಖ್ಯ ಕಾರ್ಯನಿರ್ವಹಣಾಧಿಕಾರಿ: ಡಿ.ಬಿ.ಬಸವರಾಜು





ಗುರು ಕಾಲ

'ಸುಪ್ರಭಾತ'ದ ಹಿನ್ನೆಲೆ ಮತ್ತು ಮಹತ್ವ

"ಶೋಭಾ ಕರಂದ್ಲಾಜೆ ಅವರಿಗೆ ಜಾತಿ, ಧರ್ಮಗಳ ಬಗ್ಗೆ ಗೊತ್ತಿಲ್ಲ. ನಾವೆಲ್ಲಾ ಜಾತಿ, ಧರ್ಮಗಳ ಮೇಲೆ ಗೌರವ ಇಟ್ಟುಕೊಂಡಿದ್ದೇವೆ. ನಮ್ಮ ಕಾಂಗ್ರೆಸ್ ಸರ್ಕಾರದಿಂದ ಎಲ್ಲಾ ಜಾತಿಯ ಬಡವರಿಗೆ ವಿವಿಧ ಕಾರ್ಯಕ್ರಮಗಳನ್ನು ನೀಡಲಾಗಿದೆ. ಅನ್ನ ಭಾಗ್ಯ ಒಂದು ಜಾತಿ, ಒಂದು ಧರ್ಮಕ್ಕೆ ನಾವು ಕೊಟ್ಟಿಲ್ಲ. ಎಲ್ಲಾ ಜಾತಿ ಜನಾಂಗ ಹಾಗೂ ಧರ್ಮದವರಿಗೆ ನೀಡಲಾಗಿದೆ. ಕಾಂಗ್ರೆಸ್ ಪಕ್ಷ ಮನುಷ್ಯತ್ವದ ರಾಜಕಾರಣ ಮಾಡುತ್ತದೆ.

-ಸಿದ್ದರಾಮಯ್ಯ, ವಿಪಕ್ಷ ನಾಯಕ

**ಈ ಚಿತ್ರಗಳು ಹಿರೇಬೆಣಕಲ್ ಹಾಗೂ ಮಲ್ಲಾಪುರಗಳಲ್ಲಿ ಕಂಡುಬಂದಿರುವ ಚಿತ್ರಗಳಿಗೆ ಹೋಲಿಕೆಯಾಗುತ್ತವೆ. ಸುಮಾರು ಹದಿನೈದಕ್ಕೂ ಹೆಚ್ಚಿನ ಚಿತ್ರಗಳು ವಿವಿಧ ಕಾಲಘಟ್ಟಗಳಲ್ಲಿ ರಚಿಸಲ್ಪಟ್ಟಿವೆ. ಚಿತ್ರಗಳ ಶೈಲಿ, ವರ್ಣ ಹಾಗೂ ಗವಿಯಲ್ಲಿ ದೊರೆಯುತ್ತಿರುವ ಮಡಕೆಚೂರು, ಚರ್ಟ್ ಶಿಲೆಯ ಚೂರುಗಳ ಆಧಾರದ ಮೇಲೆ ಇಲ್ಲಿಯ ಚಿತ್ರಗಳು ಶಿಲಾ ತಾಮ್ರಯುಗದ ಕೊನೆಯ ಹಂತ (ಪ್ರ.ಶ.ಪೂ.1400-800), ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿಯ ಆದಿಮಧ್ಯಭಾಗದ (ಪ್ರ.ಶ.ಪೂ.1000-500) ಕಾಲದವೆಂದು ನಿರ್ಣಯಿಸಬಹುದು...**

# ಚಂದ್ರಗಿರಿ ಬೆಟ್ಟದಲ್ಲಿ ಶಿಲಾಯುಗದ ಗವಿ ಚಿತ್ರ ಪತ್ತೆ

UK ಅನಾದಿ ಕಾಲ
- ಬಸವರಾಜ ಎನ್.ಬೋದೂರು
ಲೇಖಕರು
ಮೊ: 97410 66740

ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಚಂದ್ರಗಿರಿ ಬೆಟ್ಟ ಪ್ರದೇಶದಲ್ಲಿ ಶಿಲಾಯುಗದ ಆದಿಮಾನವನ ಗವಿ ಚಿತ್ರಗಳು ಇತ್ತೀಚಿಗೆ ಬೆಳಕಿಗೆ ಬಂದಿವೆ. ಗಂಗಾವತಿಯ ಖ್ಯಾತ ಇತಿಹಾಸ ಸಂಶೋಧಕ ಡಾ.ಶರಣಬಸಪ್ಪ ಕೋಲ್ಕಾರ್ ಮತ್ತು ಅವರ ತಂಡ ಈ ಚಿತ್ರಗಳು ಇರುವ ಗವಿ ಶೋಧಿಸಿದೆ. ಹಿಟ್ನಾಳ್ ಹೋಬಳಿಯ ಅಚಲಾಪುರ ಸೀಮೆಯ ಚಂದ್ರಗಿರಿ ಗ್ರಾಮದ ಹತ್ತಿರವಿರುವ ಬೆಟ್ಟದಲ್ಲಿನ ಗವಿಯಲ್ಲಿ ಈ ರೇಖಾಚಿತ್ರಗಳು ಹಾಗೂ ಕೆಲ ಅವಶೇಷಗಳು ಕಂಡು ಬಂದಿವೆ.

ಭೂತಪ್ಪನ ಹೊಲದ ಉತ್ತರದ ಮೇರೆಗೆ ಇರುವ ಈ ಗವಿಗೆ ಜೇನುಕಲ್ಲು ಗವಿ ಎಂದು ಸ್ಥಳೀಯರು ಕರೆಯುತ್ತಾರೆ. ಅರೆ ವೃತ್ತಾಕಾರದಲ್ಲಿ ಕಲ್ಲಾಸರೆಯಂತಿರುವ ಈ ಗವಿ ಪೂರ್ವ-ಪಶ್ಚಿಮವಾಗಿ 30 ಅಡಿ ಉದ್ದವಾಗಿ, ಮಧ್ಯದಲ್ಲಿ 10 ಅಡಿ ಅಗಲವಾಗಿ ಹಾಗೂ 25 ಅಡಿ ಎತ್ತರವಾಗಿದೆ. ನೆಲಮಟ್ಟದಿಂದ ಗವಿ ಬೆಟ್ಟದಲ್ಲಿ ಸುಮಾರು 100 ಮೀಟರ್ ಎತ್ತರದಲ್ಲಿದೆ.

ಈ ಗವಿಯು ಆದಿಮಾನವನ ವಾಸಸ್ಥಾನವಾಗಿದ್ದು, ಗವಿಯಲ್ಲಿ ಹಾಳು ಮಣ್ಣು, ವಿಶಿಷ್ಟ ಅಲಂಕರಣೆಯ ಮಡಿಕೆ ಚೂರುಗಳು, ಚರ್ಟ್ ಶಿಲೆಯ ತುಂಡುಗಳು ಹಾಗೂ ಅಸ್ಥಿ ಅವಶೇಷಗಳು ಕಂಡುಬಂದಿವೆ. ಜೊತೆಗೆ ಗವಿಯ ಹಿಂಬದಿಯ ವಿಶಾಲ ಗೋಡೆಯ ತುಂಬೆಲ್ಲ ಕೆಂಪುವರ್ಣದಲ್ಲಿ ಬಿಡಿಸಿರುವ



ಹಲವಾರು ಚಿತ್ರಗಳಿವೆ. ಅವುಗಳಲ್ಲಿ ಕಾಲುಗಳನ್ನು ವಕ್ರ ಮಾಡಿ ಕೈಗಳನ್ನು ಮೇಲಕ್ಕೆ ಎತ್ತಿ ನಿಂತಿರುವ ಮನುಷ್ಯ, ನಾಲ್ಕು ಸಹಜ ಮನುಷ್ಯ ಚಿತ್ರಗಳು, ಕಡ್ಡಿ ಆಕೃತಿಯ ಎಂಟು ಮನುಷ್ಯ ಚಿತ್ರಗಳು, ಒಂದು ಪೂರ್ಣ ರೂಪದ ಕೋಣನ ಚಿತ್ರ, ಹಂದಿಯ ಮುಖ, ಹಸ್ತ ಮುದ್ರೆ, ಹಾಗೂ ಚೌಕ ಮಂಡಲಗಳ ಚಿತ್ರಗಳಿವೆ. ಮನುಷ್ಯ ಹಾಗೂ ಕೋಣದ ಮುಂಡದ ತುಂಬಾ ವಕ್ರ ರೇಖೆ ಹಾಕಲಾಗಿದೆ. ಹಾಗಾಗಿ, ಬೇಟೆಗಾರಿಕೆಗೆ ಸಂಬಂಧಿಸಿದ ತಾಂತ್ರಿಕ ಆಚರಣೆಯ ಭಾಗವಾಗಿ ಚಿತ್ರಗಳನ್ನು ರಚಿಸಿರುವುದು ತಿಳಿಯುತ್ತದೆ.

ಈ ಚಿತ್ರಗಳು ಹಿರೇಬೆಣಕಲ್ ಹಾಗೂ ಮಲ್ಲಾಪುರಗಳಲ್ಲಿ ಕಂಡುಬಂದಿರುವ ಚಿತ್ರಗಳಿಗೆ ಹೋಲಿಕೆಯಾಗುತ್ತವೆ. ಸುಮಾರು ಹದಿನೈದಕ್ಕೂ ಹೆಚ್ಚಿನ ಚಿತ್ರಗಳು ವಿವಿಧ ಕಾಲಘಟ್ಟಗಳಲ್ಲಿ ರಚಿಸಲ್ಪಟ್ಟಿವೆ. ಚಿತ್ರಗಳ ಶೈಲಿ, ವರ್ಣ ಹಾಗೂ ಗವಿಯಲ್ಲಿ ದೊರೆಯುತ್ತಿರುವ ಮಡಕೆಚೂರು, ಚರ್ಟ್ ಶಿಲೆಯ ಚೂರುಗಳ ಆಧಾರದ ಮೇಲೆ ಇಲ್ಲಿಯ ಚಿತ್ರಗಳು ಶಿಲಾ ತಾಮ್ರಯುಗದ ಕೊನೆಯ ಹಂತ (ಪ್ರ.ಶ.ಪೂ.1400-800), ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿಯ ಆದಿಮಧ್ಯಭಾಗದ (ಪ್ರ.ಶ.ಪೂ.1000-500) ಕಾಲದವೆಂದು ನಿರ್ಣಯಿಸಬಹುದು. ಈ ಚಿತ್ರಗಳಿಂದ ಕೊಪ್ಪಳ ಪ್ರದೇಶದ ಆದಿಮಾನವನ ಜೀವನ ಸಂಸ್ಕೃತಿಯ ಬಗ್ಗೆ ಮತ್ತಷ್ಟು ತಿಳಿದುಕೊಳ್ಳಲು ಆಸ್ಪದ ನೀಡಿದಂತಾಗಿದೆ ಎಂದು ಡಾ.ಶರಣಬಸಪ್ಪ ಕೋಲ್ಕಾರ ತಿಳಿಸಿದ್ದಾರೆ. ಈ ಚಿತ್ರಗಳ ಶೋಧನೆಯಲ್ಲಿ ವಿದ್ಯಾರ್ಥಿ ಶರಣಪ್ಪ ಲಮಾಣಿ ಹಾಗೂ ಬಂಡಿಹರ್ಲಾಪುರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಎಡ್ವರ್ಡ್ ಅನಿಲ್ ಡಾ.ನಿಂಗಪ್ಪ ಕಂಬಳಿ, ಕೃಷ್ಣಮೂರ್ತಿ ಬೇಲೂರು, ಗಡ್ಡೆಪ್ಪ ನೆರವಾಗಿದ್ದಾರೆ ಎಂದು ಕೋಲ್ಕಾರ ತಿಳಿಸಿದ್ದಾರೆ.

## ಚೂರು ಸುದ್ದಿ

### ದೆಹಲಿ ಮೇಯರ್ ಎಲೆಕ್ಷನ್ ಎಎಪಿ ಅಭ್ಯರ್ಥಿ ಒಬೆರಾಯ್‌ಗೆ 150 ಮತಗಳಿಂದ ಗೆಲುವು

**ನವದೆಹಲಿ:** ಮುನ್ಸಿಪಲ್ ಚುನಾವಣೆ ಮುಗಿದ 80 ದಿನಗಳ ನಂತರ ದೆಹಲಿಗೆ ಹೊಸ ಮೇಯರ್ ಆಯ್ಕೆಯಾಗಿದ್ದಾರೆ. ಆಮ್ ಆದ್ಮಿ ಪಕ್ಷದ ಶೆಲ್ಲಿ ಒಬೆರಾಯ್ 150 ಮತ ಪಡೆದು ಮೇಯರ್ ಆಗಿ ಆಯ್ಕೆಯಾಗಿದ್ದು, ಬಿಜೆಪಿಯ ರೇಖಾ ಗುಪ್ತಾ 34 ಮತಗಳಿಂದ ಸೋಲು ಕಂಡಿದ್ದಾರೆ. ದೆಹಲಿಗೆ 10 ವರ್ಷಗಳ ನಂತರ ಮಹಿಳಾ ಮೇಯರ್ ಸಿಕ್ಕಿದ್ದಾರೆ. ಬಿಜೆಪಿಯ ರಜನಿ ಅಬ್ಬಿ 2011ರಲ್ಲಿ ಕೊನೆಯ ಮಹಿಳಾ ಮೇಯರ್ ಆಗಿದ್ದರು. ಇದರ ನಂತರ, 2012ರಲ್ಲಿ ಶೀಲಾ ದೀಕ್ಷಿತ್ ಸರ್ಕಾರದಲ್ಲಿ ದೆಹಲಿಯ ಮುನ್ಸಿಪಲ್ ಕಾರ್ಪೊರೇಶನ್ ಅನ್ನು 3 ಭಾಗಗಳಾಗಿ ವಿಂಗಡಿಸಲಾಯಿತು. ಆದರೆ, 2022ರಲ್ಲಿ ಈ ಭಾಗಗಳು ಮತ್ತೆ ಒಂದಾಗಿದ್ದು ನಂತರ ನಡೆದ ಮೊದಲ ಚುನಾವಣೆ ಇದಾಗಿದೆ. ಮತ್ತೊಂದೆಡೆ ಮೇಯರ್ ಚುನಾವಣೆಯಲ್ಲಿ ಶೆಲ್ಲಿ ಒಬೆರಾಯ್ ಗೆಲುವು ಸಾಧಿಸುತ್ತಿದ್ದಂತೆ ಸಿಎಂ ಅರವಿಂದ್ ಕೇಜ್ರಿವಾಲ್ ಅವರು ಗೂಂಡಾಗಿರಿಗೆ ಸೋಲಾಗಿದ್ದು, ದೆಹಲಿಯ ಜನರು ಗೆದ್ದಿದ್ದಾರೆ ಎಂದು ಹೇಳಿದ್ದಾರೆ. ಎಂಸಿಡಿ ಚುನಾವಣಾ ಫಲಿತಾಂಶ ಕಳೆದ ಡಿಸೆಂಬರ್ 8ರಂದು ನಡೆದಿತ್ತು. 15 ವರ್ಷಗಳ ನಂತರ ಬಿಜೆಪಿ ಮೇಯರ್ ಸ್ಥಾನದಿಂದ ಹೊರಬಂದಿದೆ. ಎಂಸಿಡಿಯಲ್ಲಿ 15 ವರ್ಷಗಳ ನಂತರ ಬಿಜೆಪಿಗೆ ಬಹುಮತ ಸಿಕ್ಕಿಲ್ಲ. 250 ಸ್ಥಾನಗಳ ಮನೆಯಲ್ಲಿ ಮೇಯರ್ ಆಗಲು 138 ಮತಗಳ ಅಗತ್ಯವಿತ್ತು. ಮೇಯರ್ ಚುನಾವಣೆಯಲ್ಲಿ 241 ಕಾರ್ಪೊರೇಟರ್‌ಗಳು, 10 ಸಂಸದರು ಮತ್ತು 14 ಶಾಸಕರು ಮತ ಚಲಾಯಿಸಿದ್ದಾರೆ. 9 ಕಾಂಗ್ರೆಸ್ ಕೌನ್ಸಿಲರ್‌ಗಳು ಚುನಾವಣೆಯಲ್ಲಿ ಭಾಗವಹಿಸಲಿಲ್ಲ.

### ಹಣದುಬ್ಬರ ಭೀತಿ: ಸತತ 4ನೇ ದಿನವೂ ಕುಸಿದ ಷೇರು ಮಾರುಕಟ್ಟೆ: ಸೆನ್ಸೆಕ್ಸ್ 927 ಅಂಕ ಕುಸಿತ

**ಮುಂಬೈ:** ಜಾಗತಿಕ ಹಣದುಬ್ಬರ ಭೀತಿಯ ನಡುವೆಯೇ ಭಾರತೀಯ ಷೇರು ಮಾರುಕಟ್ಟೆ ಸತತ ನಾಲ್ಕನೇ ದಿನವೂ ಕುಸಿತ ಕಂಡಿದ್ದು, ಸೆನ್ಸೆಕ್ಸ್ 927 ಅಂಕ ಕುಸಿತಗೊಂಡಿದೆ.

ವಿಶ್ವಾದ್ಯಂತ ಹಣದುಬ್ಬರ ಹರಡುವ ಭೀತಿಯಿಂದ ಭಾರತ ಸೇರಿದಂತೆ ಜಾಗತಿಕ ಷೇರುಪೇಟೆಗಳು ತತ್ತರಿಸಿದ್ದು, ಸತತ ನಾಲ್ಕನೇ ದಿನವೂ ಕುಸಿತ ಕಂಡಿದೆ. ಬಿಎಸ್‌ಇ ಸೆನ್ಸೆಕ್ಸ್ 927.74 ಪಾಯಿಂಟ್‌ಗಳ ಕುಸಿತದೊಂದಿಗೆ 59,744.98ಕ್ಕೆ ತಲುಪಿದ್ದು, ಇದು ಎಲ್ಲಾ ಪ್ರಮುಖ ಸಂಸ್ಥೆಗಳ ಪುಟ 02

## ಉದಯ ಪಂಚ್ — ಅರ್ಜುನ್

ಕುಣಿಯುತ್ತೆ ಕುರುಡು ಕಾಂಚಾಣ ಈಬಾರಿ ಎಲೆಕ್ಷನ್‌ಗೆ 10 ಸಾವಿರ ಕೋಟಿ. ರೂ.




# ಮತ್ತೊಮ್ಮೆ ಬಿಜೆಪಿ ಗೆಲುವು ಘರ್ಜಿಸಿದ ರಾಜಾಹುಲಿ

**ವಿಧಾನಸಭೆಯಲ್ಲಿ ವಿದಾಯದ ಭಾವುಕ ಭಾಷಣ ಮಾಡಿದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ**

**ಬಿಜೆಪಿ ನನಗೆ ಎಲ್ಲವನ್ನೂ ಕೊಟ್ಟಿದೆ| ನರೇಂದ್ರ ಮೋದಿ ಅಮಿತ್ ಶಾ ಗೆ ನನ್ನ ಮೇಲೆ ವಿಶ್ವಾಸ ಅಪಾರ**

**ಇದು ನನ್ನ ಕೊನೆಯ ಅಧಿವೇಶನ| ಪ್ರತಿಪಕ್ಷ ನಾಯಕ ಸಿದ್ದರಾಮಯ್ಯಗೆ ನಯವಾದ ಮಾತಿನಲ್ಲಿಯೇ ಚುರುಕು**

ಉದಯಕಾಲ ನ್ಯೂಸ್

**ಬೆಂಗಳೂರು :** ಮುಂದಿನ ಚುನಾವಣೆಗೆ ನಾನು ನಿಲ್ಲಲ್ಲ. ನಾನು ಮತ್ತೆ ಈ ಸದನಕ್ಕೆ ಬರುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಭಾವುಕರಾಗಿ ಗದ್ಗದಿತರಾದ ಘಟನೆ ನಡೆದಿದೆ. ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಯಡಿಯೂರಪ್ಪ, ನಾನು ಮತ್ತೆ ಈ ಸದನಕ್ಕೆ ಬರುವುದಿಲ್ಲ, ಈಗಾಗಲೇ ನಾನು ಚುನಾವಣೆಗೆ ನಿಲ್ಲೋದಿಲ್ಲ ಎಂದು ಹೇಳಿದ್ದೇನೆ ಎಂದು ಹೇಳುವಾಗ ಭಾವುಕರಾದರು. ನಂತರ ಮಾತು ಮುಂದುವರೆಸಿದ ಅವರು, ವರಿಷ್ಠರು ನನ್ನನ್ನು ಎಂದೂ ಕಡೆಗಣಿಸಿಲ್ಲ. ಯಡಿಯೂರಪ್ಪಗೆ ಎಲ್ಲ ಗೌರವ ಸ್ಥಾನಮಾನ ಕೊಟ್ಟರು. ಪ್ರಧಾನಿ ನರೇಂದ್ರ ಮೋದಿಯವರು, ಪಕ್ಷ



ಅವಕಾಶ ಕೊಟ್ಟಿದ್ದಕ್ಕೆ ನಾನು 4 ಬಾರಿ ಮುಖ್ಯಮಂತ್ರಿಯಾದೆ. ಪಕ್ಷ ನನಗೆ ಕೊಟ್ಟ ಅವಕಾಶ ಯಾರಿಗೂ ಕೊಟ್ಟಿಲ್ಲ ಎಂದರು. ಚುನಾವಣೆಗೆ ನಿಲ್ಲಲ್ಲ ಎಂದಾಕ್ಷಣ ಯಡಿಯೂರಪ್ಪ ಸುಮ್ಮನೆ ಕೂರಲ್ಲ. ರಾಜ್ಯಾದ್ಯಂತ ಪ್ರವಾಸ ಮಾಡುತ್ತೇನೆ. ಪಕ್ಷವನ್ನು ಅಧಿಕಾರಕ್ಕೆ ತರುತ್ತೇನೆ. ನಾವು ಮತ್ತೆ ಅಧಿಕಾರಕ್ಕೆ ಬರುವುದು ಸೂರ್ಯ ಚಂದ್ರ ಇರುವಷ್ಟೇ ಸತ್ಯ ಎಂದರು. ರಾಜ್ಯದಲ್ಲಿ ಬಿಜೆಪಿ ಗಾಳಿ ಬೀಸುವುದನ್ನು ಆ ಕಡೆ ಕೂತಿರುವ ವಿಪಕ್ಷದವರು ನೋಡುತ್ತಾರೆ. ಕಾಂಗ್ರೆಸ್ ಮತ್ತೆ ವಿಪಕ್ಷ ಸ್ಥಾನದಲ್ಲಿ ಕೂರಬೇಕಾಗುತ್ತದೆ. ನೂರಕ್ಕೆ ನೂರರಷ್ಟು ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಯಡಿಯೂರಪ್ಪ ಪುನರುಚ್ಚರಿಸಿದರು. ಯಡಿಯೂರಪ್ಪನವರ ಮಾತಿನ ಮಧ್ಯೆಯೇ ಎದ್ದುನಿಂತ ಕಾಂಗ್ರೆಸ್‌ನ ಪ್ರಿಯಾಂಕ ಖರ್ಗೆ, ಜೆಡಿಎಸ್‌ನ ಶಿವಲಿಂಗೇಗೌಡ ಸೇರಿದಂತೆ ಹಲವು ಸದಸ್ಯರು ನೀವು ಮತ್ತೆ ಚುನಾವಣೆಗೆ ನಿಲ್ಲಬೇಕು ಎಂದು ಹೇಳಿದರು. ಈ ನಡುವೆಯೇ ಮಾತು ಮುಂದುವರೆಸಿದ ಯಡಿಯೂರಪ್ಪನವರು ಸಿದ್ದರಾಮಯ್ಯನವರು ಬಾದಾಮಿ ಕ್ಷೇತ್ರದಿಂದ ಗೆದ್ದು ಬಂದಿದ್ದಾರೆ. ಅಲ್ಲಿಯೇ ಸ್ಪರ್ಧೆ ಮಾಡಬೇಕು. ನೀವು ಗೆದ್ದ ಕ್ಷೇತ್ರದಲ್ಲಿ ನಿಲ್ಲಲ್ಲ ಎಂದರೆ ಜನ ಹೇಗೆ ನಂಬುತ್ತಾರೆ. ನೀವು ಗೆದ್ದ ಕ್ಷೇತ್ರದಲ್ಲಿ ನಿಲ್ಲಿ ಎಂದು ಕಿವಿಮಾತು ಹೇಳಿದರು.

ರಾಜ್ಯದ ಬಜೆಟ್ ಎಲ್ಲ ವರ್ಗದ ಜನರನ್ನು ತಲುಪುವ ಬಜೆಟ್ ಆಗಿದೆ. ಪ್ರಾದೇಶಿಕ ಅಸಮಾನತೆ ನಿವಾರಣೆ ಮಾಡುವ ಪ್ರಯತ್ನಗಳು ಬಜೆಟ್‌ನಲ್ಲಿ ಆಗಿವೆ. ಡಬಲ್ ಇಂಜಿನ್ ಸರ್ಕಾರದ ಬಗ್ಗೆ ಸಿದ್ದರಾಮಯ್ಯ ಮಾತನಾಡಿದ್ದಾರೆ. ಮೋದಿಯವರು ಇದ್ದಿದ್ದಕ್ಕೆ ದೇಶ ಸದೃಢವಾಗಿದೆ. ಮೋದಿ ವಿಶ್ವಗುರು ಆಗಿದ್ದಾರೆ ಎಂದರು.ರಾಜ್ಯದ ಬಿಜೆಪಿ ಸರ್ಕಾರ ಉತ್ತಮ ಆಡಳಿತ ಕೊಟ್ಟಿದೆ. ನಮ್ಮ ಆಡಳಿತದಲ್ಲಿ ರಾಜ್ಯ ವಿಕಾಸ ಹೊಂದಿದೆ ಎಂದು ಯಡಿಯೂರಪ್ಪ ಹೇಳಿದರು.

## ಜೆ.ಪಿ.ನಡ್ಡಾಗೆ ರಾಜಕೀಯ ಜ್ಞಾನ ಇಲ್ಲ: ಸಿದ್ದರಾಮಯ್ಯ ಟೀಕೆ

ಉದಯಕಾಲ ನ್ಯೂಸ್

**ಚಿತ್ರದುರ್ಗ:** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳೀನ್ ಕುಮಾರ್ ಕಟೀಲ್‌ಗೆ ರಾಜಕೀಯ ಪರಿಜ್ಞಾನ ಇಲ್ಲ ಅಂದುಕೊಂಡಿದ್ದೆ. ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೂ ಸಹ ರಾಜಕೀಯ ಜ್ಞಾನ ಇಲ್ಲ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವ್ಯಂಗ್ಯ ಮಾಡಿದರು.

ಕಾಂಗ್ರೆಸ್ ಪಕ್ಷಕ್ಕೆ ಸಿದ್ಧಾಂತ ಇಲ್ಲ, ಸಿದ್ದರಾಮಯ್ಯ ಕಡು ಭ್ರಷ್ಟ ಎಂಬ ಜೆ.ಪಿ.ನಡ್ಡಾ ಅವರ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಬಿಜೆಪಿಗೆ



ಸಿದ್ಧಾಂತ ಇಲ್ಲ. ಜನರನ್ನು ಪ್ರಚೋದಿಸಿ, ದ್ವೇಷದ ರಾಜಕಾರಣ ಮಾಡುವುದು ಹಾಗೂ ಸಿದ್ದರಾಮಯ್ಯ ಅವರನ್ನು ಮುಗಿಸಿ ಎನ್ನುವುದು ಸಿದ್ಧಾಂತವಾ ಎಂದು ಪ್ರಶ್ನಿಸಿದರು.

ಗೃಹ ಸಚಿವ ಅಮಿತ್ ಶಾ, ಪ್ರಧಾನಿ ನರೇಂದ್ರ ಮೋದಿ ಸೇರಿ ಬಿಜೆಪಿಯ ರಾಷ್ಟ್ರೀಯ ನಾಯಕರು ನೂರು ಬಾರಿ ಕರ್ನಾಟಕಕ್ಕೆ ಬಂದರೂ ಪ್ರಯೋಜನವಾಗದು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಲು ಸಾಧ್ಯವಿಲ್ಲ. ರಾಜ್ಯದ ಜನರು ಈಗಾಗಲೇ ತೀರ್ಮಾನ ಮಾಡಿದ್ದಾರೆ. ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಭಾರೀ ಅವ್ಯವಹಾರ ಆಗಿದ್ದರೆ ತನಿಖೆ ಮಾಡಿಸಿ. ನಮ್ಮ ಕಾಲದಲ್ಲಿ ಭ್ರಷ್ಟಾಚಾರ ನಡೆದಿದೆ ಎನ್ನುವ ದಾಖಲೆ ಇದ್ದರೆ ಕ್ರಮ ಕೈಗೊಳ್ಳಿ. ಸರ್ಕಾರ ನಿಮ್ಮದೇ ಇದೆ, ನೀವೇ ಅಧಿಕಾರದಲ್ಲಿದ್ದೀರಿ, ನಿಮ್ಮ ಕೈ ಯಾರು ಹಿಡಿದಿದ್ದಾರೆ, ಯಾಕೆ ಹಿಂದೇಟು ಹಾಕುತ್ತೀರಿ ಎಂದು ಪ್ರಶ್ನಿಸಿದರು. ಎಲ್ಲ ಜಾತಿ ಧರ್ಮಗಳ ಬಗ್ಗೆ ಗೌರವ ಇಟ್ಟುಕೊಂಡಿರುವವರು ನಾವು. ನಾವು ಯಾರ ಓಲೈಕೆಯನ್ನೂ ಮಾಡುವುದಿಲ್ಲ. ಮನುಷ್ಯತ್ವದ ರಾಜಕಾರಣ ಮಾಡುತ್ತೇವೆ. ಹಿಂದೂ, ಮುಸ್ಲಿಂ ಎಲ್ಲರೂ ಮನುಷ್ಯರು. ಅನ್ನಭಾಗ್ಯ, ಕ್ಷೀರ ಭಾಗ್ಯ ಯೋಜನೆಗಳನ್ನು ಎಲ್ಲ ಜಾತಿಯ ಬಡವರಿಗೆ ಕೊಟ್ಟಿದ್ದೇವೆ. ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಇವೆಲ್ಲ ಗೊತ್ತಾಗುವುದಿಲ್ಲ ಎಂದರು.

## ಬಾಡೂಟ ಸವಿದು ದೇಗುಲ ಪ್ರವೇಶ?!

**ಸಿ.ಟಿ.ರವಿ ವಿರುದ್ಧ ಹಿಂದೂ ಧರ್ಮದ ಸಂಪ್ರದಾಯ ಉಲ್ಲಂಘನೆ ಆರೋಪ**

ಉದಯಕಾಲ ನ್ಯೂಸ್

**ಕಾರವಾರ:** ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಚಿಕ್ಕಮಗಳೂರು ಶಾಸಕ ಸಿ.ಟಿ ರವಿ ಅವರು ಮಾಂಸದೂಟ ಮಡಿ ನಾಗಬನ ಮತ್ತು ಹನುಮ ದೇಗುಲಕ್ಕೆ ಭೇಟಿ ನೀಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಈ ತಿಂಗಳ 19ರಂದು ಭಾನುವಾರ ಉತ್ತರ ಕನ್ನಡ ಜಿಲ್ಲೆಗೆ ಸಿ.ಟಿ.ರವಿ ಭೇಟಿ ನೀಡಿದ್ದರು. ಈ ವೇಳೆ, ಕಾರವಾರದ ಶಿವಾಜಿ ಜಯಂತಿಯಲ್ಲಿ ಭಾಗವಹಿಸಿ ಭಟ್ಕಳಕ್ಕೂ ಹೋಗಿದ್ದರು. ಭಟ್ಕಳದ ಶಿರಾಲಿಯಲ್ಲಿರುವ ಶಾಸಕ ಸುನಿಲ್ ನಾಯ್ಕ್ ಮನೆಯಲ್ಲಿ ಸಿ.ಟಿ.ರವಿ ಬಾಡೂಟ ಸವಿದಿದ್ದರು ಎನ್ನಲಾಗಿದೆ. ಬಾಡೂಟ ಸವಿದಿರುವ ಫೋಟೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಬಾಡೂಟ ಸವಿದು ಭಟ್ಕಳ ನಗರದ ಹಳೇ ಬಸ್ ನಿಲ್ದಾಣ ಸಮೀಪ ಇರುವ ನಾಗಬನ ಹಾಗೂ ಕರಿಬಂಟ ಹನುಮ ದೇವಸ್ಥಾನಕ್ಕೆ ಸಿ.ಟಿ.ರವಿ ಭೇಟಿ ನೀಡಿದ್ದರು. ಭಟ್ಕಳ ಶಾಸಕ ಸುನಿಲ್ ನಾಯ್ಕ್ ಹಾಗೂ ದೇವಸ್ಥಾನದ ಕಮಿಟಿ ಸದಸ್ಯರೊಂದಿಗೆ ದೇವಸ್ಥಾನಕ್ಕೆ ತೆರಳಿದ್ದರು ಎಂದು ಹೇಳಲಾಗುತ್ತಿದೆ.

ನಾಗಬನದ ಬಾಗಿಲು ಹಾಕಿದ್ದರಿಂದ ಗೇಟ್ ಮುಂಭಾಗದಲ್ಲಿ ದೇವರಿಗೆ ಸಿ.ಟಿ.ರವಿ ನಮಸ್ಕಾರ ಸಲ್ಲಿಸಿದ್ದರು. ನಂತರ ಗೇಟ್ ಮುಂಭಾಗದಲ್ಲಿಯೇ ಶಾಸಕ ಸುನಿಲ್ ನಾಯ್ಕ ಹಾಗೂ



ಕಮಿಟಿ ಸದಸ್ಯರು ಸಿ.ಟಿ.ರವಿ ಅವರನ್ನು ಸನ್ಮಾನಿಸಿದ್ದರು.

ಈ ಹಿಂದೆ ಮಾಂಸ ಸೇವನೆ ಮಾಡಿ ದೇವಾಲಯದೊಳಗೆ ಪ್ರವೇಶ ಮಾಡಿದ್ದ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಭಾರಿ ವಿರೋಧ ಎದುರಿಸಿದ್ದರು. ಈಗ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರು ಶಾಸಕರೊಬ್ಬರ ಮನೆಯಲ್ಲಿ ಭರ್ಜರಿ ಬಾಡೂಟ ಸವಿದು ದೇವಾಲಯ ಪ್ರವೇಶ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಹಿಂದೂ ಧರ್ಮದ ಬಗ್ಗೆ ಮಾತನಾಡುವ ರವಿ ಅವರು ಧರ್ಮದ ಆಚಾರ, ವಿಚಾರಗಳು ಹಾಗೂ ಸಂಪ್ರದಾಯ ಉಲ್ಲಂಘನೆ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈಗ ಉತ್ತರಕನ್ನಡ ಜಿಲ್ಲೆಯಾದ್ಯಂತ ಸಿ.ಟಿ.ರವಿ ಅವರ ಬಾಡೂಟ ಹಾಗೂ ದೇವಾಲಯ ಪ್ರವೇಶದ ಬಗ್ಗೆಯೇ ಚರ್ಚೆಯಾಗುತ್ತಿದೆ.

## ಕೋಮುಗಲಭೆಗೆ ಬುನಾದಿ ಹಾಕಿದ್ದು ಸಿದ್ಧರಾಮಯ್ಯ: ಶೋಭಾ ಕರಂದ್ಲಾಜೆ

**ಕೊಪ್ಪಳ:** ಟಿಪ್ಪು ಜಯಂತಿ ಮಾಡುವ ಮೂಲಕ ರಾಜ್ಯದಲ್ಲಿ ಕೋಮುಗಲಭೆ ಪ್ರಚೋದನೆಗೆ ಬುನಾದಿ ಹಾಕಿದ್ದು ಸಿದ್ದರಾಮಯ, ಮುಸ್ಲಿಂ ಸಮುದಾಯದಲ್ಲಿ ವ್ಯಕ್ತಿ ಪೂಜೆ ಇಲ್ಲದಿದ್ದರೂ ಮತ ಬ್ಯಾಂಕ್ ರಾಜಕಾರಣಕ್ಕೆ ಟಿಪ್ಪು ಜಯಂತಿ ಆಚರಿಸಿದರು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಟೀಕಿಸಿದರು.

ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು ಯಾವ ಮುಸ್ಲಿಮರೂ ಟಿಪ್ಪು ಜಯಂತಿ ಮಾಡುವಂತೆ ಕೇಳಿರಲಿಲ್ಲ. ಆದರೂ ಜಯಂತಿ ಮಾಡಿದರು. ವೀರಶೈವ ಲಿಂಗಾಯತರನ್ನು ಒಡೆಯಲು



ಯತ್ನಿಸಿದರು. ಶಾಲಾ ಮಕ್ಕಳಲ್ಲಿ ಜಾತಿಯ ವಿಷಬೀಜ ಬಿತ್ತಿದರು. ಒಂದು ವರ್ಗಕ್ಕೆ ಮಾತ್ರ ಶಾದಿ ಭಾಗ್ಯ ಕೊಟ್ಟಿದ್ದು ಯಾಕೆ? ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಸಮುದಾಯದವರಲ್ಲಿ ಬಡ ಜನರು ಇಲ್ಲವಾ ಪುಟ 02

# ನಾಡ ಕಚೇರಿಗಳಲ್ಲೂ ಕಾಗದ ರಹಿತ ವ್ಯವಸ್ಥೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

**ಗ್ರಾಮ ಒನ್ ಯೋಜನೆಯ ವಾರ್ಷಿಕೋತ್ಸವ| ಕಾರ್ಯಕರ್ತರಿಗೆ ಜಿಲ್ಲಾವಾರು ಪ್ರಶಸ್ತಿ**

ಉದಯಕಾಲ ನ್ಯೂಸ್

**ಬೆಂಗಳೂರು :** ತಂತ್ರಜ್ಞಾನ ಮತ್ತು ಸೇವಾ ಮನೋಭಾವ ಜೊತೆಗೂಡಿದರೆ, ದೇಶದಲ್ಲಿ ಸರ್ಕಾರದ ವ್ಯವಸ್ಥೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯರಲ್ಲಿ ಸಾಮಾನ್ಯರಿಗೆ ತಲುಪಿಸಲು ಸಾಧ್ಯ ಎನ್ನುವುದನ್ನು ಗ್ರಾಮ ಒನ್ ಕಾರ್ಯಕ್ರಮದ ಯಶಸ್ಸು ನಿರೂಪಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಕಾಸಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದ ಗ್ರಾಮ ಒನ್ ಯೋಜನೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮ ಒನ್ ಸೇವೆ, ಜೀವನೋಪಾಯ ಹಾಗೂ ಜ್ಞಾನಾರ್ಜನೆಗೆ ಮೂಲ



ಯಾವುದಾದರೂ ಒಂದು ವ್ಯವಸ್ಥೆಗೆ ಚಲನಾಶೀಲವಾದ ಶಕ್ತಿಯಿದ್ದರೆ ವೇಗವಾಗಿ ಮುಂದುವರೆಸಿಕೊಂಡು ಹೋಗಬಹುದು. ನಿಂತಲ್ಲೇ ನಿಂತರೆ ತುಕ್ಕು ಹಿಡಿಯುತ್ತದೆ. ಪುಟ 02

### ಗ್ರಾಮ ಒನ್ ಸರ್ಕಾರ ಮತ್ತು ಜನಸಾಮಾನ್ಯರ ಕೊಂಡಿ

ಗ್ರಾಮ ಒನ್ ಕಾರ್ಯಕರ್ತರಿಗೆ ಜಿಲ್ಲಾವಾರು ಪ್ರಶಸ್ತಿಗಳನ್ನು ನೀಡಲು ಸರ್ಕಾರ ತೀರ್ಮಾನ ಮಾಡಿದೆ. ಕಾರ್ಯಕರ್ತರು ತಮ್ಮ ಅನುಭವಗಳನ್ನು ದಾಖಲಿಸಬೇಕು. ಶೇ.10ರಷ್ಟು ಕೆಲಸವನ್ನು ಹೆಚ್ಚಿಸುವ ನಿರ್ಧಾರ ಮಾಡಬೇಕು. ಗ್ರಾಮ ಒನ್ ಇತರೆ ರಾಜ್ಯಗಳಲ್ಲಿಯೂ ಪ್ರಾರಂಭವಾಗುತ್ತಿರುವುದು ಉತ್ತಮ ಬೆಳವಣಿಗೆ. ಸಮಾಜದಲ್ಲಿ ಹೊಸ ಯುವಕರ ಪಡೆ ಇದೆ. ಸರ್ಕಾರ ಮತ್ತು ಜನಸಾಮಾನ್ಯರ ನಡುವೆ ದಕ್ಷತೆಯಿಂದ ಕೊಂಡಿಯಂತೆ ಕೆಲಸ ಮಾಡುವ ವ್ಯವಸ್ಥೆ ಇದೆ ಎನ್ನುವ ಬಗ್ಗೆ ಜನರಲ್ಲಿ ವಿಶ್ವಾಸ ಮೂಡುತ್ತದೆ ಎಂದರು. ಘರ್ಷಣೆಗಳಿಲ್ಲದಂತೆ ಕೆಲಸ ಮಾಡುವಂತಾಗಬೇಕು. ಆರು ತಾಲ್ಲೂಕುಗಳನ್ನು ಸಂಪೂರ್ಣವಾಗಿ ಕಾಗದ ರಹಿತ ಕಚೇರಿಗಳನ್ನಾಗಿ ಮಾಡಲು ಪ್ರಾಯೋಗಿಕವಾಗಿ ಕೈಗೊಂಡಿದ್ದು, ನಾಡಕಚೇರಿಗಳನ್ನೂ ಕಾಗದ ರಹಿತ ಕಚೇರಿಗಳನ್ನಾಗಿಸಲಾಗುವುದು. ಸರ್ವರ್ ಸಾಮರ್ಥ್ಯವನ್ನು ಹೆಚ್ಚಿಸಲು ಅನುಮತಿ ನೀಡಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ಆಡಳಿತ ಸುಧಾರಣೆಯಾದರೆ ಎಲ್ಲರೂ ಯಶಸ್ವಿಯಾಗುತ್ತೇವೆ. ಅಧಿಕಾರದ ವಿಕೇಂದ್ರೀಕರಣದೊಂದಿಗೆ ಸೇವೆಗಳ ವಿಕೇಂದ್ರೀಕರಣವೂ ಆಗಬೇಕು ಎಂದ ಮುಖ್ಯಮಂತ್ರಿಗಳು ಅಸಾಧ್ಯ ಎನ್ನುತ್ತಿದ್ದ ಕೆಲಸಗಳನ್ನು ಮಧ್ಯವರ್ತಿಗಳ ಹಾವಳಿ ಇಲ್ಲದೇ ಸರ್ಕಾರದ ಕೆಲಸಗಳನ್ನು ಜನರಿಗೆ ತಲುಪಿಸುತ್ತಿರುವುದಕ್ಕಾಗಿ ಅಭಿನಂದಿಸಿದರು.

## ಮೊದಲನೇ ಪುಟದಿಂದ...

### ಹಣದುಬ್ಬರ ಭೀತಿ: ಸತತ 4ನೇ ದಿನವೂ ಕುಸಿದ ಷೇರು ಮಾರುಕಟ್ಟೆ: ಸೆನ್ಸೆಕ್ಸ್ 927 ಅಂಕ ಕುಸಿತ

ಷೇರುಗಳ ಭಾರೀ ನಷ್ಟಕ್ಕೆ ಕಾರಣವಾಯಿತು.

ಬಿಎಸ್‌ಇ ಸೆನ್ಸೆಕ್ಸ್‌ನಲ್ಲಿ ಒಳಗೊಂಡಿರುವ 30 ಷೇರುಗಳಲ್ಲಿ ಒಂದು ಮಾತ್ರ ಲಾಭಾಂಶ ಕಾಣುವಲ್ಲಿ ಯಶಸ್ವಿಯಾಗಿದ್ದು, ಐಟಿಸಿ ಷೇರುಗಳು ಇಂದು ಅಲ್ಪ ಏರಿಕೆ ಕಂಡಿವೆ. ಅಮೆರಿಕದಲ್ಲಿ ಹಣದುಬ್ಬರದ ಹೆಚ್ಚಳದ ದೃಷ್ಟಿಯಿಂದ, ಅಮೆರಿಕ ಫೆಡರಲ್ ರಿಸರ್ವ್ ಮತ್ತೊಮ್ಮೆ ಬಡ್ಡಿದರಗಳಲ್ಲಿ ದೊಡ್ಡ ಹೆಚ್ಚಳ ಮಾಡುವ ಮುನ್ಸೂಚನೆ ನೀಡಿದೆ. ಗೋಲ್ಡ್ಮನ್ ಸ್ಯಾಚ್ಸ್ ಪ್ರಕಾರ, ಅಮೆರಿಕ ಸೆಂಟ್ರಲ್ ಬ್ಯಾಂಕ್ ಈ ಬಾರಿಯೂ 75 ಬೇಸಿಸ್ ಪಾಯಿಂಟ್‌ಗಳವರೆಗೆ ಬಡ್ಡಿದರಗಳನ್ನು ಹೆಚ್ಚಿಸಬಹುದು. ಇದರ ಪರಿಣಾಮ ಮಂಗಳವಾರ ಅಮೆರಿಕದ ಮಾರುಕಟ್ಟೆ ಮೇಲೆ ಪರಿಣಾಮ ಕಂಡುಬಂದಿದೆ. ಡೌ ಜೋನ್ಸ್ 697.1 ಪಾಯಿಂಟ್ ಅಥವಾ 2.06 ಶೇಕಡಾ ಕುಸಿದು 33,129.59 ಕ್ಕೆ ತಲುಪಿದ್ದು, ಎಸ್ ಪಿ 500 ಸೂಚ್ಯಂಕವು 81.75 ಪಾಯಿಂಟ್‌ಗಳು ಅಥವಾ ಶೇಕಡಾ 2ರಷ್ಟು ಕುಸಿದು 3,997.34 ಕ್ಕೆ ತಲುಪಿದೆ. ಅಂತೆಯೇ, ನಾಸ್ಡಾಕ್ 294.97 ಪಾಯಿಂಟ್‌ಗಳು ಅಥವಾ 2.5 ಶೇಕಡಾ ಕಡಿಮೆಯಾಗಿ 11,492.30 ಕ್ಕೆ ಕೊನೆಗೊಂಡಿತು.

### ಕೋಮುಗಲಭೆಗೆ ಬುನಾದಿ ಹಾಕಿದ್ದು ಸಿದ್ಧರಾಮಯ್ಯ: ಶೋಭಾ ಕರಂದ್ಲಾಜೆ

ಅವರಿಗೇಕೆ ಭಾಗ್ಯಗಳನ್ನು ನೀಡಲಿಲ್ಲ. ವಿವಿಧ ಪ್ರಕರಣಗಳಲ್ಲಿ ಬಂಧಿತರಾಗಿದ್ದ ಪಿಎಫ್‌ಐ ಕಾರ್ಯಕರ್ತರನ್ನು ಬಿಡುಗಡೆ ಮಾಡಿಸಿದರು. ಮತಕ್ಕಾಗಿ ಓಲೈಕೆ ರಾಜಕಾರಣ ಮಾಡಿದರು ಎಂದು ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದರು.

ಎಲ್ಲ ಪಕ್ಷಗಳಿಗೆ ಅವರದ್ದೇ ಆದ ತತ್ವ ಹಾಗೂ ಸಿದ್ಧಾಂತಗಳಿವೆ. ಅದಕ್ಕೆ ತಕ್ಕಂತೆ ಮಾತನಾಡಬೇಕು. ಯಾರೇ ಆಗಲಿ ಕೊಲ್ಲುವ ಬಗ್ಗೆ ಮಾತಾಡಬಾರದು. ಅದನ್ನು ಒಪ್ಪುವುದಿಲ್ಲ. ಅಶ್ವತ್ಥ ನಾರಾಯಣ ಅವರು ಸಿದ್ದರಾಮಯ್ಯ ಅವರನ್ನು ಟಿಪ್ಪು ಕೊಂದಂತೆಯೇ ಕೊಲೆಮಾಡಬೇಕು ಎಂದು ನೀಡಿದ ಹೇಳಿಕೆ ಸರಿಯಲ್ಲ. ಇದು ನಮ್ಮಪಕ್ಷದ ಸಿದ್ಧಾಂತ ಅಲ್ಲ. ಅಶ್ವತ್ಥನಾರಾಯಣ ಹೇಳಿಕೆ ತಪ್ಪು ಎಂದರು.

### ನಾಡ ಕಚೇರಿಗಳಲ್ಲೂ ಕಾಗದ ರಹಿತ ವ್ಯವಸ್ಥೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಸರ್ಕಾರದ ಚಕ್ರ ನಿರಂತರವಾಗಿ ಚಲಿಸಲು ಕೆಳಹಂತದ ಕೆಲಸಗಳು ಸರಿಯಾಗಿ ನಡೆಯಬೇಕು. ಜನರ ಬೇಕುಬೇಡಗಳ ಆಧಾರದ ಮೇಲೆ ಬಹಳಷ್ಟು ಸೇವೆಗಳು ಒದಗಿಸಲಾಗುತ್ತಿದೆ ಎಂದರು.

ಸರ್ಕಾರ ತನ್ನ ವ್ಯವಸ್ಥೆಯಲ್ಲಿದ್ದ ಕೆಲವು ಅಧಿಕಾರವನ್ನು ನೀಡಲಾಗಿದೆ. ವ್ಯವಸ್ಥೆ ಯಶಸ್ವಿಯಾಗಲು ಸೇವಾ ಮನೋಭಾವ ಮುಖ್ಯ. ಮನೆ ಮನೆಗೆ ಸೇವೆ ತಲುಪಿಸುವ ಉದ್ದೇಶದಿಂದ ಯೋಜನೆ ಜಾರಿಯಾಗಿದ್ದು, ಸೇವೆ ಸೇವೆಯಾಗಿಯೇ ಉಳಿಯಬೇಕು. ಸೇವಾ ಮನೋಭಾವವನ್ನು ಮನಸ್ಸಿನಿಂದ ತೆಗೆಯಬಾರದು ಮಾಡಿದಾಗ ಹೆಚ್ಚಿನ ಸೇವೆ ನೀಡಲು ಸಾಧ್ಯವಿದೆ. ಜನರು ಹಳೆಯ ವ್ಯವಸ್ಥೆಯ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ. ಇದು ಸೇವೆಗೆ, ಜೀವನೋಪಾಯಕ್ಕೆ ಅವಕಾಶವಾಗಿದೆ. ಜ್ಞಾನಾರ್ಜನೆಗೆ ಕೂಡ ಮೂಲವಾಗಿದೆ. ಸೇವೆಗಳನ್ನು ನೀಡಲು ನಿಮ್ಮನ್ನು ಸಬಲರಾಗಿಸಲಾಗಿದೆ. ಕಾನೂನಿನ ವ್ಯಾಪ್ತಿಯಲ್ಲಿಯೇ ಕೆಲಸ ಮಾಡಬೇಕು. ಜ್ಞಾನವಿದ್ದಲ್ಲಿ ಸಬಲೀಕರಣವಾಗುತ್ತದೆ ಎಂದರು.

ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಒನ್ ಜಾರಿಯಲ್ಲಿದೆ. ಗ್ರಾಮ್ ಒನ್ ಕೇಂದ್ರದಿಂದ ಬಂದ ಅರ್ಜಿಗಳು ವಿಲೇವಾರಿ ಆಗಲು ವಿಳಂಬವಾದರೆ ತಹಸಿಲ್ದಾರ ಕಚೇರಿಗೂ ಇದಕ್ಕೂ ವ್ಯತ್ಯಾಸ ಇರುವುದಿಲ್ಲ. ಪ್ರಾಮಾಣಿಕತೆಯಿಂದ, ದಕ್ಷತೆಯಿಂದ, ವೇಗವಾಗಿ ಕೆಲಸಮಾಡಬೇಕು ಎಂದರು.

ಜನಪರ ವ್ಯವಸ್ಥೆ ನಿರ್ಮಿಸಬೇಕು

ಗ್ರಾಮ ಒನ್‌ನಿಂದ ಉತ್ತಮ ಕೆಲಸಗಳಾಗುತ್ತಿರುವ ಬಗ್ಗೆ ಮಾಹಿತಿಯಿದ್ದು, ಜನಸ್ನೇಹಿಯಾಗಿ ಕೆಲಸ ಮಾಡುತ್ತಿರುವುದರಿಂದ ಜನರಲ್ಲಿ ವಿಶ್ವಾಸ ಮೂಡಿದೆ. ಒಂದು ವರ್ಷದಲ್ಲಿ ಒಂದೂವರೆ ಕೋಟಿಯಾಗಿರುವ ಮುಂದಿನ ವರ್ಷದಲ್ಲಿ ಮೂರು ಕೋಟಿ ತಲುಪುವ ಗುರಿಯನ್ನು ಹಾಕಿಕೊಳ್ಳಬೇಕು. ಜನಪರವಾಗಿರುವ, ಜನರಿಗಾಗಿ ವ್ಯವಸ್ಥೆ ಆಗಬೇಕು. ವ್ಯಾಪಕವಾಗಿ, ಯಶಸ್ವಿಯಾಗಿ, ಸಮರ್ಪಕವಾಗಿ ಕೆಲಸಗಳಾದಾಗ ಒಂದು ವ್ಯವಸ್ಥೆ ನಿರ್ಮಾಣವಾಗುತ್ತದೆ. ಅಂಥ ವ್ಯವಸ್ಥೆಯನ್ನು ಎಲ್ಲರೂ ಹುಟ್ಟುಹಾಕಬೇಕೆಂದು ಕರೆ ನೀಡಿದರು.

ಗ್ರಾಮ ಒನ್ ಕ್ರಾಂತಿಕಾರಿ ಯೋಜನೆ

ಇದಕ್ಕೆ ಅರ್ಥಿಕವಾಗಿ ಇನ್ನಷ್ಟು ಬಲ ಕೊಡುವ ಕೆಲಸ ಮಾಡಲಾಗುವುದು. ತಂತ್ರಜ್ಞಾನ ಕ್ರಾಂತಿಯಾಗಿದೆ. ಜನರಿಗೆ ಸರಳವಾಗಿ ಸೇವೆಗಳು ಸಿಗುವಂತೆ ಮಾಡಲಾಗುವುದು. ಗ್ರಾಮ ಒನ್ ಕೇಂದ್ರಗಳಲ್ಲಿ ಇನ್ನಷ್ಟು ಸೇವೆಗಳು, ಅಂತರ್ಜಾಲಕ್ಕೆ ವೇಗ, ಮೆಮರಿ ಹೆಚ್ಚಳ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಗ್ರಾಮ ಒನ್ ಕ್ರಾಂತಿಕಾರಿ ಯೋಜನೆ. ಸರ್ಕಾರವನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ದಿದೆ ಎಂದರು.

ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮ ಒನ್ ಅನಿವಾರ್ಯ

ಗ್ರಾಮ ಒನ್ ಸೇವೆಯಿಂದ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಗ್ರಾಮ ಒನ್ ಕಾರ್ಯಕರ್ತ ಪರಿಶ್ರಮದಿಂದ, ವಿನೂತನವಾಗಿ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಸಮಯಕ್ಕೆ ತಕ್ಕ ಸ್ಪಂದನೆ, ಉತ್ಸಾಹ, ಪರಿಶ್ರಮದಿಂದ ಆಡಳಿತ ವ್ಯವಸ್ಥೆ ಯಶಸ್ವಿಯಾಗುತ್ತದೆ. ಮುಂದಿನ ಐದು ವರ್ಷದಲ್ಲಿ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮ ಒನ್ ಅನಿವಾರ್ಯವಾಗಲಿದೆ. ಗ್ರಾಮ ಒನ್ ಗೆ ಶಕ್ತಿ ತುಂಬಲಾಗುವುದು. ಕಟ್ಟಕಡೆಯ ವ್ಯಕ್ತಿಗೆ ಸರ್ಕಾರದ ಸೇವೆಗಳನ್ನು ತಲುಪಿಸುವುದು ಸರ್ಕಾರದ ಗುರಿ ಎಂದರು.

ಬಡವರ ಸೇವೆಗೆ ಆದ್ಯತೆ ನೀಡಿ

ಗ್ರಾಮ ಒನ್ ವ್ಯವಸ್ಥೆಯಲ್ಲಿ ಬಹಳಷ್ಟು ಜನರ ಪರಿಶ್ರಮವಿದೆ. ನಿಮ್ಮ ಮಟ್ಟದಲ್ಲಿ ಸೇವೆಯನ್ನು ಸುಧಾರಿಸಿ ಉತ್ತಮಗೊಳಿಸಲು ಪ್ರಯತ್ನಿಸಿ. ನಿಮ್ಮ ದಿನನಿತ್ಯದ ಕೆಲಸದೊಂದಿಗೆ ಕನಿಷ್ಟ 10%ರಷ್ಟು ಹೆಚ್ಚು ಕೆಲಸವನ್ನು ಮಾಡಲು ಪ್ರಯತ್ನಿಸಿ, ಹೊಸ ಸೇವೆಗಳನ್ನು ಗ್ರಾಮ ಒನ್ ಸೇವೆಯಲ್ಲಿ ಸೇರಿಸಲು ಪ್ರಯತ್ನಿಸಿ. ಸಮಾಜದಲ್ಲಿ ಸರ್ಕಾರ ಮತ್ತು ಜನರ ನಡುವೆ ಸೇತುವಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸುವ ಯುವಪಡೆ ನೀವಾಗಿದ್ದೀರಿ. ಕೆಲಸವನ್ನು ಮಾಡದಿರಲು ನೂರಾರು ಕಾರಣಗಳಿರಬಹುದು. ಆದರೆ ಬಡವರಿಗೆ ಸೇವೆ ಸಲ್ಲಿಸಲು ಒಂದು ಸಕಾರಣ ಸಾಕು. ಬಡವರಿಗೆ , ಕಷ್ಟದಲ್ಲಿರುವವರಿಗೆ ಮಾನವೀಯತೆಯಿಂದ ಸ್ಪಂದಿಸಿ, ಅವರ ಸೇವೆ ನೀಡಲು ಆದ್ಯತೆ ನೀಡಬೇಕೆಂದು ಗ್ರಾಮ ಒನ್ ಕಾರ್ಯಕರ್ತರಿಗೆ ಸಲಹೆ ನೀಡಿದರು.

# ಜಲಾಧಿವಾಸದಲ್ಲಿದ್ದ ವಿಷ್ಣು ವಿಗ್ರಹ ಪತ್ತೆ

ಉದಯಕಾಲ ನ್ಯೂಸ್

**ತುಮಕೂರು:** ತುರುವೇಕೆರೆ ತಾಲೂಕಿನ ಮಾಯಸಂದ್ರ ಹೋಬಳಿಯ ಗುಡ್ಡೇನಹಳ್ಳಿ ಗ್ರಾಮದ ಹೊರವಲಯದಲ್ಲಿ ಇರುವ ಶಿಂಷಾ ನದಿಯ ತಟದಲ್ಲಿ ಬುಧವಾರ ಬೆಳಗ್ಗೆ ಬಳಪದ ಕಲ್ಲಿನಲ್ಲಿ ಕೆತ್ತಲಾಗಿರುವ ವಿಷ್ಣುವಿನ ವಿಗ್ರಹವೊಂದು ಪತ್ತೆಯಾಗಿದೆ.

ಬುಧವಾರ ಬೆಳಗ್ಗೆ ಎಂದಿನಂತೆ ಗುಡ್ಡೇನಹಳ್ಳಿ ಗ್ರಾಮದ ಯೋಗೀಶ್ ಎಂಬುವವರು ತಮ್ಮ ತೋಟದ ಸಾಲಿಗೆ ತೆರಳಿದ್ದರು. ಆ ವೇಳೆ ತಮ್ಮ ಜಮೀನಿನ ಬಳಿ ಇದ್ದ ತೊರೆಯ ಬಳಿಯೂ ಹೋಗಿದ್ದರು. ಆ ವೇಳೆ ನೀರಿನೊಳಗೆ ಸುಮಾರು ನಾಲ್ಕು ಎತ್ತರದ ವಿಷ್ಣುವಿನ ವಿಗ್ರಹ ಇರುವುದು ಕಂಡುಬಂದಿದೆ. ಕೂಡಲೇ ತಮ್ಮ ಗ್ರಾಮದ ಯುವಕರಿಗೆ ಸುದ್ದಿ ಮುಟ್ಟಿಸಿದರು. ಕೂಡಲೇ ಟ್ರ್ಯಾಕ್ಟರ್ ಸಹಾಯದಿಂದ ಗ್ರಾಮದ ಆಂಜನೇಯ ದೇವಾಲಯಕ್ಕೆ ಈ ವಿಗ್ರಹವನ್ನು ಸ್ಥಳಾಂತರಿಸಲಾಯಿತು.

ಆಶ್ಚರ್ಯ ತಮ್ಮ ಗ್ರಾಮದ ಹೊರವಲಯದಲ್ಲಿರುವ ಶಿಂಷಾ ನದಿ ತಟದಲ್ಲಿ ವಿಷ್ಣುವಿನ ವಿಗ್ರಹ ಪತ್ತೆಯಾಗಿರುವುದು ಗ್ರಾಮಸ್ಥರಿಗೆ ಆಶ್ಚರ್ಯ ತರಿಸಿದೆ. ಕಳೆದ ಒಂದೆರೆಡು ತಿಂಗಳ ಹಿಂದೆಯೂ ಭಾರಿ ನೀರು ಈ ಪ್ರದೇಶದಲ್ಲಿ ಹರಿದಿತ್ತು. ಈ ಹಿಂದೆಂದೂ ಕಾಣದ ಪ್ರವಾಹ ಆಗಿತ್ತು. ನದಿ ತಟದ ಸುತ್ತಮುತ್ತಲ ಪ್ರದೇಶ ನೀರಿನಿಂದ ಆವೃತವಾಗಿತ್ತು. ಈ ಸಂಧರ್ಭದಲ್ಲಿ ನೀರಿನೊಳಗೆ ಹುದುಗಿಹೋಗಿದ್ದ ಈ ವಿಗ್ರಹ ಹೊರಬಂದಿರಬಹುದು ಎಂದು ಶಂಕಿಸಲಾಗಿದೆ.





ಈಗ ನೀರಿನ ಹರಿವು ಕಡಿಮೆಯಾಗಿದೆ. ಅಲ್ಲದೇ ನೀರೂ ಸಹ ಇಂಗಿದೆ. ಹಾಗಾಗಿ ಈ ವಿಗ್ರಹ ನೀರಿನಲ್ಲಿ ಕಂಡಿರಬಹುದು ಎಂದು ಅಂದಾಜಿಸಲಾಗಿದೆ ಎಂದು ಗ್ರಾಮ ಪಂಚಾಯ್ತಿ ಸದಸ್ಯ ಮುಕುಂದ ಹೇಳಿದರು.

ನಿರ್ಧಾರ ತಮ್ಮ ಗ್ರಾಮದ ಬಳಿ ವಿಷ್ಣುವಿನ ವಿಗ್ರಹ ಸಿಕ್ಕಿರುವುದು ಸಂತಸದ ಸಂಗತಿಯೇ. ಈ ವಿಗ್ರಹ ಯಾವ ಕಾಲದ್ದು, ಎಷ್ಟು ವರ್ಷಗಳ ಹಿಂದಿನದು ಎಂಬುದು ತಿಳಿಯದಾಗಿದೆ. ಈ ವಿಗ್ರಹ ಸಿಕ್ಕಿರುವ ಕುರಿತು ಗ್ರಾಮಸ್ಥರೆಲ್ಲಾ ಒಂದೆಡೆ ಸೇರಿ ಚರ್ಚಿಸಿ ಈ ವಿಗ್ರಹವನ್ನು ಏನು ಮಾಡುವುದು ಎಂದು ನಿರ್ಧರಿಸಲಾಗುವುದು ಎಂದು ಮುಕಂದ ತಿಳಿಸಿದರು.

ಇತ್ತೀಚೆಗಷ್ಟೆ ಶೆಟ್ಟಿಗೊಂಡನಹಳ್ಳಿಯಲ್ಲಿ ಪ್ರಾರಂಭಿಸಿರುವ ಶ್ರೀ ಹಳ್ಳಿಕಾರ್ ಮಠಕ್ಕೆ ಈ ವಿಗ್ರಹವನ್ನು ನೀಡುವ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಈ ಮಧ್ಯೆ ವಿಷ್ಣುವನ ವಿಗ್ರಹ ಸಿಕ್ಕಿದೆ ಎಂಬ ಸಂಗತಿ ತಿಳಿಯುತ್ತಿದ್ದಂತೆ ಅಕ್ಕಪಕ್ಕದ ಗ್ರಾಮಗಳಿಂದ ನೂರಾರು ಮಂದಿ ವಿಗ್ರಹದ ದರ್ಶನ ಮಾಡಿ ಪೂಜೆ ಸಲ್ಲಿಸುತ್ತಿದ್ದಾರೆ.

ಪಿಡಿಓ ಅಭಿಲಾಷ್ ಸೇರಿದಂತೆ ಹಲವಾರು ಮಂದಿ ಆಗಮಿಸಿ ವಿಗ್ರಹ ವೀಕ್ಷಣೆ ಮಾಡಿದರು.

## ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಕೋಚಿಮುಲ್ ವತಿಯಿಂದ ಆರ್ಥಿಕ ಸಹಾಯ

ಉದಯಕಾಲ ನ್ಯೂಸ್

**ಮುಳಬಾಗಿಲು:** ಮುಳಬಾಗಿಲು ತಾಲ್ಲೂಕಿನಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಕೋಚಿಮುಲ್ ವತಿಯಿಂದ ಆರ್ಥಿಕ ಸಹಾಯ ಧನವನ್ನು ವಿತರಿಸಿದರು.

ತಾಲ್ಲೂಕಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲನ್ನು ಹಾಕುತ್ತಿರುವ ಮಕ್ಕಳು ಹತ್ತನೆಯ ತರಗತಿ, ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದು ಡಿಪ್ಲೊಮಾ, ಐಟಿ ಐ, ಇಂಜಿನಿಯರಿಂಗ್ ಹಾಗೂ ಎಂಬಿಬಿಎಸ್ ಓದುತ್ತಿರುವ 26 ಮಂದಿ ವಿಧ್ಯಾರ್ಥಿಗಳಿಗೆ ಕೋಚಿಮುಲ್ ನಿರ್ದೇಶಕ ಕಾಡೇನಹಳ್ಳಿ ನಾಗರಾಜ್ ಮತ್ತು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯರಾದ ಸಮೃದ್ದಿ ಮಂಜುನಾಥ್ ಚೆಕ್ಕುಗಳನ್ನು ವಿತರಿಸಿದರು.



ನಂತರ ಕೋಚಿಮುಲ್ ನಿರ್ದೇಶಕ ಕಾಡೇನಹಳ್ಳಿ ನಾಗರಾಜ್ ಮಾತನಾಡಿ ಕೋಚಿಮುಲ್ ವತಿಯಿಂದ ನಡೆಯುತ್ತಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಹಾಲು ಉತ್ಪಾದಕರ ಮಕ್ಕಳ ವಿಧ್ಯಾಭ್ಯಾಸ ಚೆನ್ನಾಗಿ ಮುಂದುವರೆಯಲು ಕೋಚಿಮುಲ್ ವತಿಯಿಂದ ಪ್ರೋತ್ಸಾಹ ಧನವಾಗಿ ಸಧ್ಯಕ್ಕೆ 26 ಮಂದಿಗೆ ಚೆಕ್ಕುಗಳನ್ನು ವಿತರಿಸುತ್ತಿದ್ದು ಮುಂದೆ ಎಲ್ಲಾ ಹಾಲು ಉತ್ಪಾದಕರ ಮಕ್ಕಳಿಗೂ ಪ್ರೋತ್ಸಾಹ ಧನವನ್ನು ವಿತರಿಸುವ ಯೋಜನೆ ಇದೆ ಎಂದು ತಿಳಿಸಿದರು.

ತಾಲ್ಲೂಕಿನ185 ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ 85 ಸಂಘಗಳಿಗೆ ನನ್ನ ಅಧಿಕಾರದ ಅವಧಿಯಲ್ಲಿ ನೂತನವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ, ನಗರದಲ್ಲಿನ ರೋಟರಿ ಕ್ಲಬ್ ಕಟ್ಟಡವನ್ನು ಒಂದು ಕೋಟಿ ರೂಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ, ಈಗಾಗಲೇ ಅಮರ ಜ್ಯೋತಿ ಕಾಲೇಜಿನಲ್ಲಿ ಓದುತ್ತಿರುವ 25 ಮಂದಿಗೆ ಉಚಿತವಾಗಿ ಶಿಕ್ಷಣ ಕೊಡಿಸಲಾಗುತ್ತಿದೆ, ಆಂದ್ರಪ್ರದೇಶದ ವಿಶಾಕ ಪಟ್ಟಣದಲ್ಲಿ ಇರುವ ದತ್ತಿಯನ್ನು ನೋಡಿ ಸ್ಥಳೀಯರ ಅನುಕೂಲಕ್ಕಾಗಿ 6 ಕೋಟಿ ವೆಚ್ಚದಲ್ಲಿ ದತ್ತಿ ಕೇಂದ್ರವನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಮೃದ್ದಿ ಮಂಜುನಾಥ್ ಮಾತನಾಡಿ ಹಾಲು ಉತ್ಪಾದಕರ ಮಕ್ಕಳ ವಿಧ್ಯಾಭ್ಯಾಸಕ್ಕೆ ಕೋಚಿಮುಲ್ ವತಿಯಿಂದ ಪ್ರೋತ್ಸಾಹ ಧನವನ್ನು ನೀಡಿ ವಿಧ್ಯಾರ್ಥಿಗಳ ಶಿಕ್ಷಣಕ್ಕೆ ಕೋಚಿಮುಲ್ ಬೆಂಬಲವಾಗಿ ನಿಂತಿರುವುದು ಖುಷಿಯ ಸಂಗತಿ. ಆದ್ದರಿಂದ ಮುಂದೆ ನಾನೂ ಸಹ ವೈಯಕ್ತಿಕವಾಗಿ ಸಹಾಯ ಮಾಡಿ ತಾಲ್ಲೂಕನ್ನು ಅಕ್ಷರಸ್ಥ ಮತ್ತು ಗುಣಾತ್ಮಕ ಶಿಕ್ಷಣದ ತಾಲ್ಲೂಕಾಗಿ ಪರಿವರ್ತಿಸಲು ಸಹಾಯ ಮಾಡುವುದಾಗಿ ತಿಳಿಸಿದರು.

ನಗರಸಭೆ ಮಾಜಿ ಅಧ್ಯಕ್ಷ ಎಂ.ಆರ್.ಮುರಳಿ, ಸಾಮೇಗೌಡ, ರಘುಪತಿ ರೆಡ್ಡಿ, ಎಂ.ಎಸ್.ಶ್ರೀನಿವಾಸರೆಡ್ಡಿ, ಚಾಮರೆಡ್ಡಿಹಳ್ಳಿ ಪ್ರಕಾಶ್, ಎಂ.ಗೊಲ್ಲಹಳ್ಳಿ ಪ್ರಭಾಕರ್, ರೆಸಾರ್ಟ್ ಚಂದ್ರಹಾಸ್, ಸಿಮೆಂಟ್ ಗೋಪಾಲ್, ಶ್ರೀಧರ್, ಕೋಚಿಮುಲ್ ಉಪ ವ್ಯವಸ್ಥಾಪಕ ಕಿರಣ್, ವಿಸ್ತರಣಾಧಿಕಾರಿ ಶ್ರೀರಾಮ್, ವೇಣು ಮುಂತಾದವರು ಇದ್ದರು.

## ಹೈಕಮಾಂಡ್ ಹೇಳಿದರೆ ಅದಕ್ಕೆ ನಾನು ಬದ್ಧ: ಕೊತ್ತೂರು ಮಂಜುನಾಥ್



ಉದಯಕಾಲ ನ್ಯೂಸ್

**ಚಿಕ್ಕಬಳ್ಳಾಪುರ:** ಕಳೆದ ಎರಡು ದಿನಗಳ ಹಿಂದೆ ಮುಳಬಾಗಿಲಿನಲ್ಲಿ ನನಗೆ ಚಿಕ್ಕಬಳ್ಳಾಪುರಕ್ಕೆ ಹೋಗಲು ಇಷ್ಟವಿಲ್ಲ ಎಂದಿದ್ದ ಮಾಜಿ ಶಾಸಕ ಕೊತ್ತೂರು ಮಂಜುನಾಥ್ ಈಗ ಹೈಕಮಾಂಡ್ ಹೇಳಿದರೆ ಅದಕ್ಕೆ ಬದ್ಧನಾಗಿರುವೆ ಎಂದು ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾಜಿ ಶಾಸಕ ಕೊತ್ತೂರು ಮಂಜುನಾಥ್ ತಿಳಿಸಿದರು.

ನಗರದಲ್ಲಿ ಖಾಸಗೀ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ, ಸುದ್ದಿಗಾರರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ನಾನಿನ್ನು ಎಲ್ಲಿ ಸ್ಪರ್ದಿಸಬೇಕು ಅನ್ನೋದು ಹೈಕಮಾಂಡ್ ನಿರ್ದಾರ ಮಾಡುತ್ತೆ. ಇದೆ ತಿಂಗಳು 24 ಕ್ಕೆ ಕೇಸ್ ಇದೆ. ಆ ನಂತರ ಸ್ಥಳೀಯ ಮುಖಂಡರೊಂದಿಗೆ ಚರ್ಚಿಸಿ, ಆ ನಂತರ ನಿರ್ಧರಿಸಲಾಗುವುದು ಎಂದು ಹೇಳಿದರು.

ಚಿಕ್ಕಬಳ್ಳಾಪುರ ಜನರು ನನ್ನ ಮೇಲೆ ಪ್ರೀತಿ ವಿಶ್ವಾಸವಿಟ್ಟು ಕರೆಯುತ್ತಿದ್ದಾರೆ. ಒಂದು ವೇಳೆ ಇಲ್ಲಿಯೇ ಅಭ್ಯರ್ಥಿ ಆಗೋದಾದ್ರೆ ಈ ಬಾಗದ ಎಂ ಎಲ್ ಗಳು, ಮಾಜಿ ಶಾಸಕರುಗಳು, ಅಭ್ಯರ್ಥಿಗಳಾಗಿ ಅರ್ಜಿ ಸಲ್ಲಿಸಿರುವ ಯಲುವಳ್ಳಿ ರಮೇಶ್,ವಿನಯ್ ಶಾಮ್ ಹಾಗು ಮುಖಂಡ ನಂದಿ ಆಂಜಿನಪ್ಪರವರ ಬಳಿ ಚರ್ಚಿಸಿಯೇ ಮುಂದುವರೆಯುತ್ತೇನೆ ಎಂದು ತಿಳಿಸಿದರು.

ನಾನು ಇಷ್ಟ ಪಟ್ಟು ಎಲ್ಲಿಗೂ ಹೋಗ್ಬಾರ್ದು, ಜನ ಇಷ್ಟ ಪಟ್ಟು ಕರೆದ್ರೆ, ಹೋಗಿಲ್ಲ ಅಂದ್ರೆ, ಹೇಗೆ ಹಾಗೇನಾದ್ರು ಮಾಡಿದ್ರೆ ತಮಿಳು ನಟ ಕಮಡಿಯನ್ ವಡಿವೇಲ ತಲೆನಗರ್ ಸಿನಿಮಾದಲ್ಲಿ ತಾನಾಗೆ ಅರೆಸ್ಟ್ ಆಗಿ ರೌಡಿ ಎಂದು ಬಿಂಬಿಸಿಕೊಳ್ಳಲು ಹೋದಂತಾಗುತ್ತೆ ಎಂದು ಮಾರ್ಮಿಕವಾಗಿ ನುಡಿದರು. ಇದೆ ವೇಳೆ ಮುಳಬಾಗಿಲು ಕ್ಷೇತ್ರ ನನಗೆ ತಾಯಿ ಸ್ಥಾನ ನೀಡದೆ. ಆ ಕ್ಷೇತ್ರವನ್ನು ನಾನು ಬಿಟ್ಟು ಕೊಡಲು ಸಾಧ್ಯವಿಲ್ಲವೆಂದು ಹೇಳುವ ಮೂಲಕ ಅಕ್ಕಿ ಮೇಲೆಯೂ ಆಸೆ ನೆಂಟರ ಮೇಲೂ ಪ್ರೀತಿ ಎನ್ನುವ ಗಾದೆ ಮಾತಿಗೆ ಪುಷ್ಟಿ ನೀಡಿದರು.

ಸಚಿವ ಸುಧಾಕರ್ ಮತ್ತು ನಾನು ಆತ್ಮೀಯ ಸ್ನೇಹಿತರು. ಕಳೆದ ಬಾರಿ ಬಿಜೆಪಿಯಿಂದ ನನ್ನನ್ನು ಎಂ ಎಲ್ ಸಿ ಗೆ ಹಾಕಿ ಎಂದು ಆಹ್ವಾನಿಸಿದ್ದರು. ಆದ್ರೆ ಅವರ ಆಹ್ವಾನ ತಿರಸ್ಕರಿಸಿ ನಾವು ಇಗಾಗಲೆ ಅನಿಲ್ ಕುಮಾರ್ ರನ್ನ ಅಭ್ಯರ್ಥಿ ಅಂತ ಒಪ್ಪಿಕೊಂಡಿದ್ದೇವೆ ಎಂದು ಖಡಾಖಂಡಿತವಾಗಿ ಹೇಳಿಬಿಟ್ಟೆ. ಅವತ್ತಿನಿಂದ ಸುಧಾಕರ್ ನನ್ನ ಬಳಿ ಮಾತನಾಡೋದು ಕಡಿಮೆ ಮಾಡಿದ್ದಾರೆ ಅಷ್ಟೆ ಅಂತ ಆಪರೇಷನ್ ಕಮಲದಿಂದ ತಪ್ಪಿಸಿಕೊಂಡ ಮಾಹಿತಿಯನ್ನು ಬಿಚ್ಚಿಟ್ಟರು.

## ಐಸಿಐಸಿಐ ಲೊಂಬಾರ್ಡ್‌ನಿಂದ 14 ಹೊಸ ವಿಮಾ ಉತ್ಪನ್ನಗಳ ಬಿಡುಗಡೆ

ಉದಯಕಾಲ ನ್ಯೂಸ್

**ಬೆಂಗಳೂರು :** ಭಾರತದ ಮುಂಚೂಣಿಯ ಖಾಸಗಿ ಕ್ಷೇತ್ರದ ನಾನ್-ಲೈಫ್ ಇನ್ಸುರೆನ್ಸ್ ಕಂಪೆನಿ ಐಸಿಐಸಿಐ ಲೊಂಬಾರ್ಡ್ ಆರೋಗ್ಯ, ವಾಹನ, ಪ್ರವಾಸ ಮತ್ತು ಕಾರ್ಪೊರೇಟ್ ವಲಯಗಳಲ್ಲಿ ಹೊಸ ಮತ್ತು ನವೀಕರಿಸಿದ 14 ವಿಮಾ ಉತ್ಪನ್ನಗಳನ್ನು ಪರಿಚಯಿಸಿದೆ.

ನಗರದ ಖಾಸಗಿ ಹೋಟೆಲ್ ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಯಿತು. ವಿವಿಧ ವಲಯಗಳಲ್ಲಿ ವಿವಿಧ ಅಭಿರುಚಿಯ ಮತ್ತು ಹಿನ್ನೆಲೆಯ ಗ್ರಾಹಕರಿಗೆ ಈ ಉತ್ಪನ್ನಗಳು ಸೂಕ್ತವಾಗಿವೆ. ಗ್ರಾಹಕರ ವಿಮಾ ಅನುಭವವನ್ನು ಇದು ಬದಲಾಯಿಸಲಿದೆ. ತಂತ್ರಜ್ಞಾನ ಆಧಾರಿತ ಪರಿಹಾರಗಳಿಂದಾಗಿ ವಿಮೆ ಪಡೆಯುವ ಪ್ರಕ್ರಿಯೆಯನ್ನು ಸುಗಮಗೊಳಿಸಲಿದೆ.

ಸಾಂಕ್ರಾಮಿಕ, ಹವಾಮಾನ ಬದಲಾವಣೆ ಅಥವಾ ಮಾಹಿತಿ ಖಾಸಗಿತನ ಯಾವುದೇ ಇರಲಿ. ವಿಮಾ ಕ್ಷೇತ್ರ ಇದು ಹೊಸ ಸವಾಲುಗಳನ್ನು ಎದುರಿಸುತ್ತಿದೆ.




ವಿವಿಧ ಕಾರಣಗಳಿಗಾಗಿ ಗ್ರಾಹಕರ ಮನಃಸ್ಥಿತಿಯೂ ಬದಲಾಗಿದ್ದು, ವಿಮೆಯ ಸಮಗ್ರ ವ್ಯಾಪ್ತಿಯನ್ನು ನಿರ್ಧರಿಸುತ್ತಿದೆ. ಹೊಸ ತಂತ್ರಜ್ಞಾನ ಪರಿಹಾರಗಳು ಮತ್ತು ಅವಕಾಶಗಳಿಗೆ ಇದು ಬಾಗಿಲು ತೆರಿದಿದೆ. ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಐಆರ್‌ಡಿಐ ರೂಪಿಸಿದ ?ಯೂಸ್ ಆಂಡ್ ಫೈಲ್? ಚೌಕಟ್ಟಿನಲ್ಲಿ ಐಸಿಐಸಿಐ ಲೊಂಬಾರ್ಡ್‌ನ ಹೊಸ ವಿಮಾ ಉತ್ಪನ್ನಗಳು ಇವುಗಳಿಗೆ ಒತ್ತು ನೀಡಿವೆ.

### 70 ಲಕ್ಷ ವೆಚ್ಚದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಗುದ್ದಲಿ ಪೂಜೆ

ಉದಯಕಾಲ ನ್ಯೂಸ್

**ಮದ್ದೂರು:** ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನ ತರಲಾಗಿದೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ತಾಲೂಕಿನ ಪಣ್ಣೆದೊಡ್ಡಿ, ಬೆಸಗರಹಳ್ಳಿ ಗ್ರಾಮಗಳಲ್ಲಿ 70 ಲಕ್ಷ ವೆಚ್ಚದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಮೂಲ ಸೌಕರ್ಯ ಅಭಿವೃದ್ಧಿಗೆ ಸರ್ಕಾರ ಯಾವುದೇ ಯೋಜನೆಗಳನ್ನು ಜಾರಿಗೆ ತಂದಿಲ್ಲ ನಾನು ಸರ್ಕಾರದಿಂದ ವಿಶೇಷ ಅನುದಾನವನ್ನು ತಂದು ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿ ಮಾಡಲಾಗುತ್ತಿದೆ ಎಂದರು. ತಾಲೂಕಿನ ಸೋಮನಹಳ್ಳಿ, ಚಾಮನಹಳ್ಳಿ, ಬೆಸಗರಹಳ್ಳಿ, ಕೆಸ್ತೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ 10 ಕೋಟಿ ವೆಚ್ಚದಲ್ಲಿ ರಸ್ತೆ, ಚರಂಡಿ, ಕುಡಿಯಲು ಶುದ್ಧ ನೀರು ಸೇರಿದಂತೆ ವಿವಿಧ ಮೂಲ ಸೌಕರ್ಯ ಅಭಿವೃದ್ಧಿಗೆ ಚಾಲನೆ ನೀಡಿದ್ದು, ಈ ಮೂಲಕ ತಾಲೂಕಿನ ಪ್ರತಿ ಗ್ರಾಮವನ್ನು ಸಂಪೂರ್ಣ ಸ್ವಚ್ಛ



ಗ್ರಾಮವಾಗಿ ಕೊಂಡೊಯ್ಯಲು ಶ್ರಮವಹಿಸಲಾಗಿದೆ ಎಂದು ತಿಳಿಸಿದರು. ಕ್ಷೇತ್ರದಲ್ಲಿ ವಿವಿಧ ಏತನೀರಾವರಿ ಯೋಜನೆ ಮೂಲಕ ಗ್ರಾಮೀಣ ಪ್ರದೇಶದ ಕೆರೆಗಳಿಗೆ ನದಿಮೂಲದಿಂದ ನೀರು ತುಂಬಿಸಿದ್ದೇನೆ ಇದರಿಂದ ತಾಲೂಕಿನ ಮಳೆಯಾಶ್ರಿತ ಪ್ರದೇಶದಲ್ಲಿ ಅಂತರ್ಜಲ ವೃದ್ಧಿಯಾಗಿ ರೈತರ ಕೃಷಿ ಚಟುವಟಿಗಳಿಗೆ ನೀರು ಸಿಗುತ್ತಿದೆ ಎಂದರು. ಗ್ರಾಪಂ ಸದಸ್ಯರಾದ ಎಂ.ಎಸ್.ಲೋಕೇಶ್, ಪ್ರಸನ್ನಕುಮಾರ್, ಮಂಜುನಾಥ, ಸೌಮ್ಯ, ಗಾಯಿತ್ರಿ, ಕಾವ್ಯ, ರೇಖಾ, ಮುಖಂಡರಾದ ವಾಸು, ನಾಗೇಶ ಸೇರಿದಂತೆ ಇತರರು ಇದ್ದರು.

### ಯುವ ಜೆಡಿಎಸ್ ಪ್ರಧಾನಕಾರ್ಯದರ್ಶಿಯಾಗಿ ಎಸ್.ಮಾರೇಗೌಡ ನೇಮಕ



ಉದಯಕಾಲ ನ್ಯೂಸ್

**ದೇವನಹಳ್ಳಿ:** ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಯುವ ಜನತಾದಳ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಎಸ್.ಮಾರೇಗೌಡ ಅವರನ್ನು ತಾಲೂಕು ಜೆಡಿಎಸ್ ಅಧ್ಯಕ್ಷ ಆರ್.ಮುನೇಗೌಡ ನೇಮಕಾತಿ ಪತ್ರ ನೀಡಿ ಮುಂದಿನ ಪಕ್ಷದ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಪಕ್ಷ ಸಂಘಟಿಸಬೇಕೆಂದು ಆದೇಶಿಸಿದ್ದಾರೆ.

ನೂತನ ಯುವ ಜಡಿಎಸ್ ಪ್ರ.ಕಾ. ಎಸ್. ಮಾರೇಗೌಡ ಮಾತನಾಡಿ, ಪಕ್ಷದ ತತ್ವ ಸಿದ್ಧಾಂತಗಳಡಿಯಲ್ಲಿ ಕ್ಷೇತ್ರದಲ್ಲಿ ಪಕ್ಷವನ್ನು ಹಾಗೂ ಯುವ ಜನತಾ ದಳ ಘಟಕವನ್ನು ಪರಿಣಾಮಕಾರಿಯಾಗಿ ಸಂಘಟಿಸುವ ಮೂಲಕ ಪಕ್ಷವನ್ನು ಬೂತ್ ಮಟ್ಟದಲ್ಲಿ ಗಟ್ಟಿಗೊಳಿಸಲಾಗುತ್ತದೆ ಎಂದು ಹೇಳಿದರು.

# ಸೇವಾ ಮನೋಭಾವ ಅನ್ನುವುದು ಎಲ್ಲರಲ್ಲೂ ಕಾಣುವುದಿಲ್ಲ

ಉದಯಕಾಲ ನ್ಯೂಸ್

**ಗುಬ್ಬಿ:** ಸಮಾಜದಲ್ಲಿ ಧಾರ್ಮಿಕ ಆಚರಣೆಗೆ ಇರುವ ಪ್ರಾಮುಖ್ಯತೆ ಸಮಯಕ್ಕೆ ಸಹಾಯ ಮಾಡುವ ಗುಣ ಕೂಡಾ ಬಹು ಮುಖ್ಯ ಎನಿಸಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಸಮಾಜಕ್ಕೆ ಅಗತ್ಯವಿರುವ ಶಿಕ್ಷಣಕ್ಕೆ ಒಲವು ತೋರಿ ಸಹಾಯ ಮಾಡುವ ಜಿಎಚ್ ವಿಎಸ್ ಟ್ರಸ್ಟ್ ಕಾರ್ಯ ಮೆಚ್ಚುವಂತಹದ್ದು ಎಂದು ದೊಡ್ಡಗುಣಿ ಮಠದ ಶ್ರೀ ರೇವಣಸಿದ್ದೇಶ್ವರ ಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ದೊಡ್ಡಗುಣಿ ಹಿರೇಮಠದಲ್ಲಿ ಆಯೋಜಿಸಿದ್ದ ಶ್ರೀ ರೇವಣಸಿದ್ದೇಶ್ವರ ಸ್ವಾಮೀಜಿಗಳ 63 ನೇ ವರ್ಧಂತಿ ಮಹೋತ್ಸವದಲ್ಲಿ ಜಿಎಚ್ ವಿಎಸ್ ಟ್ರಸ್ಟ್ ನೀಡಿದ ಉಚಿತ ನೋಟ್ ಬುಕ್ ಲೇಖನಿ ಸಾಮಗ್ರಿ ಶಾಲಾ ಮಕ್ಕಳಿಗೆ ವಿತರಿಸಿ ಮಾತನಾಡಿದ ಅವರು ಶಿಕ್ಷಣ ನೀಡುವುದು ಕೂಡಾ ಒಂದು ಧರ್ಮ ಕಾಯಕ. ಇಂದು ಅವರ ಸಹಾಯ ನಾಳೆಯ ಉತ್ತಮ ಸಮಾಜ ನಿರ್ಮಾಣಕ್ಕೆ ನಾಂದಿ ಆಗಲಿದೆ ಎಂದರು.

ಸೇವಾ ಮನೋಭಾವ ಅನ್ನುವುದು ಎಲ್ಲರಲ್ಲೂ ಕಾಣುವುದಿಲ್ಲ. ಅದು ಉತ್ತಮ ಸಂಸ್ಕಾರ ಇರುವ ಮನೆಯ ಮಕ್ಕಳಲ್ಲಿ ಬರುತ್ತದೆ. ಹಾಗೆಯೇ ಗುರುಕುಲ, ಮಠಮಾನ್ಯಗಳು ಧಾರ್ಮಿಕ ಆಚರಣೆ ಮಾಡುವಲ್ಲಿ




ಉತ್ತಮ ಸಂಸ್ಕಾರ ಇರುತ್ತದೆ. ಸೇವೆ ಪ್ರಚಾರಕ್ಕೆ ಮಾಡುವ ಗೀಳು ಬೆಳೆಸಿಕೊಳ್ಳದೇ ಬಡ ಮಕ್ಕಳ ಅಧ್ಯಯನಕ್ಕೆ ಅನುವು ಮಾಡುವ ಕೆಲಸ ಟ್ರಸ್ಟ್ ಮಾಡುತ್ತಿದೆ. ಕುಗ್ರಾಮಗಳನ್ನು ಹುಡುಕಿ ಅಲ್ಲಿನ ಮಕ್ಕಳ ಶಿಕ್ಷಣಕ್ಕೆ ದತ್ತು ಪಡೆಯುವ ಕೆಲಸ ಹಾಗೆಯೇ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಉನ್ನತ ವ್ಯಾಸಂಗಕ್ಕೆ ಅನುವು ಮಾಡುವ ಜೊತೆಗೆ ಬಡ ಮಕ್ಕಳ ಉಚಿತ ಶಿಕ್ಷಣಕ್ಕೆ ಶುಲ್ಕ ಪಾವತಿ ಮಾಡುವುದು ಕೂಡಾ ಶಿವ ಮೆಚ್ಚುವ ಕೆಲಸವಾಗಿದೆ. ಸದ್ದಿಲ್ಲದೆ ಸೇವಾ ಕಾರ್ಯ ಮಾಡುತ್ತಿರುವವರಿಗೆ ಕೈ ಜೋಡಿಸುವ ಕೆಲಸ ಆಸ್ತಿಕರು ಮಾಡಬೇಕು ಎಂದು ಕರೆ ನೀಡಿದರು.

ಜಿಎಚ್ ವಿಎಸ್ ಟ್ರಸ್ಟ್ ಕಾರ್ಯದರ್ಶಿ ಶಂಕರ್ ಪ್ರಸಾದ್ ಮಾತನಾಡಿ ಅಭಿವೃದ್ದಿಗೆ ಶಿಕ್ಷಣವೇ ಮೂಲ ಮಂತ್ರ. ಇದನ್ನರಿತು ಎಲೆ ಮರೆಯ ಕಾಯಿಗಳಂತೆ ಮರೆಯಾಗುವ ನೂರಾರು ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಅವರಿಗೆ ಉನ್ನತ ಶಿಕ್ಷಣಕ್ಕೆ ಅನುವು ಮಾಡುವ ಕಾಯಕ ನಡೆಸಲು ಆಲೋಚಿಸಿ ಕೆಲವೇ ಆಸಕ್ತರ ತಂಡ ಕಟ್ಟಿ ಟ್ರಸ್ಟ್ ಆರಂಭಿಸಿ ಈಗಾಗಲೇ ಸಾವಿರಾರು ಮಕ್ಕಳ ಶಿಕ್ಷಣಕ್ಕೆ ಒಂದೊಂದು ರೀತಿ ಅನುವು ಮಾಡಿದ್ದೇವೆ. ಬಡ ಮಕ್ಕಳಿಗೆ ಆರ್ಥಿಕ ನೆರವು ಜತೆ ಮಕ್ಕಳ ಮುಂದಿನ ಭವಿಷ್ಯ ರೂಪಿಸುವ ಕೆಲಸ ಸಹ ಮಾಡುವ ಯತ್ನದಲ್ಲಿದ್ದೇವೆ. ಸಾಮಾಜಿಕ ಕಳಕಳಿ ಹೊತ್ತು ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಸೇವೆ ಆರಂಭಿಸಿ ಮುಂದಿನ ದಿನದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸಹ ಸಹಾಯ ಸಹಕಾರ ಕೆಲಸ ನಡೆಸುತ್ತೇವೆ ಎಂದು ತಮ್ಮ ಕಾರ್ಯ ಚಟುವಟಿಕೆ ತಿಳಿಸಿದರು.

ಸಂಪನ್ಮೂಲ ವ್ಯಕ್ತಿ ಸುಮನ್ ಹೀರೆಮಠ ಮಾತನಾಡಿ ಧಾರ್ಮಿಕ ಕಾರ್ಯಕ್ಕೆ ಮನ್ನಣೆ ನೀಡುವ ಮಠಗಳು ಈ ಹಿಂದೆ ಗುರು ಕುಲವಾಗಿ ಶಾಲೆಯು ಆಗಿತ್ತು. ಹಾಸ್ಟೆಲ್ ಕೂಡಾ ನಡೆದಿತ್ತು. ಆಧುನಿಕತೆ ಬಂದಂತೆ ಬದಲಾದ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡ ನಾವುಗಳು ಧಾರ್ಮಿಕ ಜೊತೆಯ ಶಿಕ್ಷಣ ಮರೆಯಬಾರದು. ತ್ರಿವಿಧ ದಾಸೋಹ ನೀಡುವ ಮಠಮಾನ್ಯಗಳು ಇಂದು ನಡೆಸುತ್ತಿರುವ ಸೇವೆ ಸರ್ಕಾರದ ಕೆಲಸಕ್ಕೆ ಸಮ ಎಂದು ಹೇಳಿ ಮಕ್ಕಳಿಗೆ ಮಂತ್ರ ಪಠಣ ಮಾಡಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ವಂಶಿ ನಾಗರಾಜು, ಪ್ರಮೋದ್, ತೇಜಸ್, ವಿಶ್ವಾಸ್ ಸೇರಿದಂತೆ ಶಾಲಾ ಶಿಕ್ಷಕರು ನೂರಾರು ಮಕ್ಕಳು ಇದ್ದರು.

## ಚುಟುಕು ಸುದ್ದಿ

### ತಾಲೂಕು ಕಚೇರಿಸ್ವಚ್ಛಗೊಳಿಸಿದ ಆಪ್ ಕಾರ್ಯಕರ್ತರು



**ಉದಯಕಾಲ ನ್ಯೂಸ್**

**ನೆಲಮಂಗಲ:** ಪೊರಕೆಯೇ ಪರಿಹಾರ ಎಂಬ ಯಾತ್ರೆಯ ಮೂಲಕ ನೆಲಮಂಗಲದ ಪರಿವೀಕ್ಷಣ ಮಂದಿರದಿಂದ ತಾಲೂಕು ಕಚೇರಿಯವರಿಗೂ ಆಗಮಿಸಿದ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರುಗಳು ಪೊರಕೆ ಹಿಡಿದು ತಾಲೂಕು ಕಚೇರಿಯನ್ನು ಸ್ವಚ್ಛಗೊಳಿಸುವ ಕಾರ್ಯ ಮಾಡಿ ವಿನೂತನ ಪ್ರತಿಭಟನೆ ಮಾಡಿದರು.

ಆಮ್ ಆದ್ಮಿ ಪಕ್ಷದ ಸಂಭಾವ್ಯ ಅಭ್ಯರ್ಥಿ ಗಂಗಬೈಲಪ್ಪ ಮಾತನಾಡಿ, ಸ್ವಚ್ಛತೆ ಶಿಕ್ಷಣ ಆರೋಗ್ಯ ವಿದ್ಯುತ್ ಮುಂತಾದ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಆಮ್ ಆದ್ಮಿ ಪಾರ್ಟಿಯೊಂದೇ ಪರಿಹಾರವಾಗಿದೆ. ಇದನ್ನು ತಿಳಿಸುವ ಉದ್ದೇಶದಿಂದ ಪೊರಕೆಯೇ ಪರಿಹಾರ ಹೆಸರಿನಲ್ಲಿ ಯಾತ್ರೆ ಆಯೋಜಿಸಲಾಗಿದೆ. ನೆಲಮಂಗಲ ತಾಲೂಕು ಆಡಳಿತ ಬಡತನದ ಬೇಗೆಯಲ್ಲಿ ಬೇಯುತ್ತಿದೆ, ಇಂದು ನಮ್ಮ ಕಾರ್ಯಕರ್ತರುಗಳು ಬಂದು ಕಸಗುಡಿಸುವ ಕಾರ್ಯ ಮಾಡುತ್ತಿದ್ದಾರೆ, ತಾಲೂಕು ಆಡಳಿತಕ್ಕೆ ನಾಚಿಕೆ ಆಗಬೇಕು. ಸುಣ್ಣ ಬಣ್ಣ ಮಾಡಿ ಎಷ್ಟು ವರ್ಷಗಳೇ ಕಳೆದಿದೆಯೋ ಗೊತ್ತಿಲ್ಲ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ. ಅಧಿಕಾರಿಗಳು ತಮ್ಮ ಮನೆಯನ್ನು ಹೀಗೆ ಇಟ್ಟುಕೊಳ್ಳುತ್ತಾರಾ ಸಾರ್ವಜನಿಕರ ಸ್ವತ್ತು ಎಂದರೆ ಅಧಿಕಾರಿಗಳಿಗೆ ಅಸಡ್ಡೆ. ಇದನ್ನೆಲ್ಲ ನಾವು ಗಮನಿಸಿ ತಾಲೂಕು ಕಚೇರಿಯನ್ನು ಸ್ವಚ್ಛಗೊಳಿಸುವ ಕಾರ್ಯ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಬಣ್ಣ ಕೂಡ ಹಾಕಿಸುತ್ತೇವೆ. ಇದು ನಮ್ಮ ತಾಲೂಕು ಕಚೇರಿ. ಇಲ್ಲಿನ ಅಧಿಕಾರಿಗಳು ಏನು ಅನಿಸದಿದ್ದರೂ ನಾವು ಈ ಕೆಲಸವನ್ನು ಮಾಡುತ್ತೇವೆ ಎಂದರು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ನಂಜುಂಡಯ್ಯ, ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಇಮ್ರಾನ್, ಕಾರ್ಯದರ್ಶಿ ಪ್ರಸಾದ್, ಕಾರ್ಯಕರ್ತರುಗಳಾದ ಮುನಿ ಆಂಜಿನಪ್ಪ, ಶಶಿಕುಮಾರ್ ಮತ್ತಿತರರು ಭಾಗವಹಿಸಿದ್ದರು.

### ಆಧುನಿಕ ಹೌಸ್ ಆಫ್ ಜಾನ್ಸನ್ ಕೇಂದ್ರ ಪ್ರಾರಂಭ




**ಉದಯಕಾಲ ನ್ಯೂಸ್**

**ಬೆಂಗಳೂರು:** ಮುಂಚೂಣಿಯಲ್ಲಿರುವ ಸೆರಾಮಿಕ್ ಟೈಲ್ಸ್ ತಯಾರಕರಲ್ಲಿ ಒಂದಾದ ಹೆಚ್ ಅಂಡ್ ಆರ್ ಜಾನ್ಸನ್ (ಭಾರತ) ಮತ್ತು ಪ್ರಿಸ್ಮ್ ಜಾನ್ಸನ್ ಲಿಮಿಟೆಡ್‌ನ ವಿಭಾಗವು ಬೆಂಗಳೂರಿನಲ್ಲಿ ತನ್ನ ಕೇಂದ್ರ ತೆರೆದಿದೆ.

ಹೆಚ್ ಅಂಡ್ ಆರ್ ಜಾನ್ಸನ್ (ಭಾರತ)ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಸಿಇಓ ಶರತ್ ಚಂದಕ್ ಈ ಸಂದರ್ಭದಲ್ಲಿ ಮಾತನಾಡಿ, ಹೆಚ್ ಅಂಡ್ ಆರ್ ಜಾನ್ಸನ್ (ಭಾರತ) ನಾವು ವ್ಯವಹರಿಸುವ ವಿಭಾಗಗಳ ಭವಿಷ್ಯವನ್ನು ಪ್ರವರ್ತಿಸಲು ಪಟ್ಟುಬಿಡದ ನಾವೀನ್ಯತೆಯ ತತ್ವಶಾಸ್ತ್ರದಲ್ಲಿ ಬಲವಾದ ನಂಬಿಕೆಯನ್ನು ಹೊಂದಿದೆ. ಹೊಸ ಪೀಳಿಗೆಯ ಅನುಭವ ಕೇಂದ್ರಗಳು ಖರೀದಿ ಮತ್ತು ಆಯ್ಕೆಯನ್ನು ಸಂಪೂರ್ಣವಾಗಿ ಉನ್ನತೀಕರಿಸುತ್ತವೆ. ಜೀವನಶೈಲಿ ಉತ್ಪನ್ನಗಳಿಗೆ ಪ್ರಕ್ರಿಯೆ, ವಸತಿ ಮತ್ತು ವಾಣಿಜ್ಯ ಸ್ಥಳಗಳನ್ನು ಯೋಜಿಸಲು ಮತ್ತು ವಿನ್ಯಾಸಗೊಳಿಸಲು ಒಂದುನಿಲುಗಡೆಶಾಪ್ ಆಗಿದೆ.

ಈ ವಿಶಿಷ್ಟ ಶೋರೂಮ್ ಅನ್ನು ವಿಷಯಾಧಾರಿತವಾಗಿ 2,000 ಕ್ಕೂ ಹೆಚ್ಚು ಉತ್ಪನ್ನಗಳೊಂದಿಗೆ ವಿನ್ಯಾಸಗೊಳಿಸಲಾಗಿದೆ ಮತ್ತು 4,500 ಚದರ ಅಡಿ ವಿಸ್ತೀರ್ಣದಲ್ಲಿ ಅಣಕು-ಅಪ್‌ಗಳನ್ನು ಪ್ರದರ್ಶಿಸಲಾಗಿದೆ ಮತ್ತು ಇದು 56, ರಾಮಮೂರ್ತಿ ನಗರ, ಮುಖ್ಯ ರಸ್ತೆ, ಬಾಲ್ಡ್‌ವಿನ್ ರೆಸಿಡೆನ್ಶಿಯಲ್ ಸ್ಕೂಲ್ ಎದುರು, ಬೆಂಗಳೂರು - 560 043 ವಿಳಾಸದಲ್ಲಿದೆ ಎಂದರು.

ಟೈಲ್ಸ್ ಬ್ಯುಸಿನೆಸ್ ಅಧ್ಯಕ್ಷ ವಿಜಯ್ ಮಿಶ್ರಾ ಮಾತನಾಡಿ, ಹೌಸ್ ಆಫ್ ಜಾನ್ಸನ್ ಗ್ರಾಹಕರ ಅನುಭವವನ್ನು ಸುಧಾರಿಸುವುದು, ಒಂದೇ ಸೂರಿನಡಿ ಟೈಲ್ಸ್, ಸ್ಯಾನಿಟರಿವೇರ್, ಸ್ನಾನದ ಫಿಟ್ಟಿಂಗ್ ಮತ್ತು ಇಂಜಿನಿಯರಿಂಗ್ ಕಲ್ಲುಗಳನ್ನು ಖರೀದಿಸುವುದು, ಆಯ್ಕೆ ಪ್ರಕ್ರಿಯೆಯಲ್ಲಿ ಅಮೂಲ್ಯ ಸಮಯವನ್ನು ಉಳಿಸುವುದು, ಇತ್ತೀಚಿನ ವಿನ್ಯಾಸಗಳನ್ನು ಪಡೆಯುವುದು ಮತ್ತು ಅತ್ಯಂತ ಮುಖ್ಯವಾಗಿ ಗ್ರಾಹಕರು ತಮ್ಮ ಮನೆಗೆ ಸರಿಯಾದ ಉತ್ಪನ್ನವನ್ನು ಆಯ್ಕೆಮಾಡುವಲ್ಲಿ ಮಾರ್ಗದರ್ಶನ ನೀಡುತ್ತಾರೆ, ಖರೀದಿಯ ಅನುಭವವು ಆಹ್ಲಾದಕರವಾಗಿರುತ್ತದೆ ಎಂದು ಖಚಿತಪಡಿಸಿಕೊಳ್ಳುತ್ತಾರೆ. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು www.hrjohnsonin-dia.comಸಂಪರ್ಕಿಸಬಹುದು.

### ಅಂಬೇಡ್ಕರ್ ಭವನ ಕಾಮಗಾರಿ ಶೀಘ್ರದಲ್ಲಿ ಪೂರ್ಣ: ಶ್ರೀನಿವಾಸ ಪೂಜಾರಿ

**ಉದಯಕಾಲ ನ್ಯೂಸ್**

**ಬೆಂಗಳೂರು:** ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ಕೇಂದ್ರದಲ್ಲಿ ನಿರ್ಮಾಣವಾಗುತ್ತಿರುವ ಡಾ: ಬಿ.ಆರ್. ಅಂಬೇಡ್ಕರ್ ಭವನದ ಕಾಮಗಾರಿಯನ್ನು ಅತಿ ಶೀಘ್ರವಾಗಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಾಗುವುದು ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಅವರು ಬುಧವಾರ ವಿಧಾನಸಭೆ ಅಧಿವೇಶನದ ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯರಾದ ಬಿ.ಶಿವಣ್ಣ ಇವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಡಾ: ಬಿ.ಆರ್. ಅಂಬೇಡ್ಕರ್ ಭವನದ ಕಾಮಗಾರಿಗೆ ರೂ.13ಕೋಟಿ 25 ಲಕ್ಷಗಳಿಗೆ ಮಂಜೂರಾತಿ ನೀಡಿ, ರೂ.9 ಕೋಟಿ 25 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಇನ್ನುಳಿದ 4 ಕೋಟಿಗಳನ್ನು ಬಿಡುಗಡೆ ಮಾಡಲಾಗುವುದು ಎಂದರು.

ಈಗಾಗಲೇ ಮಂಜೂರು ಮಾಡಿರುವ ಅನುದಾನ ರೂ.1325 ಲಕ್ಷಗಳನ್ನು ಹೊರತುಪಡಿಸಿ, ಹೆಚ್ಚಿನ ಅನುದಾನದ ಅಗತ್ಯವಿದೆ ಎಂದು ಭವನ ನಿರ್ಮಾಣದ ಅಧಿಕಾರಿಗಳು ಕೋರಿದ್ದು, ಅದರಂತೆ ರೂ.415 ಲಕ್ಷಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

---

### ವಿವಿಧ ಕಾಲೇಜುಗಳ ವಿದ್ಯಾರ್ಥಿಗಳೊಂದಿಗೆ ಸಂವಾದಿಸಿದ ಶರಣಗೌಡ ಕಂದಕೂರ

# ಯುವ ನಾಯಕನೊಂದಿಗೆ ಯುವ ಮನಸ್ಸುಗಳ ಮುಕ್ತ ಚರ್ಚೆ





**ಉದಯಕಾಲ ನ್ಯೂಸ್**

**ಯಾದಗಿರಿ:** ಸಾವಿರಾರು ಯುವ ಸಮೂಹ ಮನಸ್ಸುಗಳನ್ನು ಸೇರಿಸಿ ಯುವ ಸಂವಾದ ಕಾರ್ಯಕ್ರಮ ಮಾಡುವ ಮೂಲಕ ಜಿಲ್ಲೆಯ ಹೊಸ ಇತಿಹಾಸಕ್ಕೆ ಯುವ ನಾಯಕ ಶರಣಗೌಡ ಕಂದಕೂರ ಸಾಕ್ಷಿಯಾದರು.

ಗುರುಮಠಕಲ್ ಮತಕ್ಷೇತ್ರದ ಸೈದಾಪುರದ ಜಿ.ಆರ್. ಪಾರ್ಕ್ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಯುವ ನಾಯಕನೊಂದಿಗೆ ಯುವ ಮನಸ್ಸುಗಳ ಮುಕ್ತ ಚರ್ಚೆ ವಿಷಯದ ಮೇಲೆ ಆಯೋಜಿಸಿದ್ದ ಯುವ ಸಂವಾದದಲ್ಲಿ ಮತಕ್ಷೇತ್ರದ ವಿವಿಧ ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿ ಯುವ ನಾಯಕನೊಂದಿಗೆ ಅಂತರಂಗದ ಭಾವನೆಗಳನ್ನು ಹಂಚಿಕೊಂಡರು.

ಕಂದಕೂರ ಮಾತನಾಡಿ, ಯುವ ಸಮೂಹಗಳಿಗೆ ನನ್ನೊಡನೆ ಮುಕ್ತವಾಗಿ ಚರ್ಚೆ ಮಾಡಿ. ಇದು ರಾಜಕೀಯ ವೇದಿಕೆಯಲ್ಲ, ಯುವಕರು ಯಾವುದೇ ಕಾರಣಕ್ಕೂ ಹಿಂದೆ ಸರಿಯದೆ ನಿಮ್ಮ ಮನಸಲ್ಲಿನಲ್ಲಿನ ಭಾವನೆಗಳನ್ನು ಬಿಚ್ಚಿಡಬಹುದು ಎಂದು ಹೇಳುತ್ತಿದ್ದರು. ಆಡಳಿತದಲ್ಲಿ ಚುರುಕು ಹಾಗೂ ಸಾಮಾನ್ಯರೊಂದಿಗೆ ಬೆರೆಯುವ ಗುಣ ಹೀಗೆ ನಾನಾ ವಿಷಯಗಳ ಮೇಲೆ ನಾನಿಂದು ಸಂವಾದ ಆಯೋಜಿಸಿದ್ದೇನೆ. ನನಗೆ ವಿದ್ಯಾರ್ಥಿ ಹಾಗೂ ಯುವಕ, ಯುವತಿಯರಿಂದ ಉತ್ತರ ಕಂಡುಕೊಳ್ಳುವ ಬಯಕೆ ಹಲವು ವರ್ಷಗಳಿಂದ ಇದ್ದು, ಇದೀಗ ಕಾಲ ಕೂಡಿ ಬಂದಿದೆ ಎಂದರು.

ಸಂವಾದ ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ಯುವಕ-ಯುವತಿಯರು ಮುಕ್ತವಾಗಿ ಪ್ರಶ್ನೆ ಕೇಳಿದರು. ಉತ್ತಮ ಅಧಿಕಾರ, ಆಡಳಿತ ನಡೆಸುವ ಭವಿಷ್ಯದ ನೇತಾರರು ಹೇಗಿರಬೇಕು ಎಂಬುದನ್ನೇ ಯುವ ಸಮೂಹ ಪ್ರಸ್ತಾಪಿಸಿದರು. ಸಂವಾದದಲ್ಲಿ ಕೆಲವರು ಮೂಲಸೌಲಭ್ಯ, ಭ್ರಷ್ಟಾಚಾರ, ಪ್ರಸ್ತುತ ರಾಜಕೀಯ ವ್ಯವಸ್ಥೆ ಬಗ್ಗೆ ಅಸಮಾಧಾನ ಹೊರಹಾಕಿದರು. ಯುವ ನಾಯಕ ಕಂದಕೂರ ಅವರು, ಎಲ್ಲರ ಪ್ರಶ್ನೆಗಳಿಗೆ ತಾಳ್ಮೆಯಿಂದಲೇ ಸಮರ್ಪಕವಾಗಿ ಉತ್ತರಿಸಿ ಭರವಸೆ ನೀಡಿದರು.

ಮಾಜಿ ಮುಖ್ಯಮಂತ್ರಿಯೊಬರು ನನ್ನನ್ನು ದೇವದುರ್ಗ ಪಟ್ಟಣದ ಪ್ರವಾಸಿ ಮಂದಿರಕ್ಕೆ ಕರೆಯಿಸಿ, ಸಮ್ಮಿಶ್ರ ಸರ್ಕಾರ ಉರುಳಿಸುವಂತೆ ಹಣ ಹಾಗೂ ಮಂತ್ರಿ ಸ್ಥಾನದ ಆಮೀಷ ಒಡ್ಡಿದ್ದರು.

ನಾನೂ ಅದಕ್ಕೆ ಒಳಗಾಗಲಿಲ್ಲ, ಪ್ರಮುಖ ಕಾರಣ ಚುನಾವಣೆಯಲ್ಲಿ ಗುರುಮಠಕಲ್ ಕ್ಷೇತ್ರದಲ್ಲಿ ಎಲ್ಲಾ ವರ್ಗದ ಜನರು ನಮ್ಮ ತಂದೆಯವರಿಗೆ ಮತ ನೀಡುವ ಮೂಲಕ ಬೆಂಬಲಿಸಿದ್ದರು. ಅವರಿಗೆ ಮೋಸ ಮಾಡಲು ನನ್ನ ಆತ್ಮಸಾಕ್ಷಿ ಒಪ್ಪಲಿಲ್ಲ, ಪರಿಣಾಮ ನಂತರ ದಿನಗಳಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ, ಸಮ್ಮಿಶ್ರ ಸರ್ಕಾರ ಅವಧಿಯಲ್ಲಿ ಕ್ಷೇತ್ರಕ್ಕೆ ಮಂಜೂರಾದ ಅನುದಾನವನ್ನು ವಾಪಸ್ ಪಡೆಯಿತು ಎಂದು ಸಂವಾದದಲ್ಲಿ ತಿಳಿಸಿದರು.

ಸಂವಾದದಲ್ಲಿ ಯುವಕ-ಯುವತಿಯರು ನೀಡಿರುವ ಉಪಯುಕ್ತ ಸಲಹೆ ಸೂಚನೆಗಳನ್ನು ನನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿ, ಅನುಷ್ಠಾನಕ್ಕೆ ಆದ್ಯತೆ ನೀಡುತ್ತೇನೆ ಎಂದು ಯುವ ಸಮೂಹಕ್ಕೆ ಭರವಸೆ ನೀಡಿದರು.

> ನನ್ನ ಜೀವನದಲ್ಲಿ ಒಮ್ಮೆಯಾದರೂ ಒಂದು ರೂಪಾಯಿ ಖರ್ಚಿಲ್ಲದೆ ಚುನಾವಣೆ ನಡೆಸಿ ಮೌಲ್ಯಯುತ ಮತದಾನಕ್ಕೆ ಅಡಿಪಾಯ ಹಾಕುವುದು ಗುರಿಯಾಗಿದೆ. ಆ ಭಗವಂತನ ದಯೆದಿಂದ ರಾಜಕೀಯ ಅಧಿಕಾರದ ಅವಕಾಶ ಸಿಕ್ಕರೇ ಮತಕ್ಷೇತ್ರದಲ್ಲಿ ಯಾವುದೇ ಅಕ್ರಮ ಚಟುವಟಿಕೆಗಳನ್ನು ನಡೆಸಲು ಅವಕಾಶ ನೀಡುವುದಿಲ್ಲ, ಗುರು ಹಿರಿಯರ ಮಾರ್ಗದರ್ಶನದಲ್ಲಿ ಉತ್ತಮ ಆಡಳಿತ ನೀಡಲು ಉತ್ಸಾಹ ತೋರಿಸುತ್ತೇನೆ.
>
> **- ಶರಣಗೌಡ ಕಂದಕೂರ**

---

## ಜ್ಞಾನ ಸಾಧನೆಗೆ ಹಾದಿ: ರಾಜ್ಯಪಾಲರು




**ಉದಯಕಾಲ ನ್ಯೂಸ್**

**ಬೆಂಗಳೂರು:** ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದರ ಜೊತೆಗೆ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು. ನಮ್ಮಲ್ಲಿರುವ ಜ್ಞಾನವನ್ನು ಯಾರು ಕದಿಯಲು ಸಾಧ್ಯವಿಲ್ಲ. ಜ್ಞಾನ ಪಡೆದುಕೊಂಡರೆ ಸಾಧನೆಗೆ ದಾರಿ ಸುಲಭವಾಗಲಿದೆ ಎಂದು ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದಲ್ಲಿ ಸಿಎಂಆರ್ ಸಮೂಹ ಸಂಸ್ಥೆಗಳ ಸಭಾಂಗಣದಲ್ಲಿ ನಡೆದ ಸಿಎಂಆರ್ ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜೀವನದ ಯಶಸ್ಸಿನಲ್ಲಿ ಶಿಕ್ಷಣವು ಮಹತ್ತರವಾದ ಕೊಡುಗೆಯನ್ನು ಹೊಂದಿದೆ. ಶಿಕ್ಷಣವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಉಪಯುಕ್ತವಾಗಿದೆ, ಒಬ್ಬ ವ್ಯಕ್ತಿಯು ಶಿಕ್ಷಣ ಪಡೆದಾಗ ಮಾತ್ರ ಅವನ ಅಭಿವೃದ್ಧಿಯಾಗುತ್ತದೆ. ಶಿಕ್ಷಣವು ನಮಗೆ ತಾಂತ್ರಿಕ ಮತ್ತು ಹೆಚ್ಚು ನುರಿತ ಜ್ಞಾನವನ್ನು ನೀಡುತ್ತದೆ ಮತ್ತು ಆಲೋಚನೆಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನು ನೀಡುತ್ತದೆ. ಶಿಕ್ಷಣವು ಕೌಶಲ್ಯಗಳನ್ನು ಹೆಚ್ಚಿಸುತ್ತದೆ ಮತ್ತು ನಾವು ಆಸಕ್ತಿ ಹೊಂದಿರುವ ಕ್ಷೇತ್ರದಲ್ಲಿ ಕೌಶಲ್ಯದಿಂದ ಉತ್ತಮ ಯಶಸ್ಸನ್ನು ಸಾಧಿಸಬಹುದು ಎಂದರು.

ನಮ್ಮ ಹಳೆಯ ಶಿಕ್ಷಣ ವ್ಯವಸ್ಥೆಯು ಅತ್ಯಂತ ಶ್ರೀಮಂತ ಮತ್ತು ವಿಶಾಲವಾದದ್ದು ಎಂದು ನಮಗೆಲ್ಲರಿಗೂ ತಿಳಿದಿದೆ, ಅದಕ್ಕಾಗಿಯೇ ನಮ್ಮನ್ನು ವಿಶ್ವಗುರು ಎಂದು ಪರಿಗಣಿಸಲಾಗಿದೆ ಮತ್ತು ನಮ್ಮ ಆರ್ಥಿಕತೆಯು ನಮ್ಮ ದೇಶವನ್ನು ಚಿನ್ನದ ಹಕ್ಕಿ ಎಂದು ಕರೆಯುವಷ್ಟು ಪ್ರಬಲವಾಗಿತ್ತು. ಇದನ್ನು ಮತ್ತೊಮ್ಮೆ ಸಾಧಿಸಲು, ನಾವು ನಮ್ಮ ಯುವ ಕೌಶಲ್ಯ, ಪ್ರತಿಭೆ ಮತ್ತು ಶಕ್ತಿಯನ್ನು ಪ್ರದರ್ಶಿಸುವ ಮೂಲಕ ಸಂಘಟಿತ ಪ್ರಯತ್ನಗಳನ್ನು ಮಾಡಬೇಕಾಗಿದೆ ಮತ್ತು ಇದರಲ್ಲಿ ಯುವಕರ ಪಾತ್ರವು ಮುಖ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ದಕ್ಷಿಣ ಕೊರಿಯಾದ ಕೊರಿಯಾ ನ್ಯಾಷನಲ್ ಸ್ಪೋರ್ಟ್ಸ್ ಯೂನಿವರ್ಸಿಟಿ ಅಧ್ಯಕ್ಷ ಪ್ರೊಫೆಸರ್ ಯಾಂಗ್-ಕ್ಯು ಆನಾ ಅವರಿಗೆ ಸಿಎಂಆರ್ ವಿಶ್ವವಿದ್ಯಾನಿಲಯವು ಗೌರವ ಪದವಿಯನ್ನು ನೀಡಿ ಗೌರವಿಸಿತು.ಸಿಎಂಆರ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, ಡಾ.ಸವಿತಾ ರಾಮಮೂರ್ತಿ, ಡಾ. ತ್ರಿಷ್ಠ ರಾಮಮೂರ್ತಿ ಮುಂತಾದ ಗಣ್ಯರು ಉಪಸ್ಥಿತರಿದ್ದರು.

---

## ಟಿಪ್ಪು ಜಪ ಮಾಡುವವರಿಗೆ ರಾಜಕೀಯವಾಗಿ ಬುದ್ಧಿ ಕಲಿಸಿ: ಸಿ.ಟಿ.ರವಿ ಕರೆ



**ಉದಯಕಾಲ ನ್ಯೂಸ್**

**ಬೆಂಗಳೂರು/ ಮಂಡ್ಯ:** ಟಿಪ್ಪು ಜಪ ಮಾಡುವವರಿಗೆ ರಾಜಕೀಯವಾಗಿ ಬುದ್ಧಿ ಕಲಿಸಿ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಕರೆ ನೀಡಿದ್ದಾರೆ. ಮಂಡ್ಯದ ಮೈ ಶುಗರ್ ಕಾರ್ಖಾನೆ ಮೈದಾನದಲ್ಲಿ ನಡೆದ ಜಿಲ್ಲಾ ಮಟ್ಟದ ಯುವ ಸಮಾವೇಶದಲ್ಲಿ ಮಾತನಾಡಿದ ಅವರು, ಮಂಡ್ಯ ಎಂದರೆ ಕನ್ನಡ. ಟಿಪ್ಪು ಆಡಳಿತ ಭಾಷೆಪಾರ್ಸಿಯನ್ನು ಜಾರಿಗೆ ತಂದಿದ್ದ. ಅದು ನಮ್ಮ ಅಪ್ಪನ, ತಾತನ ಭಾಷೆಯಲ್ಲ. ತಲೆ ಕೆಟ್ಟವರೂ ಕೂಡ ಪಾರ್ಸಿ ಭಾಷೆಯನ್ನು ಆಡಳಿತ ಭಾಷೆ ಮಾಡಿದ ಟಿಪ್ಪು ಮತ್ತು ಅವನಪ್ಪನನ್ನು ಕನ್ನಡ ಪ್ರೇಮಿ ಎನ್ನಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಮಂಡ್ಯ ಜನರಿಗಾಗಿ ರಾಜಕಾರಣ ಮಾಡಲು ಪರಿವರ್ತನೆ ಅನಿವಾರ್ಯ. ಕುಟುಂಬಕ್ಕಾಗಿ ರಾಜಕಾರಣ ಮಾಡುವುದಲ್ಲ ಎಂದು ತಿಳಿಸಿದ ಅವರು, ನಾನು ವಿಶ್ವೇಶ್ವರಯ್ಯ, ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್ ಅವರನ್ನು ನೆನಪಿಸಿಕೊಳ್ಳುತ್ತೇನೆ. ನೀರು ಕೊಟ್ಟ, ಸಕ್ಕರೆ ಕಾರ್ಖಾನೆ, ಮೈಸೂರು ಬ್ಯಾಂಕ್, ಉಕ್ಕಿನ ಕಾರ್ಖಾನೆ ಸ್ಥಾಪಿಸಿದವರು ಎಂದು ಅವರನ್ನು ನೆನಪಿಸುತ್ತೇವೆ. ಆದರೆ, ಕೆಲವರು ಟಿಪ್ಪು, ಟಿಪ್ಪು ಎನ್ನುತ್ತಾರೆ. ಮಂಡ್ಯಕ್ಕೆ ಟಿಪ್ಪುವಿನ ಕೊಡುಗೆ ಏನೆಂದು ಅವರನ್ನು ಪ್ರಶ್ನಿಸಿ ಎಂದರು.

ಇಡೀ ಮಂಡ್ಯದ ಏಳೂ ಕ್ಷೇತ್ರಗಳಲ್ಲಿ ಪರಿವರ್ತನೆ ಆಗಲಿದೆ. ಕಮಲ ಚಿಹ್ನೆಯ ಬಿಜೆಪಿ ಗೆದ್ದು ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಂವಿಧಾನದಲ್ಲಿ ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆ ಗಳಿಗೋಸ್ಕರ ಎಂದು ಬರೆದಿದೆ. ಕುಟುಂಬದಿಂದ ಕುಟುಂಬಕ್ಕಾಗಿ, ಕುಟುಂಬಕ್ಕೋಸ್ಕರ ಎಂದು ಬರೆದಿದೆಯಾ ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಕುಟುಂಬದಿಂದ, ಕುಟುಂಬಕ್ಕಾಗಿ ಮತ್ತು ಕುಟುಂಬಕ್ಕೋಸ್ಕರ ಎಂದು ಸಂವಿಧಾನವನ್ನು ಅರ್ಥ ಮಾಡಿಕೊಂಡಿವೆ ಎಂದು ಟೀಕಿಸಿದರು.

ರಾಜ್ಯದ ಸಚಿವ ಕೆ.ಸಿ. ನಾರಾಯಣಗೌಡ, ರಾಜ್ಯ ಕಾರ್ಯದರ್ಶಿ ಜಗದೀಶ್ ಹಿರೇಮನಿ, ಒಬಿಸಿ ಮೋರ್ಚಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಯಶ್‌ಪಾಲ್ ಎ ಸುವರ್ಣ, ಯುವ ಮೋರ್ಚಾ ರಾಜ್ಯ ಅಧ್ಯಕ್ಷ ಡಾ.ಸಂದೀಪ್, ಪಕ್ಷದ ಪದಾಧಿಕಾರಿಗಳು, ಯುವ ಮೋರ್ಚಾ ಮುಖಂಡರು, ಜನಪ್ರತಿನಿಧಿಗಳು ಭಾಗವಹಿಸಿದ್ದರು.

---

## ಯೆನೆಪೊಯ ವಿಶ್ವ ವಿದ್ಯಾನಿಲಯ ಟ್ರಸ್ಟ್‌ಗೆ ಮಾನ್ಯತೆ




**ಉದಯಕಾಲ ನ್ಯೂಸ್**

**ಮಂಗಳೂರು:** ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಸರ್ಕಾರ ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ನ ಶಿಫಾರಸುಗಳ ಆಧಾರದ ಮೇಲೆ ಯೆನೆಪೊಯ ವಿಶ್ವ ವಿದ್ಯಾನಿಲಯ ಟ್ರಸ್ಟ್‌ಗೆ ಮಾನ್ಯತೆ ನೀಡಲಾಯಿತು. ಯುಜಿಸಿ ಕಾಯಿದೆ, 1956 ರ ಸೆಕ್ಷನ್ 3ಎ ಅಡಿಯಲ್ಲಿ ಯುನಿವರ್ಸಿಟಿ ಸ್ಥಾನಮಾನವೆಂದು ಪರಿಗಣಿಸಲಾಗಿದೆ, 2008ರಲ್ಲಿ ಯೆನೆಪೊಯ ಡೆಂಟಲ್ ಕಾಲೇಜ್‌ಘಟಕ ಇದ್ದು, 15 ವರ್ಷಗಳ ಅವಧಿಯಲ್ಲಿವಿಶ್ವವಿದ್ಯಾನಿಲಯವು 10 ಘಟಕಗಳನ್ನು ಒಳಗೊಂಡಂತೆ ಬೆಳೆದಿದೆ. ಸುಮಾರು 7000 ವಿದ್ಯಾರ್ಥಿಗಳು ಆರೋಗ್ಯ ಮತ್ತು ಸಾಮಾನ್ಯ ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ಕೋರ್ಸ್‌ಗಳನ್ನು ಅನುಸರಿಸುತ್ತಿದ್ದಾರೆ. , ಪ್ರಸ್ತುತ ವಿಶ್ವವಿದ್ಯಾನಿಲಯವು ಎ+ ಗ್ರೇಡ್ (ಎರಡನೇ ಚಕ್ರ) ನೊಂದಿಗೆ ಮಾನ್ಯತೆ ಪಡೆದಿದೆ. ಪ್ರಸ್ತುತ ವಿಶ್ವವಿದ್ಯಾ ನಿಲಯವು ಮಂಗಳೂರಿನಲ್ಲಿ ಸುಮಾರು 100 ಎಕರೆ ಪ್ರದೇಶದಲ್ಲಿ 5 ವಿವಿಧ ಕಾಂಪಸ್‌ಗಳಿಂದ ಕಾರ್ಯನಿರ್ವಹಿಸುತ್ತಿದೆ.ಅಕಾಡೆಮಿಕ್‌ಗಳ ಜೊತೆಗೆ, ವಿಶ್ವವಿದ್ಯಾನಿಲಯವು ಅತ್ಯಾಧುನಿಕ ಸಂಶೋಧನಾ ಕೇಂದ್ರ, ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗಾಗಿ ಅತ್ಯಾಧುನಿಕ ಕೌಶಲ, ಪ್ರಯೋಗಾಲಯ ಮತ್ತು ಶಸ್ತ್ರಚಿಕಿತ್ಸಾ ತರಬೇತಿ ಪ್ರಯೋಗಾಲಯ ಹೊಂದಿದೆ. ಯೆನೆಪೊಯ ಮೆಡಿಕಲ್ ಕಾಲೇಜು ಆಸ್ಪತ್ರೆಯು 1100 ಕ್ಕೂ ಹೆಚ್ಚು ಹಾಸಿಗೆಗಳನ್ನು ಹೊಂದಿರುವ ವೈದ್ಯಕೀಯ ಕಾಲೇಜಿಗೆ ಲಗತ್ತಿಸಲಾದ ಬೋಧನಾ ಆಸ್ಪತ್ರೆಯಾಗಿದ್ದು, ಅಗತ್ಯವಿರುವವರಿಗೆ ಉಚಿತ ಮತ್ತು ಹೆಚ್ಚು ಸಬ್ಸಿಡಿ ವಿಶೇಷ ಮತ್ತು ಸೂಪರ್ ಸ್ಪೆಷಾಲಿಟಿ ಸೇವೆಗಳನ್ನು ನೀಡುತ್ತದೆ. ಆಸ್ಪತ್ರೆಯು ಹೆಚ್ಚಿನ ಸರ್ಕಾರಿ ವಿಮಾ ಯೋಜನೆಗಳ ವ್ಯಾಪ್ತಿಯ ರೋಗಿಗಳಿಗೆ ಸಂಪೂರ್ಣವಾಗಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತದೆ. ಸಾಮಾನ್ಯ ಸೇವೆಗಳ ಹೊರತಾಗಿ, ಆಸ್ಪತ್ರೆಯು ರೊಬೊಟಿಕ್ ಸರ್ಜರಿ, ಮೂತ್ರಪಿಂಡ ಕಸಿಸೇವೆಗಳನ್ನು ಸಹ ನೀಡುತ್ತದೆ.ಆಸ್ಪತ್ರೆಯು ಕಳೆದ ದಶಕದಿಂದ ಕ್ಯಾನ್ಸರ್ ರೋಗಿಗಳಿಗೆ ಅತ್ಯಂತ ಕೈಗೆಟುಕುವ ವೆಚ್ಚದಲ್ಲಿ ತನ್ನ ಪರಿಣಿತ ತಂಡ ಮತ್ತು ಸುಧಾರಿತ ಸಾಧನಗಳೊಂದಿಗೆ ಸೇವೆ ಸಲ್ಲಿಸುತ್ತಿದೆ.

---

## ಟಿಕೆಟ್‌ರಹಿತ ಪ್ರಯಾಣಿಕರಿಂದ 6,77,190 ರೂ.ದಂಡ ವಸೂಲಿ

**ಉದಯಕಾಲ ನ್ಯೂಸ್**

**ಬೆಂಗಳೂರು:** ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವಾಹನಗಳಲ್ಲಿ ಸಂಚರಿಸುವ ಪ್ರಯಾಣಿಕರು ಟಿಕೇಟನ್ನು ಪಡೆಯದೆ ಅನಧಿಕೃತವಾಗಿ ಪ್ರಯಾಣ ಮಾಡುವವರನ್ನು ಮತ್ತು ಸಂಸ್ಥೆಯ ಸಾರಿಗೆ ಆದಾಯದ ಸೋರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ, ನಗರದಾದ್ಯಂತ ಸಂಚರಿಸುವ ವಾಹನಗಳನ್ನು ನಮ್ಮ ಸಂಸ್ಥೆಯ ತನಿಖಾ ತಂಡಗಳು ಜನವರಿ-2023 ರ ಮಾಹೆಯಲ್ಲಿ ಒಟ್ಟು 16,226 ಟ್ರಿಪ್‌ಗಳನ್ನು ತಪಾಸಿಸಿ 3591 ಟಿಕೇಟ್ ರಹಿತ ಪ್ರಯಾಣಿಕರನ್ನು ಪತ್ತೆ ಹಚ್ಚಿ, ಅವರಿಂದ ಒಟ್ಟು ರೂ. 6,77,190/- ದಂಡ ವಸೂಲಿ ಮಾಡಿ ಸಂಸ್ಥೆಯ ನಿರ್ವಾಹಕರ ವಿರುದ್ಧ 1521 ಪ್ರಕರಣಗಳನ್ನು ದಾಖಲಿಸಿರುತ್ತಾರೆ.

ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಕುಳಿತು ಪ್ರಯಾಣಿಸಿರುವ 322 ಪುರುಷ ಪ್ರಯಾಣಿಕರಿಂದ ಒಟ್ಟು ರೂ. 32,200/- ಅನ್ನು ಮೋಟಾರು ವಾಹನ ಕಾಯ್ದೆ 1988ರ ಕಾಲಂ 177 ಮತ್ತು 94 ರ ಪ್ರಕಾರ ದಂಡ ವಿಧಿಸಲಾಗಿರುತ್ತದೆ.ಪ್ರಯಾಣಿಕರು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸುವಾಗ ಅಧಿಕೃತ ಟಿಕೇಟ್/ ದಿನದ ಪಾಸು / ಮಾಸಿಕ ಪಾಸುಗಳನ್ನು ಹೊಂದಿ ಪ್ರಯಾಣಿಸುವುದು. ಇದರಿಂದ ಅನಗತ್ಯ ದಂಡ ಕಟ್ಟುವುದನ್ನು ತಡೆಯಬಹುದಾಗಿದೆ ಹಾಗೂ ಇಂತಹ ಪ್ರವೃತ್ತಿಯಿಂದ ಸಂಸ್ಥೆಯು ಉತ್ತಮ ಸೇವೆಯನ್ನು ಪ್ರಯಾಣಿಕರಿಗೆ ನೀಡಲು ಸಹಾಯವಾಗುತ್ತದೆ. ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಪುರುಷ ಪ್ರಯಾಣಿಕರು ಆಸನಗಳನ್ನು ತೆರವು ಮಾಡಿಕೊಡುವ ಮೂಲಕ ಅವರಿಗೆ ಕುಳಿತುಕೊಳ್ಳಲು ಅವಕಾಶ ನೀಡಬೇಕೆಂದು ನಿಗಮದ ಪ್ರಕಟಣೆ ತಿಳಿಸಿದೆ.

---



**ದಾಸನಪುರ:** ಹಾರೋಕ್ಯಾತನಹಳ್ಳಿ ಗ್ರಾಮದ ಭಗವಾನ್ ಭಗವತಿ ದೇವಾಲಯದ ಆವರಣದಲ್ಲಿ ನಡೆದಾಡುವ ದೇವರು ತ್ರಿವಿಧ ದಾಸೋಹಿ ಶಿವಕುಮಾರ ಸ್ವಾಮೀಜಿ ಪುಣ್ಯಸ್ಮರಣೆ ಅಂಗವಾಗಿ ಅನ್ನದಾಸೋಹ ಕಾರ್ಯಕ್ರಮವನ್ನು ಯುವ ಮುಖಂಡ ನಾಗೇಶ್ ಸಾರಥ್ಯದಲ್ಲಿ ಏರ್ಪಡಿಸಲಾಗಿತ್ತು. ಗ್ರಾಪಂ ಸದಸ್ಯರಾದ ಅನಿತಾ ನಾಗೇಶ್, ಗೋವಿಂದರಾಜು, ವೆಂಕಟೇಶ್ ಇದ್ದರು.

---

# ಸಮೃದ್ಧ ಕರ್ನಾಟಕಕ್ಕೆ ಬಿಜೆಪಿಯ ಭರವಸೆ ಘೋಷಣೆಯಡಿ ಕೆಲಸ: ಸುಧಾಕರ್



**ಉದಯಕಾಲ ನ್ಯೂಸ್**

**ಬೆಂಗಳೂರು:** ಬಿಜೆಪಿ ಸರಕಾರ ಜನ ಸಾಮಾನ್ಯರ ಸರಕಾರ. ಜನಸಾಮಾನ್ಯರ ಸಿಎಂ ಆಗಿ ಬಸವರಾಜ ಬೊಮ್ಮಾಯಿಹೊರಹೊಮ್ಮಿದ್ದಾರೆ ಎಂದು ರಾಜ್ಯದ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವ ಡಾ|| ಕೆ. ಸುಧಾಕರ್ ತಿಳಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ''ಜಗನ್ನಾಥ ಭವನ''ದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಪ್ರಣಾಳಿಕೆ ಸಲಹಾ ಸಮಿತಿಯು ಸಮೃದ್ಧ ಕರ್ನಾಟಕವೇ ಬಿಜೆಪಿಯ ಭರವಸೆ ಎಂಬ ಘೋಷಣೆಯೊಂದಿಗೆ ಕೆಲಸ ಮಾಡಲಿದೆ. ಚುನಾವಣೆ ಹೊಸ್ತಿಲಲ್ಲಿ ನಾವಿದ್ದೇವೆ. ಕರ್ನಾಟಕವನ್ನು ಹೆಮ್ಮೆಯ ರಾಜ್ಯವನ್ನಾಗಿ ಮಾಡಲು ಬದ್ಧರಿದ್ದೇವೆ. ಭವ್ಯ ಭವಿಷ್ಯಕ್ಕೆ ನಾವು ಸಿದ್ಧತೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಕನಿಷ್ಠ 50 ಸೆಕ್ಟರ್ ಸಭೆಗಳನ್ನು ಮಾಡಲಾಗುವುದು. ತೋಟಗಾರಿಕೆ, ರೇಷ್ಮೆ ಸೇರಿ ಕೃಷಿ ವಲಯದ ಸಭೆ, ಕೈಗಾರಿಕೆ, ಸಣ್ಣ ಮಧ್ಯಮ, ಗುಡಿ ಕೈಗಾರಿಕೆ ಸಬಲೀಕರಣಕ್ಕೆ ತಂಡದ ಸಭೆ ನಡೆಸಲಾಗುತ್ತದೆ. ಈ ಸೆಕ್ಟರ್ ಸಭೆಗಳಲ್ಲಿ ಕೇಂದ್ರ ಸಚಿವರು, ಹಿರಿಯ ನಾಯಕರು ಪಾಲ್ಗೊಳ್ಳುತ್ತಾರೆ ಎಂದು ವಿವರ ನೀಡಿದರು.

8 ಸಾವಿರ ಸಲಹಾ ಪೆಟ್ಟಿಗೆ: ವಾಟ್ಸಪ್ ಸಂಖ್ಯೆ +91 8595158158 ಗೆ ಜನಸಾಮಾನ್ಯರು ಪ್ರಣಾಳಿಕೆ ಕುರಿತು ಸಲಹೆ ನೀಡಬಹುದು. ಕ್ಯೂ ಆರ್ ಕೋಡ್ ಮೂಲಕ ಸಲಹೆ ನೀಡಬಹುದು. ಮಂಡಲದ ವಿವಿಧೆಡೆ 25 ಬಾಕ್ಸ್ ಸೇರಿ ಒಟ್ಟು 8 ಸಾವಿರ ಸಲಹಾ ಪೆಟ್ಟಿಗೆ ಇಡಲಾಗುವುದು. ವೆಬ್ ಸೈಟ್ ಇದ್ದು ಅದನ್ನು ಬಾಕ್ಸ್ ಮೇಲೆ ತಿಳಿಸಿದ್ದೇವೆ. ರಾಜ್ಯದ ಒಂದು ಕೋಟಿಗೂ ಹೆಚ್ಚು ಜನರನ್ನು ತಲುಪುವ ಗುರಿ ಇದೆ ಎಂದರು. ಮಾರ್ಚ್ 25ರವರೆಗೆ 224 ಕ್ಷೇತ್ರಗಳಲ್ಲೂ ಸಭೆ ನಡೆಯಲಿದೆ.

ಜೊತೆಗೆ ವಿಡಿಯೋ ವ್ಯಾನ್ ಪ್ರಗತಿ ರಥದಲ್ಲೂ ಸಲಹಾ ಪೆಟ್ಟಿಗೆ ಇರುತ್ತದೆ ಎಂದು ತಿಳಿಸಿದರು.

ಪ್ರತಿ ವರ್ಗದ ಜನರಿಗೆ ಅಭಿವೃದ್ಧಿಯ ಅಮೃತವನ್ನು ತಮ್ಮ ಬಜೆಟ್ ಮೂಲಕ ಮುಖ್ಯಮಂತ್ರಿಯವರು ನೀಡಿದ್ದಾರೆ.

ಕಾಂಗ್ರೆಸ್ ಕೇವಲ 38 ಶೇ. ಭರವಸೆ ಅನುಷ್ಠಾನ ಮಾಡಿತ್ತು. ಕೋವಿಡ್, ಅತಿವೃಷ್ಟಿಯ ವಿಕೋಪ ಇದ್ದರೂ, ಆರ್ಥಿಕ ಹಿಂಜರಿತದ ನಡುವೆ ಇಷ್ಟು ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ನಮಗೆ ಸ್ಪಷ್ಟ ಬಹುಮತವನ್ನು ಕೊಡಿ. ನೂರಕ್ಕೆ ನೂರು ಭರವಸೆಗಳನ್ನು ಈಡೇರಿಸುತ್ತೇವೆ ಎಂದು ತಿಳಿಸಿದರು.

ಡಬಲ್ ಎಂಜಿನ್ ಸರಕಾರವು ದೇಶ ಮತ್ತು ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದೆ.

ರೈಲ್ವೆ ಸೇರಿ ಅನೇಕ ರಾಷ್ಟ್ರೀಯ ಯೋಜನೆಗಳಾಗಿವೆ. ವಿಮಾನನಿಲ್ದಾಣಗಳ ಅಭಿವೃದ್ಧಿಗೆ ಕೇಂದ್ರ- ರಾಜ್ಯ ಸರಕಾರಗಳು ಶ್ರಮಿಸಿವೆ ಎಂದರು.

## UK ಅಭಿಮತ

# ಎಲ್ಲರನ್ನೂ ಒಳಗೊಳ್ಳುವ ಜಾತ್ರೆಗಳು

ಜಾತ್ರೆ ಎಂದರೆ ಅಲ್ಲಿ ಜನರ ಸೇರುವಿಕೆ ಇರುತ್ತದೆ. ನಾಡಿನ ವಿವಿಧ ಭಾಗಗಳಿಂದ ವಿವಿಧ ವರ್ಗಗಳ ಜನರು ಅಲ್ಲಿ ಸೇರುತ್ತಾರೆ. ತಮ್ಮ ಶಕ್ತ್ಯಾ ಭಕ್ತಿಯ ಸಮರ್ಪಣೆ ಮಾಡುತ್ತಾರೆ. ಜಾತ್ರೆ ಬಡವ -ಬಲ್ಲಿದ, ಮೇಲು ಕೀಳನ್ನು ಪಂಡಿತ-ಪಾಮರರೆನ್ನದೇ ಎಲ್ಲರನ್ನು ಒಳಗೊಳ್ಳುವ ಒಂದು ಉತ್ಸವ. ಮಾಡಿದಷ್ಟು ಭಿಕ್ಷೆ ಎನ್ನುವಂತೆ ದೇವರು, ವರ ನೀಡುತ್ತಾನೆ ಎನ್ನುವುದು ಆಸ್ತಿಕರ ನಂಬಿಕೆ. ಈ ಹಬ್ಬ, ಜಾತ್ರೆಗಳು ಕಾಲ, ಋತುಮಾನಕ್ಕೆ ತಕ್ಕಂತೆ ಬರುತ್ತವೆ. ಈ ಜಾತ್ರೆಗಳು ಚಳಿಗಾಲದ ಅಂತ್ಯಕ್ಕೆ ಜನವರಿ ಮಧ್ಯಭಾಗದಿಂದ ಪ್ರಾರಂಭವಾಗುತ್ತವೆ.

ಕೊಲ್ಲಾರಿ ಬಂಡಿ: ಜಾತ್ರೆಗೆ ಸಿದ್ಧತೆ ತಿಂಗಳು ಹಿಂದಿನಿಂದಲೇ ಆರಂಭವಾಗಿರುತ್ತದೆ. ಕೊಲ್ಲಾರಿ ಬಂಡಿ ಹೂಡುವರು ತಮ್ಮ ಚಕ್ಕಡಿಯ (ಬಂಡಿಯ) ಗಾಲಿಗಳ ಹಳಿಗಳನ್ನು ಸರಿಪಡಿಸುವುದು, ಬಿದಿರಿನಿಂದ ಮಾಡಿರುವ ಕೊಲ್ಲಾರಿಗಳನ್ನು ತೊಳೆದು ಔಡಲ ಎಣ್ಣೆಯನ್ನು ಹಚ್ಚಿ ಅವುಗಳನ್ನು ನುಣುಪುಗೊಳಿಸುವುದು, ಬಂಡಿಗೆ, ಚಕ್ಕಡಿಗೆ ಹೂಡುವ ಎತ್ತುಗಳನ್ನು ಹತ್ತಿಕಾಳು, ನುಚ್ಚು, ಹೊಟ್ಟು ತಿನ್ನಿಸುವುದರ ಮೂಲಕ ಕುಸ್ತಿಪಟುಗಳಂತೆ ರೈತರು ಅವುಗಳನ್ನು ತಯಾರಿಗೊಳಿಸುತ್ತಿದ್ದರು. ಇತ್ತ ಹೆಣ್ಮಕ್ಳು ಜಾತ್ರೆಗೆ ಬೇಕಾದ ರೊಟ್ಟಿ, ಗುರೆಳ್ಳು ಪುಡಿ, ಶೇಂಗಾ ಚಟ್ನಿ. ಕಡಲೆ ಚಟ್ನಿ, ಪಲ್ಯಕ್ಕೆ ಬೇಕಾದ ಹೆಸರುಕಾಳು, ಅವರೆಕಾಳು, ಮಡಿಕೆಕಾಳು ಹಸನು ಮಾಡುವುದು ನಡೆದೇ ಇರುತ್ತಿತ್ತು.

ಇನ್ನು ಜಾತ್ರೆಗೆ ಹೊರಡುವ ಸಡಗರವೇ ಕಣ್ಣಿಗೆ ಕಟ್ಟುವಂತೆ ಇರುತ್ತದೆ. ಜಾತ್ರೆಗೆ ಬೇಕಾದ ಎಲ್ಲ ವಸ್ತುಗಳನ್ನು ಪೆಟ್ರಿಕಿ, ಟ್ರಂಕ್‌ಗಳಲ್ಲಿ ಇಟ್ಟುಕೊಂಡು ಚಿಕ್ಕಮಕ್ಕಳು ಸೇರಿದಂತೆ, ಹೆಣ್ಮಕ್ಳು ಚಕ್ಕಡಿಯಲ್ಲಿ ಕುಳಿತುಕೊಂಡಿರುತ್ತಾರೆ. ಮನೆಯ ಯಜಮಾನರು ಊರ ಅಗಸ್ಯಾಗ ನಿಂತು ನಿಧಾನ ವೋಗ್ರಿ, ಎತ್ತುಗಳನ್ನು ಹರ್ಕಿಬಿಡಬೇಡಿ, ಹೊಳ್ಯಾಗ ಹುಷಾರ್ ದಾಟಿಸಿ, ಚಕ್ಡಿ ಹಿಂದ್ ಚಕ್ಡಿ ಬಿಡ್ರಿ, ಊರಿನ ಚಕ್ಡಿ ಜೊತೆಗೆ ನಮ್ಮ ಚಕ್ಡಿ ಸಾಗಲಿ, ಅಂತಾ ಚಕ್ಡಿ ಮುಖ್ದ ಮ್ಯಾಲೆ ಕುಂತ ಮಗನಿಗೆ ಹೇಳ್ತಾ ಇರ್ತಾರೆ. ಎತ್ತುಗಳಿಗೆ ಅಲಂಕಾರ: ಎತ್ತುಗಳಿಗೆ ಬೆಳ್ಳಿ ಕೊಡಂಬೂಸ, ಕಾಲ್ಗೆಜ್ಜೆ, ಹಣೆಪಟ್ಟಿ, ರೇಷ್ಮೆ ಜೂಲಾ, ಕೊರಳಲ್ಲಿ ಗೆಜ್ಜೆ ಕಟ್ಟುತ್ತಿದ್ದರು. ಊರು ದಾಟುತ್ತಲೇ ಲೇ ರಾಮ,ಲೇ ಲಕ್ಷ್ಮಣ ,ಹಾ, ಹಾ ಎನ್ನುತ್ತಾ, ಏ ಇವನೌನು ಎಂದು ಹೇಳುತ್ತಾ, ಬಾರ್ಕೋಲು ಎತ್ತುತ್ತಲೇ ಎತ್ತುಗಳು ಹರ್ಕಿ ಬೀಳುತ್ತಿದ್ದವು. ಚಕ್ಡಿಯ ಹಿಂದುಗಡೆ ಕೆಂದೂಳು ಆಕಾಶಕ್ಕೆ ಏಣಿ ಹಾಕುತಿತ್ತು. ಇವರ ಚಕ್ಡಿ ಗೆ ನಮ್ದೆನು ಕಡ್ಮೆ ಎಂಬಂತೆ ಬೇರೆಯವರು ಚಕ್ಡಿ ಗಳನ್ನು ಓಡಿಸುತ್ತಿದ್ದರು. ಚಕ್ಡಿ ಒಳಗಡೆ ಕುಳಿತ ಹುಡ್ರು ಕೇ ವೋ ಕೇ ವೋ ಎನ್ನುತ್ತಾ ಕೇಕೆ ಹಾಕುತ್ತಿದ್ದರೆ... ಹೆಣ್ಮಕ್ಳು ಏಳುಕೋಟಿ, ಏಳು ಕೋಟಿಗೋ ಎನ್ನುತ್ತಿದ್ದರು. ಹೀಗೆ ಚಕ್ಡಿ ಸಾಗುವಾಗ ಚಿಕ್ಕ ಮಕ್ಕಳಿಗೆ ರೋಮಾಂಚನವಾದರೆ, ಮುಖದ ಮ್ಯಾಲೆ ಕುಂತ ಹೋರಿ ಮಾಲಿಕನಿಗೆ ತನ್ನ ಎತ್ತುಗಳ ಶಕ್ತಿಯ ಅನಾವರಣದ ಹೆಮ್ಮೆ ಒಂದು ಕಡೆಗೆ ಇರುತ್ತಿತ್ತು .ಕೆಲವೊಮ್ಮೆ ಈ ಹರ್ಕಿ ಬಿಡುವ ಸಂದರ್ಭದಲ್ಲಿ ಹೊಡೆದಾಟಗಳು ಆಗಿದ್ದುಂಟು! ಆ ಹೊಡೆದಾಟಗಳು ಊರ- ಊರ ನಡುವೆ ನಡೆಯುತ್ತಿದ್ದವು.ಈ ಹೊಡೆದಾಟಗಳು ಬಹು ವರ್ಷಗಳ ವರೆಗೂ ಮುಂದುವರೆಯುತ್ತಿದ್ದವು ಎನ್ನುವುದು ವಿಶೇಷ . ಇಂತಹ ಕೊಲ್ಲಾರಿ ಬಂಡೆಗಳೊಂದಿಗೆ ಜಾತ್ರೆಗಳಿಗೆ ಹೋದ ನೆನಪುಗಳು ಈಗಿನ ಮಕ್ಕಳಿಗೆ ಇಲ್ಲವೆಂದೇ ಹೇಳಬಹುದು. ಕಳೆದ ಒಂದು ದಶಕದಿಂದೀಚೆಗೆ ಕೊಲ್ಲಾರಿ ಬಂಡೆಗಳನ್ನು ಬೈಕ್, ಕಟ್ಮಾ, ಆಟೋ, ಟಂ ಟಂ, ಟಾ ಟಾ ಎಸಿ, ಟ್ರ್ಯಾಕ್ಟರ್ ಆಕ್ರಮಿಸಿಕೊಂಡಿವೆ. ಜಾತ್ರೆ ನಡೆದು ಹೋದ ನಂತರ ಹೊಲಗಳಲ್ಲಿ ರಾಶಿ ರಾಶಿ ಸಗಣಿ ಬಿದ್ದಿರುತಿತ್ತು. ಈಗ ಜಾತ್ರೆ ನಡೆದು ಹೋದ ನಂತರ ಈ ವಾಹನಗಳ ಆಯಿಲ್ ಸೋರುವಿಕೆ ಹೊಲಗಳ ಅಲ್ಲಲ್ಲಿ ಕಂಡುಬರುತ್ತಿದೆ. ಈ ಮೂಲಕ ಭೂಮಿ ಬಂಜರು, ವಿಷಯುಕ್ತ ಮಾಡಲು ಪ್ರಯತ್ನ ನಡೆಯುತ್ತಿದೆ.

- ಮಲ್ಲಪ್ಪಫ ಕರೇಣ್ಣನವರ
ಹವ್ಯಾಸಿ ಬರಹಗಾರರು
ಮೊ: 9742486813

## ಉದಯ ಬಂಧ - 280

-ರಾಜಾ ಸಂಗಮೇಶ ಹಿರೇಮಠ
ಮೊ:8880333842



ಎಡದಿಂದ ಬಲಕ್ಕೆ
1.ಒಬ್ಬೊಬ್ಬರಿಗೊಂದೊಂದು ಮಾಡುವವ(4)
3.ಅತಿವೇಗವಾದ ಓಟ(4)
5.ಬುದ್ಧಿಯಿಲ್ಲದವ ತಿರುಗಿದ್ದಾನೆ(4)
7.ವಾಲಾಡದೇ ಬನದಲ್ಲಿ ಕುಳಿತ ಸಬಲ(4)
9.ತಕ್ಷಣ ನಮಸ್ಕಾರ ಮಾಡಿದ ಕಳ್ಳ(3)
10.ಅರದ ನಡುವೆ ಬಹಳಷ್ಟಿದೆ(3)
12.ಶಾಲಾಮಕ್ಕಳ ಒಂದೇ ರೀತಿಯ ಉಡುಪು(4)
14.ಇಂಗ್ಲೀಷ್ ವರ್ಷದ ಮೊದಲ ತಿಂಗಳು(4)
16.ಪದ-ಗಸ್ತು ಒಳಗೊಂಡ ಸಮೃದ್ಧವಾದುದು(4)
17.ಮನುಷ್ಯರನ್ನು ಬಲಿಕೊಡುವ ಯಜ್ಞ(4)

ಮೇಲಿನಿಂದ ಕೆಳಕ್ಕೆ
2.ಈಕೆ ಶಿವನ ಪತ್ನಿ(3)
4.ಅನುಗಾಲ ಇರುವ ಹಳ್ಳಿಗ(3)
5.ರಕ್ಕಸನಂತೆ ನಿರ್ದಯನಾದ ಮನುಷ್ಯ(5)
6.ಮತ್ತೆ ಹೇಳಿದ ಅಭಿಪ್ರಾಯ(2)
7.ಅಂಬರದಿಂದ ಮಳೆ ಬೀಳದೇ ಉಂಟಾದ ಕ್ಷಾಮ(2)
8.ವಿಷ್ಣುವಿನ ನಾಲ್ಕನೆಯ ಅವತಾರ(5)
10.ಶಾಸ್ತ್ರ ಕಲಿತದ್ದು ಈ ಆಯುಧದ ಬಗ್ಗೆ(2)
11.ಜರಡಿಯಲ್ಲಿ ಉಳಿದ ಕಸ(2)
13.ದರವನ್ನು ಹೇಳಿ ಕೃಪೆ ತೋರಿದ್ದು(3)
15.ನೇಯ್ಗೆ ಕೆಲಸ ಮಾಡುವವ(3)

**ಉದಯ ಬಂಧ - 279 ಉತ್ತರ:**

ಎಡದಿಂದ ಬಲಕ್ಕೆ :1.ಪತ್ರ 3.ಲವ 4.ಸೂಕಳ 6.ಕ್ರಮಿಸು 7.ವಿವರ 9.ನಕಲು 11.ಸುಲಭ 12.ಕಠೋರ 14.ದ್ರವ 15.ನದಿ

ಮೇಲಿನಿಂದ ಕೆಳಕ್ಕೆ :1.ಪತ್ರ 2.ಲವ 4.ಸೂಕಳ 6.ಕ್ರಮಿಸು 7.ವಿವರ 9.ನಕಲು 11.ಸುಲಭ 12.ಕಠೋರ 14.ದ್ರವ 15.ನದಿ

### ಉದಯರಶ್ಮಿ — ಚೆಲುವಿ ಚಿನಕುರುಳಿ



ನೀ ನಸುಕು
ಒಟ್ಟಿಗಿರುವೆ
ನಾ ಇಬ್ಬನಿಯಂತೆ;
ನೀನಾಗಲು ಬಿಸಿಲು
ಮಾಯವಾಗುವೆ
ಕಾಣದಂತೆ !!

- ನಾಗೇಶ್ ಜಿ. ವೈದ್ಯ

### ಕಿಡಿನುಡಿ



ಸಂಸದ ಜಗ್ಗೇಶ್, ಅಧಿಕಾರಿಗಳಿಬ್ಬರ (ಸಿಂಧೂರಿ V/S ರೂಪ) ಜಟಾಪಟಿ ತಡೆಗೆ ಪ್ರಧಾನಮಂತ್ರಿ ಮತ್ತು ಗೃಹ ಮಂತ್ರಿಗಳ ಮಧ್ಯಸ್ಥಿಕೆ ಕೋರಿರುವುದನ್ನು ನೋಡಿದರೆ ಮಾನ್ಯರು ಸಮಸ್ಯೆಯನ್ನು ಎರಡು ರಾಜ್ಯಗಳ ನಡುವಿನ ಸಂಘರ್ಷವೆಂದು ಪರಿಭಾವಿಸಿದಂತಿದೆ!

- ರೇಚಂಬಳ್ಳಿ ದುಂಡಮಾದಯ್ಯ

# ಹಲಗೆಯ ಶಬ್ದ ಮಾಲಿನ್ಯವೂ ಬೋರ್ಡ್ ಪರೀಕ್ಷೆಗಳೂ...

**ಸಾಮಾನ್ಯವಾಗಿ ದಂಡ-ಪಿಂಡಗಳೆನಿಸಿಕೊಳ್ಳುವ ನಿರುದ್ಯೋಗಿ ಯುವಕರು, ಅರೆಕಾಲಿಕ-ಉದ್ಯೋಗಿಗಳು, ದುಡಿಮೆಯಲ್ಲಿ ಆಸಕ್ತಿಯಿಲ್ಲದ ಪಡ್ಡೆ ಹುಡುಗರು, ಕಲಿಕೆಯಲ್ಲಿ ನಿರಾಸಕ್ತಿ ಹೊಂದಿರುವ ಶಾಲಾ ಮಕ್ಕಳು, ಪುಗಸಟ್ಟೆ ಪ್ರಚಾರ ಗಿಟ್ಟಿಸಿಕೊಳ್ಳವ ಪುಂಡ-ಪೋಕರಿಗಳೇ ಈ ಕಾರ್ಯದಲ್ಲಿ ತೊಡಗಿರುವರು. 2-3 ರಿಂದ 5-6 ಹಲಗೆಗಳನ್ನು ಒಟ್ಟಾಗಿ, ಜೋರಾಗಿ ಬಾರಿಸುತ್ತಿದ್ದರೆ ಸುತ್ತ-ಮುತ್ತಲಿನ ಜನರ ಗತಿ ಏನಾಗಬಾರದು? ಕೆಲವು ಆಯಕಟ್ಟಿನ ಜಾಗದಲ್ಲಿ ಕುಳಿತು, ಸಂದಿ-ಸಂದಿಗಳಲ್ಲಿ, ಪ್ರಮುಖ ರಸ್ತೆಗಳಲ್ಲಿ ಸುತ್ತಾಡುತ್ತಾ ದಿನಗಟ್ಟಲೇ 8-10 ಗಂಟೆಗಳವರೆಗೆ ಹಲಗೆ ಬಾರಿಸುತ್ತಿದ್ದರೆ ಪರೀಕ್ಷೆ ತಯಾರಿಯಲ್ಲಿ ತೊಡಗಿರುವ ವಿದ್ಯಾರ್ಥಿಗಳ, ಬೌದ್ಧಿಕ ಕೆಲಸದಲ್ಲಿ ತೊಡಗಿರುವ ಉದ್ಯೋಗಿಗಳ, ರೋಗಿಗಳ, ವಯೋವೃದ್ಧರ ಪಾಡೇನು?...**

ಮಹಾಶಿವರಾತ್ರಿ ಕಳೆಯಿತೆಂದರೆ ಸಾಕು, ಬಿಸಿಲಿನ ತಾಪ ದಿನದಿಂದ ದಿನಕ್ಕೆ ತೀವ್ರಗತಿಯಲ್ಲಿ ಹೆಚ್ಚುತ್ತಾ ಹೋತುತ್ತೆ. ಬೇಸಿಗೆಯ ಪ್ರಖರತೆ ತಾಳಲಾರದ ಮನುಷ್ಯ ಜೀವ ಉಸ್ಸಪ್ಪಾ...! ಎನ್ನುತ್ತಾ ನೆರಳಿನ ಹುಡುಕಾಟದಲ್ಲಿ ತೊಡಗುತ್ತೆ. ಕೊಂಚ ನೆರಳು ಸಿಕ್ಕರೂ ಸಾಕು ಜೀವ ತಣಿಸಿಕೊಳ್ಳುತ್ತೆ. ಮಧ್ಯ ಅಥವಾ ಕೊನೆಯ ಫೆಬ್ರವರಿಯಿಂದ ಪ್ರಾರಂಭವಾದ ಈ ಧಗೆ ಒಂದೆರಡು ಉತ್ತಮ ಮಳೆ ಬೀಳುವ ಜೂನ್ ಕೊನೆಯ ವಾರದವರೆಗೂ ತನ್ನ ಬಾಹುಗಳನ್ನು ಪಸರಿಸಿರುತ್ತದೆ. ಇದೇ ಸಮಯದಲ್ಲಿ ಶೈಕ್ಷಣಿಕ ವಲಯದ ಭರ್ಜರಿ ಸರಣೀ ಪರೀಕ್ಷೆಗಳ ಆರ್ಭಟ ಕೂಡಾ. ಮಾರ್ಚ್ - ಏಪ್ರಿಲ್ ತಿಂಗಳುಗಳಲ್ಲಿ ನಡೆಯುವ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳು ಮಕ್ಕಳ ಭವಿಷ್ಯಕ್ಕೆ ತಿರುವು ಕೊಡುವ ಅತ್ಯಂತ ಪ್ರಮುಖ ಘಟ್ಟದ ಪರೀಕ್ಷೆಗಳು. ಇಂತಹ ಗಂಭೀರವಾದ ಪರೀಕ್ಷೆ ಎದುರಿಸಲು ವಿದ್ಯಾರ್ಥಿಗಳು ಜನವರಿ ತಿಂಗಳಿನಿಂದಲೇ ಗಂಭೀರವಾದ ತಯಾರಿಯಲ್ಲಿ ತಲ್ಲೀನರಾಗಿರುತ್ತಾರೆ, ಆಗಿರಬೇಕು ಕೂಡಾ. ಈ ಸಂಧರ್ಭದಲ್ಲಿ ಅವರಿಗೆ ಮನೆಯ ಒಳಗೂ ಹೋರಗೂ ಪ್ರಶಾಂತ ವಾತಾವರಣದ ಅಗತ್ಯತೆ ಇರುತ್ತದೆ. ಆದರೆ, ಉತ್ತರ ಕರ್ನಾಟಕದ ಬಹಳಷ್ಟು ಊರುಗಳಲ್ಲಿ ಅದರಲ್ಲೂ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ, ಕೆರೂರು, ಅಮ್ಮೀನಗಡ, ಇಲಕಲ್ಲೊದಲಾದ ಊರುಗಳಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿರುತ್ತದೆ.

ಶಿವರಾತ್ರಿ ಅಮವಾಸೆ ದಿನದಂದೇ ವರ್ಷಗಟ್ಟಲೇ ಮೂಲೆಯಲ್ಲಿ ಅವಿತುಕೊಂಡಿದ್ದ ಹಲಗೆಗಳು ಮಕ್ಕಳ ಕೈಸೇರಿ ನರ್ತಿಸಲಾರಂಬಿಸುತ್ತವೆ. ಕೆಲವು ಹೊಸ ಹಲಗೆಗಳೂ ಪ್ರವೇಶ ಪಡೆಯುತ್ತವೆ. ಪ್ರತಿದಿನ ಬೆಳಿಗ್ಗೆಯಿಂದಲೇ ಪ್ರಾರಂಭವಾದ ಹಲಗೆ ನುಡಿಸುವಿಕೆ ರಾತ್ರಿ 10-11 ಗಂಟೆಯವರೆಗೂ ಹತ್ತಾರು ಕಡೆ ರಣ ಹಲಗೆಗಳನ್ನು ಬಾರಿಸುತ್ತಿರುತ್ತಾರೆ. 5-6 ವರ್ಷದ ಮಕ್ಕಳಿಂದ ಹಿಡಿದು 35-40 ವರ್ಷದ ವಯೋಮಾನದವರು ಈ ಹಲಗೆ ಬಾರಿಸುವಿಕೆಯಲ್ಲಿ ತೊಡಗಿಕೊಂಡಿರುತ್ತಾರೆ. ಅಲ್ಲಲ್ಲಿ ಗುಂಪು-ಗುಂಪಾಗಿ ನಡೆಯುವ ಈ ಘನಕಾರ್ಯ ಶಿವರಾತ್ರಿಯಿಂದ ಹೋಳಿ ಹಬ್ಬ ಮುಕ್ತಾಯವಾಗುವವರೆಗೂ ನಿರಂತರವಾಗಿ ನಡೆಯುತ್ತಿರುತ್ತದೆ. ಸಾಮಾನ್ಯವಾಗಿ ದಂಡ-ಪಿಂಡಗಳೆನಿಸಿಕೊಳ್ಳುವ ನಿರುದ್ಯೋಗಿ ಯುವಕರು, ಅರೆಕಾಲಿಕ-ಉದ್ಯೋಗಿಗಳು, ದುಡಿಮೆಯಲ್ಲಿ ಆಸಕ್ತಿಯಿಲ್ಲದ ಪಡ್ಡೆ ಹುಡುಗರು, ಕಲಿಕೆಯಲ್ಲಿ ನಿರಾಸಕ್ತಿ ಹೊಂದಿರುವ ಶಾಲಾ ಮಕ್ಕಳು, ಪುಗಸಟ್ಟೆ ಪ್ರಚಾರ ಗಿಟ್ಟಿಸಿಕೊಳ್ಳವ ಪುಂಡ-ಪೋಕರಿಗಳೇ ಈ ಕಾರ್ಯದಲ್ಲಿ ತೊಡಗಿರುವರು. 2-3 ರಿಂದ 5-6 ಹಲಗೆಗಳನ್ನು ಒಟ್ಟಾಗಿ, ಜೋರಾಗಿ ಬಾರಿಸುತ್ತಿದ್ದರೆ ಸುತ್ತ-ಮುತ್ತಲಿನ ಜನರ ಗತಿ ಏನಾಗಬಾರದು? ಕೆಲವು ಆಯಕಟ್ಟಿನ ಜಾಗದಲ್ಲಿ ಕುಳಿತು, ಸಂದಿ-ಸಂದಿಗಳಲ್ಲಿ, ಪ್ರಮುಖ ರಸ್ತೆಗಳಲ್ಲಿ ಸುತ್ತಾಡುತ್ತಾ ದಿನಗಟ್ಟಲೇ 8-10 ಗಂಟೆಗಳವರೆಗೆ ಹಲಗೆ ಬಾರಿಸುತ್ತಿದ್ದರೆ ಪರೀಕ್ಷೆ ತಯಾರಿಯಲ್ಲಿ ತೊಡಗಿರುವ ವಿದ್ಯಾರ್ಥಿಗಳ, ಬೌದ್ಧಿಕ ಕೆಲಸದಲ್ಲಿ ತೊಡಗಿರುವ ಉದ್ಯೋಗಿಗಳ, ರೋಗಿಗಳ, ವಯೋವೃದ್ಧರ ಪಾಡೇನು?

ಸುಶಿಕ್ಷಿತರೂ ಇದನ್ನು ನೋಡಿಕೊಂಡು ನಗುತ್ತಲೇ ಹೋಗುತ್ತಿರುತ್ತಾರೆ, ಸಾಮಾಜಿಕ ಕಳಕಳಿಯಿರುವ ಯಾರಾದರೂ ಹೇಳಲು ಹೋದರೆ ಅಲ್ಲಿಂದಲೇ ಜಗಳಗಳು ಶುರು. ಹಲಗೆ ಬಾರಿಸುವುದರಲ್ಲಿ ನಿರತರಾದವರ ತಂದೆ-ತಾಯಿಗಳೂ, ವಿವೇಚನೆಯಿಲ್ಲದ ಚಹಾ, ಮಾವಾ, ವಿಮಲ್ಪುಡಿಗಾಗಿ ಪರದಾಡುವ ಕೆಲ ಹಿರಿಯರೂ ಈಗ ಹೋಳಿ ಹಬ್ಬ ಇರೋದರಿಂದ ಹುಡುಗೂರು ಹಂಗರೆಪಾ ಎಂದು ಸಮಜಾಯಿಸುತ್ತಾರೆ. ಕೆಲವು ಲೀಡರುಗಳು, ರಾಜಕೀಯ ಮುಖಂಡರೂ ಕೂಡಾ ಈ ಕೀಳು ಅಭಿರುಚಿ ಪ್ರೋತ್ಸಾಹಿಸಲು ಸಂಪ್ರದಾಯದ ಮೊರೆ ಹೋಗುತ್ತಾರೆ. ಗಾಳಿ ಬಿಟ್ಟ ಕಡೆ ತೂರಿಕೊಳ್ಳವ, ಅಂಥವರಿಂದಲೇ ತಮ್ಮ ಬೇಳೆ ಬೇಯಿಸಿಕೊಳ್ಳವ ಇವರೇನೋ ಸರಿ ಕಾನೂನು ರಕ್ಷಣೆಯ ಜವಾಬ್ದಾರಿ ಹೊತ್ತಿರುವ ಕೋರ್ಟ್ ಕಚೇರಿಗಳೂ ಇದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಸಣ್ಣ-ಸಣ್ಣ ಸಮುದಾಯಗಳವರು ಆಚರಿಸುವ ತಮ್ಮ ಕುಲ ಗುರುಗಳ ಜಯಂತಿಗೆ ಕಟ್ಟುನಿಟ್ಟಿನ ಆಜ್ಞೆ ವಿಧಿಸುವ ತಾಲೂಕು ಆಡಳಿತ, ಜಿಲ್ಲಾಡಳಿತ, ಪೊಲೀಸ್ ಇಲಾಖೆಗಳೂ ಈ ರಣ ಹಲಗೆಗಳ ಶಬ್ದ ಮಾಲಿನ್ಯ ತಡೆಯಲು ನಿಶ್ಯಕ್ತವಾಗಿರುವುದು ದುರ್ದೈವದ ಸಂಗತಿಯಾಗಿದೆ. ಸಂಪ್ರದಾಯದ ಹೆಸರಿನಲ್ಲಿ ಸಮಾಜದ ಸ್ವಾಸ್ಥ್ಯ ಹದಗೆಡಿಸುತ್ತಿರುವ ಬೆಕ್ಕಿಗೆ ಗಂಟೆ ಕಟ್ಟುವವರಾರು?



- ಡಾ. ಸಿದ್ದಪ್ಪ ಮಡಿವಾಳರ
ಗುಳೇದಗುಡ್ಡ
ಲೇಖಕರು

# ಭಯೋತ್ಪಾದನೆ ಎಂಬ ಪದ ಜೀವಹಾನಿಗೆ ಮಾತ್ರ ಸೀಮಿತವಲ್ಲ..

ಕ್ಷಮಿಸಿ, ಭಯೋತ್ಪಾದನೆ ಎಂಬ ಪದ ಜೀವ ಹಾನಿಗೆ ಮಾತ್ರ ಸೀಮಿತವಲ್ಲ. ಹಣ ಸಂಪಾದಿಸಲು ಜನರಲ್ಲಿ ಶಿಕ್ಷಣದ ಶಿಸ್ತಿನ ಭಯ ಮೂಡಿಸಿ ಮಾಫಿಯಾ ರೀತಿಯಲ್ಲಿ ಶೋಷಿಸುವ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಕುರಿತಾಗಿ ಈ ಪದ ಪ್ರಯೋಗ. ಸಾಮಾನ್ಯವಾಗಿ ವರ್ಷದ ಪ್ರಾರಂಭದ ಜನವರಿ - ಫೆಬ್ರುವರಿ ತಿಂಗಳಲ್ಲೇ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರವೇಶದ ಪ್ರಕ್ರಿಯೆ ಪ್ರಾರಂಭಿಸುತ್ತಾರೆ. ಆ ಬಗ್ಗೆ ಜಾಗೃತಗೊಳ್ಳಲು ಇದು ಸುಸಮಯ.

ಒಂದನೇ ತರಗತಿಯ ಪ್ರವೇಶಕ್ಕೆ ಅತ್ಯಂತ ಹೆಚ್ಚು ಬೇಡಿಕೆ ಇರುತ್ತದೆ. ಸಿಬಿಎಸ್‌ಇ, ಐಸಿಎಸ್ ಇ, ಐಜಿಸಿಎಸ್‌ಇ ಹೀಗೆ ವಿವಿಧ ಪ್ರಕಾರಗಳ ಇಂಟರ್ನ್ಯಾಷನಲ್ ಶಾಲೆಗಳಿಗೆ ಅತಿಹೆಚ್ಚು ಬೇಡಿಕೆ ಮತ್ತು ದುಬಾರಿ ಹಣ ಪಾವತಿಸಬೇಕಾಗುತ್ತದೆ. ವಾರ್ಷಿಕ ಸುಮಾರು ಒಂದು ಲಕ್ಷಣದಿಂದ ಕೆಲವು ವಸತಿ ಶಾಲೆಗಳಲ್ಲಿ ಎಂಟು ಲಕ್ಷದವರೆಗೂ ಇರುತ್ತದೆ.

ಶಾಲೆಯ ವಿಶಾಲತೆ, ಭವ್ಯವಾದ ಕಟ್ಟಡ, ಆಟದ ಮೈದಾನ ಈಜು ಕೊಳ, ಶಿಕ್ಷಕ ಶಿಕ್ಷಕಿಯರ ಸೌಂದರ್ಯ, ಹವಾನಿಯಂತ್ರಿತ ವಾಹನಗಳು ಜೊತೆಗೆ ಮತ್ತೊಂದು ವಿಚಿತ್ರವೆಂದರೆ ಪೋಷಕರನ್ನು ಶಾಲೆಯಿಂದ ಎಷ್ಟು ದೂರ ನಿಲ್ಲಿಸಲಾಗುತ್ತದೆಯೋ ಅಷ್ಟು ಹೆಚ್ಚು ಹಣ ವಸೂಲಿ ಮಾಡಲಾಗುತ್ತದೆ. ಅಂದರೆ ಬಹುತೇಕ ಶಾಲೆಯ ಆವರಣದ ಒಳಗೆ ಪ್ರವೇಶ ನಿಷೇಧ. ಆ ಗೇಟಿನಿಂದ ಸಾಕಷ್ಟು ದೂರವೇ ನಿಲ್ಲಿಸಲಾಗುತ್ತದೆ. ಹೆಚ್ಚು ಹೆಚ್ಚು ನಿಯಮ ಶಿಸ್ತು ಹೆಚ್ಚು ಹೆಚ್ಚು ಹಣ ಪಡೆಯಲು ಅನಧಿಕೃತ ರಹದಾರಿ ಎಂಬ ಅಲಿಖಿತ ನಿಯಮವಿದೆ.

ಆದರೆ ಕನಿಷ್ಠ ಸೌಜನ್ಯ ಮರೆತು ದುರಹಂಕಾರದ ಪ್ರದರ್ಶನ ಮಾತ್ರ ಶಿಕ್ಷಣ ಕ್ಷೇತ್ರಕ್ಕೆ ಒಳ್ಳೆಯದಲ್ಲ. ಈ ನಾಡಿನ ಭೂಮಿ, ನೀರು, ಗಾಳಿ, ಮಾನವ ಸಂಪನ್ಮೂಲ, ಆಡಳಿತದ ಅನುಕೂಲ ಎಲ್ಲಾ ಉಪಯೋಗಿಸಿಕೊಂಡು ಜನಸಾಮಾನ್ಯರಿಗೆ ಗೌರವ ಕೊಡದೆ ಮಕ್ಕಳ ಮೇಲಿನ ಮೋಹದ ದುರುಪಯೋಗ ಮಾಡಿಕೊಂಡು ಶೋಷಿಸುವುದು ಅನ್ಯಾಯವಾಗುತ್ತದೆ.

ಸರ್ಕಾರ ಇದರ ಮೇಲೆ ನಿಯಂತ್ರಣ ಸಾಧಿಸಲೇ ಬೇಕಾಗುತ್ತದೆ. ಖಾಸಗಿ ಎಂದ ತಕ್ಷಣ ಅವರು ಈ ನೆಲದ ಕಾನೂನು ಮೀರಿದವರಲ್ಲ. ಶಿಸ್ತಿನ ಹೆಸರಿನಲ್ಲಿ ಸರ್ವಾಧಿಕಾರ ಪ್ರಜಾಪ್ರಭುತ್ವದ ಮತ್ತು ಮಾನವೀಯ ಮೌಲ್ಯಗಳಿಗೆ ವಿರುದ್ಧ ನಡವಳಿಕೆಯನ್ನು ಪ್ರೋತ್ಸಾಹಿಸಬಾರದು.

ಶಿಕ್ಷಣ ಸಂಸ್ಥೆಗಳು ಪಡೆಯುವ ಫೀಜುಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಹೇರಬೇಕು. ಯೂನಿಫಾರ್ಮ್, ಪುಸ್ತಕಗಳು, ಸಾರಿಗೆ ಮುಂತಾದ ವಿಷಯಗಳಲ್ಲಿ ಸಹ ಅವರು ಹಣ ಮಾಡುವ ವ್ಯವಸ್ಥೆ ರೂಪಿಸಿಕೊಂಡಿರುತ್ತಾರೆ. ಅದಕ್ಕೂ ಕಡಿವಾಣ ಹಾಕಬೇಕು.

ಕೆಲವರು ಹೇಳಬಹುದು, ಅಂತಹ ಶಾಲೆಗಳಿಗೆ ನಿಮ್ಮ ಮಕ್ಕಳನ್ನು ಸೇರಿಸುವ ಬದಲು ಸರ್ಕಾರಿ ಶಾಲೆಗಳಿಗೆ ಸೇರಿಸಬಹುದಲ್ಲವೇ, ಅವರೇನು ನಿಮ್ಮನ್ನು ಬೇಡಿಕೊಳ್ಳುವುದಿಲ್ಲ. ಆಯ್ಕೆಯ ಸ್ವಾತಂತ್ರ್ಯ ನಿಮಗಿದೆಯಲ್ಲವೇ ಎಂದು.

ಆದರೆ ನಮ್ಮ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆ ಆಧುನಿಕತೆಯ ಪರಿಣಾಮ ಪ್ರದರ್ಶಕ ಮನೋಭಾವ, ಅನುಕರಣೆಯ ಸ್ವಭಾವ, ಹೋಲಿಕೆಯ ಮನಸ್ಥಿತಿ ಇದಕ್ಕೆ ಅವಕಾಶ ಕೊಡುವುದಿಲ್ಲ. ಮಕ್ಕಳ ಮೇಲಿನ ಅತಿಯಾದ ಪ್ರೀತಿ, ಕೊಳ್ಳುಬಾಕ ಸಂಸ್ಕೃತಿ, ಹಣದ ಹರಿವು ಹೆಚ್ಚಿರುವುದು ಮುಂತಾದ ಕಾರಣಗಳಿಗಾಗಿ ಮಧ್ಯಮ ವರ್ಗದವರು ಸಹ ಪ್ರತಿಷ್ಠಿತ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಬಯಸುತ್ತಾರೆ. ಅದರಲ್ಲೂ ತಾಯಂದಿರು ತಮ್ಮ ಮಕ್ಕಳನ್ನು ದೊಡ್ಡ ದೊಡ್ಡ ಶಾಲೆಗಳಿಗೆ ಸೇರಿಸಲು ಒತ್ತಡ ಹೇರುತ್ತಾರೆ. ಶಾಲೆಗಳು ಅತ್ಯಂತ ಪರಿಸರ ಸ್ನೇಹಿ ವಾತಾವರಣದಲ್ಲಿ, ಬಹಳ ಸರಳವಾದ ಕಟ್ಟಡದಲ್ಲಿ, ಸಾರ್ವಜನಿಕರಿಗೆ ಸುಲಭವಾಗಿ, ಕಡಿಮೆ ಹಣದಲ್ಲಿ ಪ್ರವೇಶ ಮತ್ತು ಮಾತುಕತೆಯ ಪರಿಸ್ಥಿತಿಯಲ್ಲಿ ( ರಕ್ಷಣಾತ್ಮಕ ಮುನ್ನೆಚ್ಚರಿಕೆ ಹೊರತುಪಡಿಸಿ ) ಉತ್ತಮ ಗುಣಮಟ್ಟದ ಶಿಕ್ಷಕರ ಸೇವಾ ಮನೋಭಾವದಲ್ಲಿ, ಮಾನವೀಯ ಮೌಲ್ಯಗಳ ಬೆಳವಣಿಗೆಯ ಪರಿಸರದಲ್ಲಿ ಕಾರ್ಯನಿರ್ವಹಿಸುವಂತಿರಬೇಕು.



- ವಿವೇಕಾನಂದ ಎಚ್.ಕೆ.
ಸಾಮಾಜಿಕ ಚಿಂತಕರು
ಮೊ: 98440 13068

# ಕವಿತೆಯೊಂದು ಎದೆ ಬಿರಿದು ಅತ್ತ ಘಳಿಗೆ ...

**ಪ್ರೀತಿಯಿಲ್ಲದೆ ಹೂವು ಅರಳೀತು ಹೇಗೆ, ಮೋಡಗಟ್ಟೀತು ಹೇಗೆ, ಮಳೆಯಾದೀತು ಹೇಗೆ? ಪ್ರೀತಿಯಿಲ್ಲದೆ ಈ ಬದುಕು ಸಾರ್ಥಕತೆಯನ್ನು ಅನುಭವಿಸಿತಾದರೂ ಹೇಗೆ? ಪ್ರೀತಿ ಎಂದರೆ ಬರೀ ಕೊಡುವುದು, ಪಡೆಯುವುದಲ್ಲ ಎಂದು ಕೆಲವರು ವ್ಯಾಖ್ಯಾನಿಸಿದರೆ ಇನ್ನು ಕೆಲವರು ''ಉಂಡ ನೋವುಗಳ ಮೈದಡವಿ ಕಾಣದ ಲೋಕಕ್ಕೆ ಕರೆದೊಯ್ದು ಒಲವ ಸುಧೆ ಮೊಗೆ ಮೊಗೆದು ಕುಡಿಸುವ ಚಿರಂತನ ದ್ರವ'' ಎನ್ನುತ್ತಾರೆ...**

ನಾವಿಬ್ಬರೂ ಸಂಧಿಸದಿರುತ್ತಿದ್ದರೆ/ಕನಸಿನ ತತ್ತಿಗೆ ಕಾವು ಕೊಟ್ಟು/ರೆಕ್ಕೆ ಪುಕ್ಕ ಬಂದು/ಹಾರುತ್ತಿರಲಿಲ್ಲ/ ಮನದ ಅಂಗಳಕ್ಕೆ ಹೇಳದೇ ಕೇಳದೇ /ಲಗ್ಗೆ ಇಟ್ಟು ನಗುತ್ತಿರಲಿಲ್ಲ ನೀನು ಸಿಕ್ಕದೇ ಇದ್ದರೆ ಕನಸಿನ ಹಕ್ಕಿ ಗರಿ ಬಿಚ್ಚಿ ಹಾರುತ್ತಿರಲಿಲ್ಲ, ಮನಸಿಗೆ ಮುತ್ತಿಗೆ ಹಾಕಿ ನಿನ್ನನ್ನೇ ಜಪಿಸುವ ಹಾಗೆ ಮಾಡುತ್ತಲೂ ಇರಲಿಲ್ಲ ಎಂದು ಬರೆಯುವ ಡಾ. ಪ್ರೀತಿ ಕೆ. ಎ. ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ. ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ. ಕರ್ನಾಟಕದ ಆರ್ಥಿಕತೆಯ ಕುರಿತು ಪುಸ್ತಕ ಹಾಗೂ ಹಲವಾರು ಸಂಶೋಧನಾ ಪ್ರಬಂಧ ಪ್ರಕಟಿಸಿದ್ದಾರೆ. ಕಾವ್ಯಮೋಹಿಯಾಗಿರುವ ಇವರ ಕವಿತೆಗಳು ಕೆಂಡಸಂಪಿಗೆ, ಅವಧಿ ಬ್ಲಾಗ್ ಮುಂತಾದ ಅಂತರ್‌ಜಾಲ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವರ ರಚನೆಯ ಒಂದು ಕವಿತೆಯ ಓದು ಮತ್ತು ಒಳನೋಟ ನಿಮಗಾಗಿ.



ಇಲ್ಲೀಗ ಎಲ್ಲವೂ ಸುಗಮ....

ದಡದಾಚೆಗೆ ಕೂತು ಅವನು ಟೈಪಿಸುವ
ಸಂದೇಶದ ಸದ್ದಿಗೆ ಕಿವಿಯಾನಿಸಬೇಕಿಲ್ಲ
ಮೂಡು ಬಂದಾಗಲೊಮ್ಮೆ ಮಾಡುವ
ಫೋನು ಕರೆಗೆ ಕತ್ತುದ್ದ ಮಾಡಿ ಕಾಯಬೇಕಿಲ್ಲ

ಗುಬ್ಬಿ ಕಂಗಳು ಕಾಡಿಗೆ ತೀಡಬೇಕಿಲ್ಲ
ತುಟಿಗಳು ಗುಲಾಬಿ ರಂಗಿಗೆ ಮುತ್ತಿಡಬೇಕಿಲ್ಲ
ಮೊಬೈಲಿನ ಕ್ಯಾಮೆರಾಕ್ಕೆ ಸೆಲ್ಫಿ ಕ್ಲಿಕ್ಕಿಸುವ
ಅನಿವಾರ್ಯತೆ ಇಲ್ಲ

ನುಣುಪಾದ ಫೋನಿನ ಮೈಯು
ಪದೇ ಪದೇ ಚಾರ್ಜಿಗೆ ಸಿಲುಕಿ
ಬಿಸಿಯಾಗಬೇಕಿಲ್ಲ
ಬೆರಳುಗಳು ಅದೊಂದೇ ಚಿತ್ರಕ್ಕೆ
ತಡಕಾಡಬೇಕಿಲ್ಲ

ಆ ಜಗದ ಸೂರ್ಯ ಮುಳುಗುವವರೆಗೂ
ಈ ಜಗದ ದೀಪ ಉರಿಯಬೇಕೆಂದಿಲ್ಲ
ರಾತ್ರಿಗಳು ನಿದ್ದೆ ಕದಿಯಬೇಕಿಲ್ಲ

ಅವನಾಡದ ಪದಗಳಿಗೂ
ಕಳಿಸಿದ ಇಮೋಜಿಗಳಿಗೂ
ಅರ್ಥ ಹುಡುಕಬೇಕಿಲ್ಲ
ಮಾತು ಮುಗಿಸಲೇಬೇಕೆಂದಾಗ
ದುಃಖವೊಂದು ಇನ್ನಿಲ್ಲದಂತೆ ಮಡಿಲೇರಿ
ಕೂರಬೇಕಿಲ್ಲ

ಅವನು ದೂರವಾಗಿದ್ದೇ ಒಳಿತಾಯಿತೆಂದು
ಅವಳು ಅಂದುಕೊಳ್ಳುವ ಗಳಿಗೆ
ಇನ್ನೆಂದೂ ಹುಟ್ಟಲಾರದ ಕವಿತೆಯೊಂದು
ಎದೆ ಬಿರಿದು ಅತ್ತಿತು ಒಳಗೊಳಗೆ....

- ಡಾ. ಪ್ರೀತಿ ಕೆ. ಎ.

ನಲ್ಲೆ ನಿನ್ನ ಮರೆಯಲು ಏನೆಲ್ಲಾ ಮಾಡಿದೆ/ ಆದರೆ ಎಲ್ಲೆಲ್ಲೂ ನಿನ್ನ ನೆನಪೇ ಕಾಡಿದೆ/ ಎಂದು ಕವಿ ವಿಷಾದಭಾವದಿಂದ ಹಾಡುತ್ತಿದ್ದರೆ ಕಣ್ಣೆವೆಯಲ್ಲಿ ಹನಿ ಮೂಡದೇ ಇದ್ದೀತೆ? ಎದೆಯ ಎಡಭಾಗದಲ್ಲಿ ಎಳೆದೆಳೆದು ಹಿಂಡುವ ಸಿಹಿ ನೋವೇ ಪ್ರೀತಿ. ಪ್ರೀತಿ ಎಂಬ ಎರಡೂವರೆ ಅಕ್ಷರ ಜಗತ್ತನ್ನಾಳುವ ಪರಿಗೆ ಲೋಕವೇ ವಿಸ್ಮಯಗೊಂಡಿದೆ. ಓಹ್! ಪ್ರೀತಿ ಎಂಬುದು ಜಗತ್ತಿನಲ್ಲಿ ಇಲ್ಲದೇ ಇದ್ದಿದ್ದರೆ? ಊಹುಂ! ಅದು ಸಾಧ್ಯವಿಲ್ಲ. ಕವಿ ಹೇಳುವ ಹಾಗೆ ''ಪ್ರೀತಿಯಿಲ್ಲದೆ ಹೂವು ಅರಳೀತು ಹೇಗೆ, ಮೋಡಗಟ್ಟೀತು ಹೇಗೆ, ಮಳೆಯಾದೀತು ಹೇಗೆ?'' ಪ್ರೀತಿಯಿಲ್ಲದೆ ಈ ಬದುಕು ಸಾರ್ಥಕತೆಯನ್ನು ಅನುಭವಿಸಿತಾದರೂ ಹೇಗೆ? ಪ್ರೀತಿ ಎಂದರೆ ಬರೀ ಕೊಡುವುದು, ಪಡೆಯುವುದಲ್ಲ ಎಂದು ಕೆಲವರು ವ್ಯಾಖ್ಯಾನಿಸಿದರೆ ಇನ್ನು ಕೆಲವರು ''ಉಂಡ ನೋವುಗಳ ಮೈದಡವಿ ಕಾಣದ ಲೋಕಕ್ಕೆ ಕರೆದೊಯ್ದು ಒಲವ ಸುಧೆ ಮೊಗೆ ಮೊಗೆದು ಕುಡಿಸುವ ಚಿರಂತನ ದ್ರವ'' ಎನ್ನುತ್ತಾರೆ.

ಮೊದ ಮೊದಲು ಆಕರ್ಷಣೆಯಾಗಿ ಅರಳಿದ ಪ್ರೀತಿ, ಬಿಟ್ಟಿರಲಾರದ, ಕಣ್ಮರೆಯಾದರೆ ಪರಿತಪಿಸುವ, ಕತ್ತಿಯ ಅಲುಗಿನ ಮೇಲೆ ತಿಪ್ಪರಲಾಗ ಹಾಕಿಸುವ ಉದ್ವೇಗದ ಘಳಿಗೆಯಾಗಿ ಮಾರ್ಪಡುತ್ತದೆ. ಪ್ರೀತಿಯ ಕುರಿತು, ವಿರಹದ ಕುರಿತು ಕವಿತೆ ಬರೆಯದ ಕವಿಗಳೇ ಇಲ್ಲ. ಒಬ್ಬೊಬ್ಬರದು ಒಂದೊಂದು ಅನುಭವ. ಕಳೆದು ಹೋದ ಪ್ರೀತಿಯನ್ನು ನೆನೆದು ರೋಧಿಸುವವರು ವಿರಹಿಗಳಾಗುತ್ತಾರೆ. ಬದುಕಿನ ಕೊನೆವರೆಗೂ ವಿರಹ ವೇದನೆಯಲ್ಲಿಯೇ ನರಳುತ್ತಾರೆ. ''ನೀ ಹರಗಿ ಹೋದ ಎದೆಯ ತುಂಬ ಹೂಗರಳಿವೆ. ಮುಡಿದುಕೊಳ್ಳಲು ನೀನೇ ಇಲ್ಲ'' ಎಂದು ಹಲಬುತ್ತಾರೆ. ಹೇಳಿ ಹೋಗು ಕಾರಣ ಹೋಗುವ ಮೊದಲು... ಎಂದು ಅಲವತ್ತುಕೊಳ್ಳುವ ಹೊತ್ತಿಗೆ ಆಕೆ ಇನ್ಯಾರದೋ ಹೆಜ್ಜೆಗೆ ಸಾಥ್ ನೀಡಿರುತ್ತಾಳೆ. ಡಾ. ಪ್ರೀತಿ ಕೆ. ಎ. ಅವರ ಕವಿತೆ ಪ್ರೀತಿಯೆಂಬ ಸುಮಧುರ ಭಾವದ ಕುರಿತು ಇಷ್ಟೆಲ್ಲ ಬರೆಯುವಂತೆ ಮಾಡಿತು. ಪ್ರೀತಿ ಕೈ ತಪ್ಪಿತು, ಪ್ರೀತಿಸಿದವ ಮುಖ ತಿರುಗಿಸಿ ಹೋದ ಎಂದು ಕೊರಗುವ ಬದಲು ಅವನು ಹೋಗಿದ್ದೇ ಎಷ್ಟೆಲ್ಲ ಒಳಿತಿಗೆ ಕಾರಣವಾಯಿತು ಎಂಬ ಚಿತ್ರಣವನ್ನು ಈ ಕವಿತೆ ನಮಗೆ ನೀಡುತ್ತದೆ. ಪ್ರೀತಿಯ ಇನ್ನೊಂದು ಮುಖದ ಪರಿಚಯ ಮಾಡಿಕೊಡುತ್ತದೆ.

ನೀವು ತುಂಬ ಇಷ್ಟಪಟ್ಟ ಹುಡುಗನೋ ಅಥವಾ ಹುಡುಗಿಯೋ ನಿಮ್ಮ ಪ್ರೀತಿಯನ್ನು ಧಿಕ್ಕರಿಸಿ ದೂರ ದೂರ ನಡೆದಿದ್ದಾರೆಯೇ? ಹಾಗಿದ್ದರೆ ಈ ಕವಿತೆ ಓದಿ... ತುಂಬ ಚಂದದ ಭಾವವನ್ನು ಕಟ್ಟಿಕೊಡುವ ಕವಿತೆ, ಆ ರೀತಿ ಆತನೋ ಆಕೆಯೋ ಬಹುದೂರ ನಡೆದುದರ ಒಳಿತುಗಳನ್ನು ಹೇಳಿಕೊಡುತ್ತದೆ. ಮತ್ತೊಂದು ತೀರದೆಡೆಗೆ ಅವನು ಕೂತು ತನಗಾಗಿ ಏನು ಬರೆಯುತ್ತಿದ್ದಾನೆ ಎಂಬ ಕುತೂಹಲ, ರೋಮಾಂಚನಕ್ಕೆ ಕಾಯಬೇಕಿಲ್ಲ. ಅವನು ಪ್ರೀತಿ ಉಕ್ಕಿದಾಗಲೊಮ್ಮೆ ಇಷ್ಟವಿಲ್ಲದಿದ್ದರೂ ಅವನ ಧ್ವನಿಗೆ ಮೈಯೆಲ್ಲ ಕಿವಿಯಾಗಿಸಿ ಕೂರಬೇಕಿಲ್ಲ. ಅವನ ಸೆಳೆಯಲು ಪುಟ್ಟ ಕಂಗಳಿಗೆ ಕಾಡಿಗೆ ತೀಡಬೇಕಿಲ್ಲ, ತುಟಿಗಳಿಗೆ ಗುಲಾಬಿ ರಂಗು ಬಳಿಯಬೇಕಿಲ್ಲ. ಅವನು ನೋಡಲಿ ಎಂದು ಸೆಲ್ಫಿ ಕ್ಲಿಕ್ಕಿಸುವ ಅನಿವಾರ್ಯತೆಯೂ ಇಲ್ಲ. ಅವನೊಂದಿಗೆ ಮಾತನಾಡಿ ಖಾಲಿಯಾದ ಮೊಬೈಲ್ ಬ್ಯಾಟರಿ ತುಂಬಿಸಲು ಚಾರ್ಜ್ ಹಾಕಬೇಕಿಲ್ಲ. ಒಂದೇ ಚಿತ್ರವನ್ನು ಹುಡುಕಿ ದಿಟ್ಟಿಸುತ್ತ ಕೂರಬೇಕಿಲ್ಲ. ಅಲ್ಲಿ ಕತ್ತಲಾಗುವವರೆಗೂ ಇಲ್ಲಿನ ಬೆಳಕು ಸುಟ್ಟುಕೊಳ್ಳಬೇಕೆಂದೇನಿಲ್ಲ, ದೀರ್ಘ ರಾತ್ರಿಗಳ ನಿದ್ದೆ ಸುಡಬೇಕಿಲ್ಲ. ಅವನ ಮೌನಕ್ಕೂ, ಕಳಿಸಿದ ಸಂಕೇತಗಳಿಗೂ ಅರ್ಥ ಹುಡುಕಬೇಕಿಲ್ಲ, ಮನಸಿಲ್ಲದಿದ್ದರೂ ಮಾತು ಮುಗಿಸಬೇಕೆಂದಾಗ ಒತ್ತರಿಸಿಕೊಂಡು ಬರುವ ದುಃಖ ಮಡಿಲೇರಿ ಕೂರಬೇಕಿಲ್ಲ. ಇಷ್ಟೆಲ್ಲ ಒಳಿತುಗಳು ಅವನು ದೂರವಾಗಿದ್ದರಿಂದಲೇ ಸಾಧ್ಯವಾಯಿತು ಎಂದುಕೊಳ್ಳುವಷ್ಟರಲ್ಲಿ, ಇನ್ನು ಮುಂದೆ ಎಂದೆಂದೂ ಹುಟ್ಟದ ಕವಿತೆಯೊಂದು ಎದೆಬಿರಿಯೆ ಅತ್ತಿತು ಒಳಗೊಳಗೆ. ಬಹುಶಃ ಕೊನೆಯ ಸಾಲು ಬಿಡದೆ ಕಾಡುವ ಪರಿ ಹೇಳತೀರದಷ್ಟು.

ಅವನು ಬಿಟ್ಟು ಹೋದ ದುಃಖದ ಮಧ್ಯೆಯೂ ಹುಟ್ಟಿಕೊಂಡ ಈ ಕವಿತೆಗೆ ಮನಸು ಕಲ್ಲವಿಲಗೊಳ್ಳುತ್ತದೆ. ಇಂತಹ ತಾಕುವ ಕವಿತೆ ಬರೆದ ಕವಯಿತ್ರಿ ಪ್ರೀತಿ ಕೆ. ಎ. ಅವರಿಗೆ ನಮನಗಳು.

### ಕಾಡುವ ಕವಿತೆ



- ನಾಗೇಶ್ ಜೆ. ನಾಯಕ
ವಿಮರ್ಶಕರು
ಮೊ: 99008 17716

## ಓದುಗ ಕಾಲ

### ಮಹಿಳೆಯರಿಗೆ ಉಚಿತ ಬಸ್‌ಪಾಸ್ ಸ್ವಾಗತಾರ್ಹ

ಮನೆಯಲ್ಲಿ ಮಹಿಳೆ ಕಲಿತರೆ ಮನೆಯೊಂದು ಕಲಿತಂತೆ ಎಂಬ ಗಾದೆ ಮಾತಿನಂತೆ ಮಹಿಳೆಯರ ಅಭಿವೃದ್ಧಿಗೆ ಗಮನ ಹರಿಸುವುದು ಅನಿವಾರ್ಯ. ರಾಜ್ಯ ಸರ್ಕಾರ ಈ ವರ್ಷದ ಬಜೆಟ್‌ನಲ್ಲಿ ದುಡಿಯುವ ಮಹಿಳೆಯರು ಮತ್ತು ಶಾಲಾ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್ ಘೋಷಣೆ ಮಾಡಿರುವುದು ಉತ್ತಮ ಬೆಳವಣಿಗೆ. ಬೆಂಗಳೂರು ಸೇರಿದಂತೆ ನಗರ ಪ್ರದೇಶಗಳಲ್ಲಿ ಬಸ್‌ಗಳಲ್ಲಿ ಓಡಾಡುವ ವೆಚ್ಚ ಅಧಿಕವಾಗಿದ್ದು , ದುಡಿಮೆಯ ಶೇಕಡಾ 30ರಷ್ಟನ್ನು ಬಸ್‌ಗಳಿಗೆ ಮೀಸಲಿಡಬೇಕಾಗಿರುತ್ತದೆ. ದಿನಗೂಲಿ, ಅಸಂಘಟಿತ ಮಹಿಳಾ ಕಾರ್ಮಿಕರು ಮತ್ತು ಉದ್ಯೋಗಸ್ಥ ಮಹಿಳೆಯರಿಗೆ ಇದು ಹೊರೆಯಾಗಿ ಪರಿಣಮಿಸುತ್ತದೆ.

ಮಧ್ಯಮ ವರ್ಗದ ಮತ್ತು ಬಡ ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ಶಾಲೆಗೆ ಕಳುಹಿಸುವುದೇ ದುಸ್ತರವಾಗಿರುವ ಇಂದಿನ ಸಮಯದಲ್ಲಿ ದೂರದ ಶಾಲೆಗಳಿಗೆ ಹಣ ಕೊಟ್ಟು ಹೆಣ್ಣು ಮಕ್ಕಳನ್ನು ಶಾಲೆ ಕಳಿಸುವುದು ಅಸಾಧ್ಯ. ಈ ಕಾರಣದಿಂದಾಗಿ ಹಲವಾರು ಹೆಣ್ಣು ಮಕ್ಕಳು ಶಾಲೆಯಿಂದ ವಂಚಿತರಾಗಬೇಕಾದ ಪರಿಸ್ಥಿತಿಯಿದ್ದು, ಇಂತಹ ಸಮಯದಲ್ಲಿ ರಾಜ್ಯ ಸರ್ಕಾರ ಉಚಿತ ಬಸ್ ಪಾಸ್ ಘೋಷಣೆ ಮಹಿಳೆಯರು ಮತ್ತು ವಿದ್ಯಾರ್ಥಿನಿಯರಿಗೆ ಹೊಸ ಅಶಾಕಿರಣ.

ಇದೇ ವರ್ಷದ ಏಪ್ರಿಲ್ 1ರಿಂದಲೇ ರಾಜ್ಯದಲ್ಲಿ ದುಡಿಯುವ ಹೆಣ್ಣು ಮಕ್ಕಳಿಗೆ ಮತ್ತು ಶಾಲಾ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್ ನೀಡುವ ಕ್ರಮವನ್ನು ಜಾರಿಗೊಳಿಸಲು ಮುಖ್ಯಮಂತ್ರಿಗಳು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಮಹಿಳೆಯರಿಗೆ ಗೌರವ ಮತ್ತು ಆರ್ಥಿಕ ಸ್ವಾವಲಂಬನೆ ತಂದು ಕೊಡಲು ಈ ಯೋಜನೆ ರೂಪಿಸಲಾಗಿದ್ದು ಮತ್ತು ಮುಂದಿನ ವರ್ಷ ಶಾಲೆ ಆರಂಭವಾಗುವುದರಲ್ಲಿ ರಾಜ್ಯದ ಪ್ರತಿ ತಾಲೂಕಿನಲ್ಲಿ ಕನಿಷ್ಟ ಮಕ್ಕಳ ಮಿನಿ ಬಸ್ ಕಾರ್ಯಾರಂಭಿಸಲು ಕ್ರಮಕೈಗೊಳ್ಳಲು, ಅಗತ್ಯ ಅನುದಾನ ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿರುವುದು ಸ್ವಾಗತಾರ್ಹ.

- ರಾಸುಮ ಭಟ್
ಮೊ: 72594 64976

ಪ್ರಚಲಿತ ಸಂಗತಿಗಳ ಕುರಿತು ಹಾಗೂ ಸ್ಥಳೀಯ ಸಮಸ್ಯೆಗಳ ಬಗ್ಗೆ ನೀವು ಇಲ್ಲಿ ಬರೆದು ತಿಳಿಸಬಹುದು/ ಪ್ರತಿಕ್ರಿಯೆ ನೀಡಬಹುದು. ಸಂಪೂರ್ಣ ವಿಳಾಸದ ಜೊತೆಗೆ ಒಂದು ಫೋಟೋ ಕಳುಹಿಸಿಕೊಡಿ.
E- mail: udayakaladaily@gmail.com

## ತಳ ಸಮುದಾಯಗಳು ಸಂಘಟನೆಯಾಗಬೇಕು: ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್. ರಾಜಣ್ಣ



**ಉದಯಕಾಲ ನ್ಯೂಸ್**

**ಮಧುಗಿರಿ :** ತಳ ಸಮುದಾಯಗಳಿಗೆ ರಾಜಕೀಯ ಪ್ರಾತಿನಿದ್ಯ ದೊರಕಿಸಿಕೊಡಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಮಾಜಿ ಶಾಸಕ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್. ರಾಜಣ್ಣ ಭರವಸೆ ನೀಡಿದರು.

ಪಟ್ಟಣದ ಎಂ ಎನ್ ಕೆ ಸಮುದಾಯ ಭವನದಲ್ಲಿ ಬುಧವಾರ ಅಗ್ನಿವಂಶ ಕ್ಷತ್ರಿಯ (ತಿಗಳ) ಜನಾಂಗದ ವತಿಯಿಂದ ಹಮ್ಮಿಕೊಂಡಿದ್ದ ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು ಇತಿಹಾಸವನ್ನು ಅರಿತವರು ಮಾತ್ರ ಇತಿಹಾಸ ಸೃಷ್ಟಡಿಸಲು ಸಾದ್ಯ. ತಳ ಸಮುದಾಯಗಳು ಸಂಘಟನೆಯಾಗಬೇಕು. ಸಂಘಟನೆಯಲ್ಲಿ ಶಕ್ತಿಯಿದೆ, ಸಂಘಟನೆಯಿಂದ ಮಾತ್ರ ಸಮುದಾಯದ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಅಗ್ನಿವಂಶ ಕ್ಷತ್ರಿಯ ಸಮುದಾಯ ನನ್ನ ಮೇಲೆ ಇಟ್ಟಿರುವ ನಿರೀಕ್ಷೆಗೆ ತಕ್ಕಂತೆ ಕೆಲಸ ನಿರ್ವಹಿಸುತ್ತೇನೆ. ಶ್ರಮ ವಹಿಸಿ ಜನಪರವಾಗಿ ಕೆಲಸ ಮಾಡಿದಾಗ ಜನತೆ ಗುರುತಿಸುತ್ತಾರೆ. ಹೋರಾಟದ ಮನೋಭಾವ ಇದ್ದವರು ಮಾತ್ರ ಸಾರ್ವಜನಿಕ ಜೀವನದಲ್ಲಿ ಯಶಸ್ವಿಯಾಗಲು ಸಾದ್ಯ ಎಂದರು.

ಅಗ್ನಿ ವಂಶ ಸಮುದಾಯದವರು ಇತರೆ ಸಮುದಾಯದವರೊಂದಿಗೆ ಅನ್ಯೋನ್ಯತೆಯಿಂದ ಜೀವನ ನಿರ್ವಹಿಸುತ್ತಿದ್ದು, ಪ್ರತಿಯೊಬ್ಬರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸಿ ಸಮಾಜಕ್ಕೆ ಆಸ್ತಿಯನ್ನಾಗಿ ಮಾಡಿ ಎಂದರು.

ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮದ ಅಧ್ಯಕ್ಷ ಮಾಜಿ ರೇವಣಸಿದ್ದಯ್ಯ ಮಾತನಾಡಿ ತಿಗಳ ಸಮುದಾಯದವರು ಸ್ವಾಭಿಮಾನಿಗಳಾಗಿದ್ದು, ಸರ್ಕಾರ ಎಲ್ಲ ಅನುಕೂಲಗಳನ್ನು ಮುಂದುವರಿದ ಜನಾಂಗದವರಿಗೇ ಮಾಡಲಾಗುತ್ತಿದ್ದು, ಆದರೆ ತಿಗಳ ಸಮುದಾಯದ ಅಭಿವೃದ್ಧಿ ನಿಗಮ ಮಾಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸಿದ್ದರಾಮಯ್ಯ ನವರು ಇಡೀ ಕರ್ನಾಟಕಕ್ಕೆ ಅನ್ನ ನೀಡಿದವರು. ಅನ್ನಭಾಗ್ಯ ಯೋಜನೆಯಂದ ಬಿಕ್ಷುಕರ ಸಂಖ್ಯೆ ಕಡಿಮೆಯಾಗಿದೆ ಎಂದ ಅವರು ಈ ಬಾರಿ ಕೆ.ಎನ್. ರಾಜಣ್ಣನವರನ್ನು 25 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದರು.

ಜಿ.ಪಂ ಮಾಜಿ ಸದಸ್ಯ ಡಿ. ಅರ್ಜುನ್ ಮಾತನಾಡಿ ಸಂಘಟನೆಗೆ ಎಲ್ಲವನ್ನು ಪಡೆದುಕೊಳ್ಳುವ ಶಕ್ತಿಯಿದ್ದು, ಸಮುದಾಯದ ಪ್ರತಿಯೊಬ್ಬರೂ ಸಂಘಟಿತರಾಗಬೇಕು ಆಗ ಮಾತ್ರ ಎಲ್ಲಾ ಸವಲತ್ತುಗಳು ಸಿಗಲಿವೆ. ಸಮುದಾಯಕ್ಕೆ ಇಂದಿಗೂ ರಾಜಕೀಯ ಅಧಿಕಾರ ದೊರೆತಿಲ್ಲ. ರಾಜಕೀಯ ಅಧಿಕಾರ ದೊರೆತಾಗ ಮಾತ್ರ ಸಮಾಜದ ಅಭಿವೃದ್ದಿ ಸಾಧ್ಯ. ಆದ್ದರಿಂದ ನಾವೆಲ್ಲರೂ ಈ ಬಾರಿ ಕೆ.ಎನ್. ರಾಜಣ್ಣನವರಿಗೆ ಶಕ್ತಿ ತುಂಬೋಣ, ಆಸೆ ಆಮಿಷಗಳಿಗೆ ಬಲಿಯಾಗದೇ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವದಿಸೋಣ ಎಂದು ಸಮುದಾಯಕ್ಕೆ ಕರೆ ನೀಡಿದರು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಡಿಜೆ ರಾಜಣ್ಣ, ಪುರಸಭಾ ಮಾಜಿ ಅಧ್ಯಕ್ಷರಾದ ಎಂ ಕೆ ನಂಜುಂಡಯ್ಯ, ಕೆ ಪ್ರಕಾಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪಾಲಯ್ಯ, ತಾಲೂಕು ಕಾರ್ಯದರ್ಶಿ ರಾಮಕೃಷ್ಣಯ್ಯ, ಮತ್ತಿತರರು ಹಾಜರಿದ್ದರು.

# ಹತಾಶ ಬಿಜೆಪಿ ನಾಯಕರಿಂದ ಕೊಲ್ಲುವ ಬೆದರಿಕೆ: ಸುರ್ಜೆವಾಲ ವಾಗ್ದಾಳಿ

**ಉದಯಕಾಲ ನ್ಯೂಸ್**

**ಮಂಡ್ಯ:** ಮುಂಬರುವ ಚುನಾವಣೆಯಲ್ಲಿ ಸೋಲುವುದು ಸೋಲುವುದು ಖಚಿತವೆಂದು ಹತಾಶರಾಗಿರುವ ಬಿಜೆಪಿ ನಾಯಕರು, ಕಾಂಗ್ರೆಸ್ ನಾಯಕರನ್ನು ಮುಗಿಸುವ ಮಾತನಾಡುತ್ತಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೆವಾಲ ವಾಗ್ದಾಳಿ ನಡೆಸಿದ್ದಾರೆ.

ನಗರದ ಕರ್ನಾಟಕ ಸಂಘದ ಆವರಣದಲ್ಲಿ ಮಂಗಳವಾವರ ನಡೆದ ಕಾಂಗ್ರೆಸ್ ಪಕ್ಷದ ಭರವಸೆಯ ಕಾರ್ಡ್ ವಿತರಣಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಏನೇ ತಂತ್ರ ಉಪಯೋಗಿಸಿದರೂ ಕಾಂಗ್ರೆಸ್ ಬೆಳವಣಿಗೆಯನ್ನು ತಡೆಯಲು ಸಾಧ್ಯವಿಲ್ಲ ಎಂದು ತಿರುಗೇಟು ನೀಡಿದರು.

ಇವತ್ತು ಇಡೀ ರಾಷ್ಟ್ರಕ್ಕೆ ಮಾದರಿ ರಾಜ್ಯ ಎಂಬುದನ್ನು ನಮ್ಮ ಕಾರ್ಯಕರ್ತರು ತೋರಿಸಿಕೊಟ್ಟಿದ್ದಾರೆ. ಯಾವ ಪಕ್ಷದವರೂ ಮಾಡಿಲ್ಲದ ವಿನೂತನ ಕಾರ್ಯಕ್ರಮ. ಜಾತಿ, ಧರ್ಮ, ವರ್ಗ, ಪ್ರದೇಶಕ್ಕೆ ಸೀಮಿತವಾದುದಲ್ಲ. ಮಂಡ್ಯ ಜಿಲ್ಲಾ ಏಳು ಸ್ಥಾನಗಳನ್ನು ಗೆಲ್ಲುವ ಶಕ್ತಿ ನಿಮ್ಮ ಕೈಯಲ್ಲಿದೆ.



ಪಂಜಾಬ್‌ನ ಬೇಹಂತ್‌ಸಿಂಗ್, ಮಧ್ಯಪ್ರದೇಶದ ವಿ.ಸಿ.ಶುಕ್ಲಾ, ಚತ್ತೀಷ್ ಘಟದ ಮಹೇಂದ್ರವರ್ಮ, ನಂದಕುಮಾರ್ ನಂದಕುಮಾರ್ ಪಟೇಲ್ ಮುಂತಾದ ಕಾಂಗ್ರೆಸ್ ನಾಯಕರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇಂದು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರನ್ನು ಕೊಲ್ಲುವುದಕ್ಕೆ ಪ್ರಚೋದನೆ ಮಾಡಲಾಗುತ್ತಿದೆ ಎಂದು ಅವರು ಆರೋಪಿಸಿದರು.

ಬಿಜೆಪಿ ಸರಕಾರ ಜನರಪರ ಕಾರ್ಯಕ್ರಮಗಳನ್ನು ಕೊಡುವಲ್ಲಿ ವಿಫಲವಾಗಿದೆ. ತಾವು ಮಾಡಿದ ಅಭಿವೃದ್ಧಿ ಕೆಲಸಗಳನ್ನು ಹೇಳಿಕೊಳ್ಳಲು ಆಗುತ್ತಿಲ್ಲ. ಬದಲಾಗಿ, ಬೇರೆ ವಿಚಾರಗಳ ಮೂಲಕ ಜನರ ಮನಸ್ಸನ್ನು ತಿರುಗಿಸಿ ಮತ್ತೆ ಗೆಲ್ಲುವ ಯತ್ನ ನಡೆಸುತ್ತಿದೆ ಎಂದು ಅವರು ಟೀಕಿಸಿದರು.

ಕಾಂಗ್ರೆಸ್ ಬಡವರ, ದೀನದಲಿತರ, ಎಲ್ಲ ಧರ್ಮ, ವರ್ಗದ ಹಿತವನ್ನು ಬಯಸುವ ಪಕ್ಷ. ಇದಕ್ಕೆ ಕಾಂಗ್ರೆಸ್ ಸರಕಾರದಲ್ಲಿ ಜಾರಿಗೆ ತಂದಿರುವ ಯೋಜನೆಗಳು, ಕಾರ್ಯಕ್ರಮಗಳು ಸಾಕ್ಷಿಯಾಗಿವೆ. ಹಾಗಾಗಿ ಜನತೆ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ತರಲು ತೀರ್ಮಾನಿಸಿದ್ದಾರೆ ಎಂದು ಅವರು ಹೇಳಿದರು.

> ''ಬಸವರಾಜ ಬೊಮ್ಮಾಯಿ, ಜೆ.ಪಿ.ನಡ್ಡಾ ಅವರೇ ನೀವು ಹೇಳಿದ ಸ್ಥಳಕ್ಕೆ, ನಿಗದಿಪಡಿಸಿದ ವೇಳೆಗೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರನ್ನು ನಾವು ಕರೆದುಕೊಂಡು ಬರುತ್ತೇವೆ, ತಾಕತ್ತಿದ್ದರೆ ಹತ್ಯೆ ಮಾಡಿ ನೋಡೋಣ.''
> **-ರಣದೀಪ್‌ಸಿಂಗ್ ಸುರ್ಜೆವಾಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ**

ಮುಂಬರುವ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದ ಕಾಂಗ್ರೆಸ್ ಪಕ್ಷವು ಪ್ರತಿಕುಟುಂಬಕ್ಕೆ 200 ಯೂನಿಟ್ ಉಚಿತ ವಿದ್ಯುತ್, ಮನೆಯ ಯಜಮಾನಿಗೆ ಮಾಸಿಕ 2 ಸಾವಿರ ರೂ. ಕೊಡುವುದಾಗಿ ಘೋಷಿಸಿ ಅನುಷ್ಠಾನಕ್ಕೆ ತರುವ ಸ್ಪಷ್ಟ ಭರವಸೆ ನೀಡಿದೆ. ಇದು ಇಡೀ ದೇಶಕ್ಕೇ ಮಾದರಿಯಾದ ಯೋಜನೆಯಾಗಿದೆ ಎಂದು ಅವರು ವಿವರಿಸಿದರು.

ಪಕ್ಷದ ಮುಖಂಡರು, ಕಾರ್ಯಕರ್ತರು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ನೀಡಿರುವ ಭರವಸೆಯ ಯೋಜನೆಯ ಕಾಡ್‌ಗಳನ್ನು ತಂಡಗಳ ರಚನೆ ಮಾಡಿಕೊಂಡು ವಾರದೊಳಗೆ ಪ್ರತಿ ಮನೆಗೆ ತಲುಪಿಸಬೇಕು. ಈ ಯೋಜನೆಗಳು ಸರಕಾರ ಬಂದ ಮೊದಲನೇ ದಿನವೇ ಅನುಷ್ಠಾನಕ್ಕೆ ಬರುವುದನ್ನು ಖಾತ್ರಿ ಪಡಿಸಬೇಕು ಎಂದು ಅವರು ಪಕ್ಷದ ಮುಖಂಡರಿಗೆ ಸಲಹೆ ನೀಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಎಐಸಿಸಿ ವೀಕ್ಷಕ ರೋಜಿಜಾನ್, ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳೀಗೌಡ, ಮಧು ಮಾದೇಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ರಮೇಶ್ ಬಂಡಿಸಿದ್ದೇಗೌಡ, ಕೆಪಿಸಿಸಿ ಮಹಿಳಾಧ್ಯಕ್ಷೆ ಪುಷ್ಪ ಅಮರನಾಥ್, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ದಡದಪುರ ಶಿವಣ್ಣ, ಸಚ್ಚಿನ್‌ಮಿಗಾ, ಎಸ್. ಗುರುಚರಣ್, ಗಣಿಗ ರವಿಕುಮಾರ್, ಕೆ.ಕೆ.ರಾಧಾಕೃಷ್ಣ, ಡಾ.ಎಚ್.ಕೃಷ್ಣ, ರುದ್ರಪ್ಪ ಸೇರಿದಂತೆ ಇತರ ಮುಖಂಡರು ಉಪಸ್ಥಿತರಿದ್ದರು.

# ಹಳ್ಳಿ ಜನರ ಸಮಸ್ಯೆಗೆ ಪರಿಹಾರ ನೀಡಲು ಡಿಸಿ ನಡೆ ಹಳ್ಳಿ ಕಡೆ ಸಹಕಾರಿ

## ರಾಷ್ಟ್ರೀಕೃತ ಬ್ಯಾಂಕ್‌ನವರು ರೈತರನ್ನು ಹತ್ತಿರಕ್ಕೆ ಸೇರಿಸಿಕೊಳ್ಳುವುದಿಲ್ಲ, ಅವರಿಂದಾಗಿಯೇ ರೈತರ ಆತ್ಮಹತ್ಯೆ ಹೆಚ್ಚಾಗಿದೆ : ರೈತರ ಆರೋಪ

**ಉದಯಕಾಲ ನ್ಯೂಸ್**

**ತಿಪಟೂರು:** ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮ ಜನರ ಸಮಸ್ಯೆಗಳಿಗೆ ಕಿವಿಗೊಟ್ಟು ಖುದ್ದು ತಿಳಿದುಕೊಂಡು ಅದಕ್ಕೆ ಪರಿಹಾರವನ್ನೂ ಸ್ಥಳದಲ್ಲೇ ನೀಡುವ ವಿನೂತನ ಕಾರ್ಯಕ್ರಮವಾಗಿದೆ, ಇಲ್ಲಿ ಸರಕಾರದ ಸವಲತ್ತುಗಳ ಬಗ್ಗೆಯೂ ಜನರಿಗೆ ಮಾಹಿತಿ ನೀಡಲಾಗುತ್ತದೆ ಎಂದು ಉಪವಿಭಾಗಾಧಿಕಾರಿ ಕಲ್ಪಶ್ರೀ ಸಿ.ಆರ್. ತಿಳಿಸಿದರು.

ತಾಲೂಕಿನ ಶೆಟ್ಟಿಹಳ್ಳಿ ಮಜುರೆ ಕುಪ್ಪೂರು ಗ್ರಾಮದ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆಗತಾನೆ ಹುಟ್ಟುವ ಮಗುವಿನಿಂದ ಹಿಡಿದು ವಯಸ್ಸಾದ ವೃದ್ದರವರೆಗೂ ಎಲ್ಲ ಹಂತಗಳಲ್ಲೂ ಸರಕಾರದ ವತಿಯಿಂದ ಹಲವಾರು ಯೋಜನೆಗಳಿವೆ. ಈ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಂಡು ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು

ಈ ಕಾರ್ಯಕ್ರಮದಲ್ಲಿ ಎಲ್ಲ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದು ತಮ್ಮ ಇಲಾಖೆಗಳ ವಿವರಗಳನ್ನು ನೀಡುತ್ತಾರೆ. ಕೆಲವು ಇಲಾಖೆಗಳು ಪ್ರಾತ್ಯಕ್ಷಿಕೆಗಳನ್ನೂ ಹಮ್ಮಿಕೊಂಡಿವೆ. ಜನರ ಕುಂದು-ಕೊರತೆಗಳ ಬಗ್ಗೆಯೂ ಮಾಹಿತಿ ನೀಡಲಿದ್ದೇವೆ. ಈ ಗ್ರಾಮಕ್ಕೆ ವೈಧ್ಯರ ಕೊರತೆಯ ಬಗ್ಗೆ ಗಮನಕ್ಕೆ ಬಂದಿದ್ದು ಬಿಳಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ವಾರಕ್ಕೆ ಮೂರು ದಿನ ವೈಧ್ಯರನ್ನು ಇಲ್ಲಿಗೆ ನಿಯೋಜನೆ ಮಾಡಲಾಗುವುದು. ಶಿಕ್ಷಣ ಮತ್ತು ಆರೋಗ್ಯ ಬಹಳ ಮಹತ್ವದ್ದಾಗಿದೆ.



ಕೋವಿಡ್ ವೇಳೆ ಆರೋಗ್ಯದ ಮಹತ್ವ ಎಲ್ಲರಿಗೂ ಅರಿವಾಯಿತು. ಗ್ರಾಮದ ಎಲ್ಲರೂ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ಮಾಡಿಸಿಕೊಂಡರೆ 5 ಲಕ್ಷದವರೆಗೂ ಉಚಿತ ಚಿಕಿತ್ಸೆ ದೊರೆಯುತ್ತದೆ. ಇಂದು ಸ್ಥಳದಲ್ಲೇ ಆಭಾ ಕಾರ್ಡ್ ನೊಂದಣಿ ಮಾಡಿಕೊಳ್ಳುತ್ತಿದ್ದು ಎಲ್ಲರೂ ಇದರ ಉಪಯೋಗ ಪಡೆದುಕೊಳ್ಳಲು ಕೋರಿದರು.

ರೈತ ಚಿಕ್ಕಣ್ಣ ಸ್ಥಳೀಯ ಸಮಸ್ಯೆಗಳ ಬಗ್ಗೆ ಗಮನ ಸೆಳೆದು ಮಾತನಾಡಿ ರಾಷ್ಟ್ರೀಕೃತ ಬ್ಯಾಂಕ್‌ನವರು ರೈತರನ್ನು ಹತ್ತಿರಕ್ಕೆ ಸೇರಿಸಿಕೊಳ್ಳುವುದಿಲ್ಲ. ಅವರಿಂದಾಗಿಯೇ ರೈತರ ಆತ್ಮಹತ್ಯೆ ಹೆಚ್ಚಾಗಿದೆ. ಕೇವಲ ಉಳ್ಳವರು, ರಾಜಕಾರಣಿಗಳು ಹಾಗು ಪ್ರಭಾವಿಗಳಿಗೆ ಮಾತ್ರ ಸಾಲ ಕೊಡುತ್ತಾರೆ ವಿನಃ ಬಡರೈತರಿಗೆ ಎಳ್ಳಷ್ಟೂ ಸಹಾಯ ಮಾಡುವುದಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳ ಗಮನಕ್ಕೆ ಈ ವಿಷಯ ತರಲು ಬಂದಿದ್ದೇನೆ. ಲೀಡ್ ಬ್ಯಾಂಕ್‌ನವರನ್ನು ಇಲ್ಲಿಗೆ ಕರೆಸಿ ವಿಚಾರಿಸಿ ಎಂದರು. ಈ ವಿಷಯವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರುವುದಾಗಿ ಉಪವಿಭಾಗಾಧಿಕಾರಿ ಕಲ್ಪಶ್ರೀ ತಿಳಿಸಿದರು.

ಕರಡಿ ಗ್ರಾಪಂ ಅಧ್ಯಕ್ಷೆ ವಸಂತಕುಮಾರಿ, ಉಪಾಧ್ಯಕ್ಷ ಮುನಿರಾಜು, ಸದಸ್ಯರಾದ ದೇವರಾಜು, ತಹಸೀಲ್ದಾರ್ ಪವನ್‌ಕುಮಾರ್, ಉಪತಹಸೀಲ್ದಾರ್ ಜಗನ್ನಾಥ್ ಮತ್ತು ಅಶೋಕ್, ತಾಲ್ಲೂಕು ಇಓ ಸುದರ್ಶನ್ ಹಾಗೂ ಎಲ್ಲ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

> ರಾಷ್ಟ್ರೀಕೃತ ಬ್ಯಾಂಕ್‌ನವರು ರೈತರನ್ನು ಹತ್ತಿರಕ್ಕೆ ಸೇರಿಸಿಕೊಳ್ಳುವುದಿಲ್ಲ, ಅವರಿಂದಾಗಿಯೇ ರೈತರ ಆತ್ಮಹತ್ಯೆ ಹೆಚ್ಚಾಗಿದೆ. ಕೇವಲ ಉಳ್ಳವರು, ರಾಜಕಾರಣಿಗಳು ಹಾಗು ಪ್ರಭಾವಿಗಳಿಗೆ ಮಾತ್ರ ಸಾಲ ಕೊಡುತ್ತಾರೆ ವಿನಃ ಬಡರೈತರಿಗೆ ಎಳ್ಳಷ್ಟೂ ಸಹಾಯ ಮಾಡುವುದಿಲ್ಲ
> **-ಚಿಕ್ಕಣ್ಣ ರೈತರು**

## ಹಿಂದೂ ಜಾಗರಣಾ ವೇದಿಕೆಯಿಂದ ಛತ್ರಪತಿ ಶಿವಾಜಿ ಜಯಂತಿ ಆಚರಣೆ



**ಉದಯಕಾಲ ನ್ಯೂಸ್**

**ತಿಪಟೂರು:** ಛತ್ರಪತಿ ಶಿವಾಜಿ ಹಿಂದೂ ಸಮಾಜವನ್ನು ಒಗ್ಗೂಡುವಂತೆ ಮಾಡುವ ಹಾಗೂ ನಮ್ಮ ದೇಶ ಇಸ್ಲಾಂಮೀಕರಣವಾಗದಂತೆ ತಡೆದ ಏಕೈಕ ರಾಜ ಹಾಗೂ ಧಿಮಂತ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆಂದು ತುಮಕೂರು ಜಿಲ್ಲಾ ಹಿಂದೂ ಜಾಗರಣಾ ವೇದಿಕೆ ಕಾರ್ಯವಾಹಕ ಆರ್.ಸಿ.ನಾಗೇಶ್ ಅಭಿಪ್ರಾಯಪಟ್ಟರು.

ನಗರದ ಗಣಪತಿ ಪೆಂಡಾಲ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಮ್ಮ ಹಿಂದೂ ಸಮುದಾಯ ಮೊಗಲರ ದಬ್ಬಾಳಿಕೆಯ ಸಂದರ್ಭದಲ್ಲಿ ಕಾಪಾಡಿ, ಮೊಗಲರಿಗೆ ಸಿಂಹಸ್ವಪ್ನದ ರೀತಿಯಲ್ಲಿ ಕಾಡಿದ್ದ ಶಿವಾಜಿಯವರ ಜಯಂತಿಯನ್ನು ನಮ್ಮ ಸಮಾಜದ ಸಮ್ಮುಖದಲ್ಲಿ ಆಚರಿಸುವುದು ನಮ್ಮ ಹೆಮ್ಮೆ ಎಂದು ತಿಳಿಸಿದರು. ಈ ಕಾರ್ಯಕ್ರಮಕ್ಕೂ ಪ್ರಥಮವಾಗಿ ಶಿವಾಜಿಯವರ ಭಾವಚಿತ್ರವನ್ನು ನಗರದ ಪ್ರಮುಖ ಬೀದಿಗಳಲ್ಲಿ ಬೈಕ್ ರ‍್ಯಾಲಿಯ ಮೂಲಕ ಮೆರವಣಿಗೆ ನಡೆಸಿ ನಗರಸಭೆಯಲ್ಲಿ ವೃತ್ತದಲ್ಲಿ ಮೆರವಣಿಗೆ ಕಾರ್ಯಕ್ರಮದ ಸಂಪನ್ನಗೊಂಡಿತು.

ತಾಲ್ಲೂಕು ಅಧ್ಯಕ್ಷ ಬಾಳೆಕಾಯಿ ನಟರಾಜ್ ಮಾತನಾಡಿ, ನಾವಿಂದು ಹಿಂದುವಾಗಿ ಹುಟ್ಟಿ ಹಿಂದುವಾಗಿ ಸಾಯುತ್ತಿದ್ದೇವೆಂದರೆ ಅದು ಶಿವಾಜಿ ಮಹಾರಾಜರು ನಮಗೆ ಹಾಕಿಕೊಟ್ಟ ಹಾಗೂ ತೋರಿಸಿಕೊಟ್ಟ ದಿಟ್ಟ ನಡೆಗಳಿಂದ ಹಾಗೂ ಅವರ ನಮ್ಮ ಸಮಾಜದ ಮೇಲಾಗುತ್ತಿದ್ದ ದಬ್ಬಾಳಿಕೆಗಳ ವಿರುದ್ದ ಹೋರಾಟ ನಡೆಸಿ ನಮ್ಮದು ಹಿಂದೂ ರಾಷ್ಟ್ರವಾಗಲು ಹಾಗೂ ನವೆಲ್ಲರೂ ಹಿಂದುಗಳಾಗಿಯೇ ಇರಲು ಶ್ರಮಿಸಿದವರು ಎಂದು ತಿಳಿಸಿದರು.

ಮರಾಠ ಸಮಾಜದ ಹಿರಿಯ ಮುಖಂಡ ವಿಷ್ಣು ಜಿ, ಹಿಂದೂ ಜಾಗರಣಾ ವೇದಿಕೆ ತಾಲ್ಲೂಕು ಸಂಚಾಲಕ ಕೃಷ್ಣ, ಭಗತ್ ಕ್ರಾಂತಿ ಸೇನೆಯ ಮಧನ್, ಮುಖಂಡ ಗಾಡಿ ಮಂಜುನಾಥ್, ಮಧು ಸೇರಿದಂತೆ ಹಿಂದೂಪರ ಸಂಘಟನೆಯ ಮುಖಂಡರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

## ಕಾಡುಗೊಲ್ಲರನ್ನು ಎಸ್ಟಿಗೆ ಸೇರಿಸಿ: ಜಿಲ್ಲಾಧ್ಯಕ್ಷ ಗಂಗಾಧರ್



**ಉದಯಕಾಲ ನ್ಯೂಸ್**

**ಪಾವಗಡ:** ಕಾಡುಗೊಲ್ಲರನ್ನು ಎಸ್ಟಿ ಮೀಸಲಾತಿಗೆ ಪರಿಗಣಿಸಿ ಎಂದು ಜಿಲ್ಲಾ ಕಾಡುಗೊಲ್ಲರ ಸಂಘದ ಅಧ್ಯಕ್ಷ ಗಂಗಾಧರ್ ಸರ್ಕಾರವನ್ನು ಒತ್ತಾಯಪಡಿಸಿದರು.

ತಾಲ್ಲೂಕಿನ ಕಸಬಾ ಹೋಬಳಿಯ ವೀರ್ಲಗೊಂಧಿ ಗ್ರಾಮದಲ್ಲಿ ಕಾಡುಗೊಲ್ಲ ಸಂಘದ ವತಿಯಿಂದ ಭಾನುವಾರ ಆಯೋಜನೆಗೊಂಡಿದ್ದ ಕಾಡುಗೊಲ್ಲರ ನಡೆ ಎಸ್ಟಿ ಮೀಸಲಾತಿ ಹೋರಾಟದ ಕಡೆಗೆ ಜಾಗೃತಿ ಅಭಿಯಾನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು

ಕಾಡುಗೊಲ್ಲರು 1931 ರ ಹಿಂದೆ ಮೈಸೂರು ಸಂಸ್ಥಾನದಲ್ಲಿ ಕಾಡುಗೊಲ್ಲರ ಮಾಹಿತಿ ದಾಖಲೆಯಿತ್ತು. ನಂತರ 2018ರಲ್ಲಿ ಸಿದ್ದರಾಮಯ್ಯರ ಅವಧಿಯಲ್ಲಿ ಜಾತಿ ಪಟ್ಟಿಗೆ ಸೇರಿಸಿದ್ದು ಬಿಟ್ಟರೇ ಆನಂತರ ಸಂಪೂರ್ಣ ನಿರ್ಲಕ್ಷ್ಯಕ್ಕೊಳಪಟ್ಟಿರುವುದು ದುರಂತ ಎಂದರು. ಕಂದಾಯ ಇಲಾಖೆಯಲ್ಲಿ ಅರ್ಜಿ ಹಾಕಿಸಿ ಜಾತಿ ದಾಖಲಾತಿ ಪಡೆಯಿರಿ ಇಲ್ಲವಾದಲ್ಲಿ ಕಾಡುಗೊಲ್ಲರು ಇಲ್ಲ ಎಂಬ ವರದಿ ಬಲವಾಗುತ್ತದೆ ಎಂದರು. ಕಾಡುಗೊಲ್ಲ ಸಮಾಜದವರು ಎಸ್ಟಿ ಮೀಸಲಾತಿ ಹೋರಾಟಕ್ಕೆ ಬೆಂಬಲಿಸಿ ಎಂದು ಮನವಿ ಮಾಡಿದರು. ಕರಡಿಬುಳ್ಳಪ್ಪ ವೇದಿಕೆ ರಾಜ್ಯಾಧ್ಯಕ್ಷ ನಂದೀಶ್ ಮಾತನಾಡಿ ಕಾಡುಗೊಲ್ಲ ಬುಡಕಟ್ಟು ಸಮಾಜ ಸರ್ವತೋಭಿಮುಖವಾಗಿ ಅಭಿವೃದ್ಧಿಯಾಗಬೇಕಾದರೆ ಮೊದಲು ಸಂಘಟಿತರಾಗಿ ಶಿಕ್ಷಣವಂತರಾಗಬೇಕು ಎಂದು ತಿಳಿಸಿದರು. ಕಾಡುಗೊಲ್ಲರಿಗೆ ಮೀಸಲಾತಿ ಬೇಡಿಕೆಯನ್ನ ಈಡೇರಿಸದಂತೆ ಹಿರಿಯೂರು ಶಾಸಕಿ ಪೂರ್ಣಿಮಾ ಶ್ರೀನಿವಾಸ್ ನಕಾರ ಎತ್ತಿರುವುದು ಬೇಸರದ ಸಂಗತಿ. ಸಂಸದ ನಾರಾಯಣಸ್ವಾಮಿ ಯವರು ಗಮನಹರಿಸಿ ಕಾಡುಗೊಲ್ಲರಿಗೆ ನ್ಯಾಯ ಒದಗಿಸುವಂತೆ ಸರ್ಕಾರವನ್ನ ಎಚ್ಚರಿಸಿದರು.

ತಾಲ್ಲೂಕು ಕಾಡುಗೊಲ್ಲ ಘಟಕದ ಅಧ್ಯಕ್ಷ ಬೋರಣ್ಣ ಮಾತನಾಡಿ ಮೂಲಭೂತ ಸೌಕರ್ಯ ಪಡೆಯಲು ಜಾಗೃತಿಗೊಳ್ಳಿ ಎಂದರು. ಇಂಜಿನಿಯರ್ ಸಿದ್ದಪ್ಪ ಅವರು ಮಾತನಾಡಿ ಕಾಡುಗೊಲ್ಲರನ್ನ ಎಚ್ಚರಿಸುವಂತ ಜಾಗೃತಿ ಕಾರ್ಯಕ್ರಮ ಸ್ವಾಗತಾರ್ಹವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ವಿಶೇಷವಾಗಿ ಕಾಡುಗೊಲ್ಲ ಬುಡಕಟ್ಟು ಸಮಾಜದಲ್ಲಿ ವಿಭಿನ್ನವಾದ ಸಾಂಪ್ರಾದಾಯಿಕ ಆಚರಣೆ, ಸಂಸ್ಕೃತಿಯನ್ನ ಪ್ರತಿಬಿಂಬಿಸುವ ಪದ್ದತಿಗಳಾದ ಹರಣೆ ಶಾಸ್ತ್ರಹಸೆ ಹಚ್ಚುವುದು ಮಜ್ಜಿಗೆ ಕಡಿಯುವುದು, ಒಳ್ಳಕ್ಕಿ, ಬೀಸುವ ಮೂಲಕ ಸಾಂಪ್ರದಾಯಿಕ ಆಚರಣೆಗಳ ಮಹತ್ವವನ್ನ ಮಹಿಳೆಯರು ಪ್ರದರ್ಶಿಸಿದ್ದು ಗಮನಸೆಳೆಯಿತು. ಜೊತೆಗೆ ಗ್ರಾಮದಲ್ಲಿ ಕುಲದೇವರ ಮೂರ್ತಿಯೊಂದಿಗೆ ಕುಣಿದು ಸಾಗಿದರು. ಈ ಸಂದರ್ಭದಲ್ಲಿ ಎಚ್.ಎಂ.ಟಿ ರಮೇಶ್, ಮಾಜಿ ಜಿ.ಪಂ ಸದಸ್ಯ ಪಾಪಣ್ಣ, ಮುಗದಾಳಬೆಟ್ಟದ ನರಸಿಂಹಪ್ಪ,ಕೆ.ಎ.ಎಸ್ ಶಿವಕುಮಾರ್, ಪ್ರಾಚಾರ್ಯ ಕೆ.ಎಸ್ ಈರಣ್ಣ, ಮಧುಗಿರಿ ಉಪನೊಂದಣಾಧಿಕಾರಿ ಇಲಾಖೆಯ ನಾಗರಾಜು, ಕಾಡುಗೊಲ್ಲ ಕಸಬಾ ಹೋಬಳಿ ಅಧ್ಯಕ್ಷ ನಾಗೇಂದ್ರಪ್ಪ,ನಿಡಗಲ್ ಅಧ್ಯಕ್ಷ ನಾಗೇಂದ್ರ, ಭದ್ರೇಗೌಡರು, ಉಪನ್ಯಾಸಕ ಬೊಮ್ಮಣ್ಣ, ಶಿಕ್ಷಕ ತಮ್ಮಣ್ಣ, ಮುಖಂಡರಾದ ಬೋರಣ್ಣ,ಭೂಮಾಪನ ಇಲಾಖೆಯ ಶಿವಣ್ಣ, ಕೆಂಚಮ್ಮನಹಳ್ಳಿ ಗೋಪಾಲ್ , ಕೃಷ್ಣ ಮೂರ್ತಿ, ಶಿವಕುಮಾರ್, ತೇಜುಯಾದವ್ ಮತ್ತೀತರರು ಇದ್ದರು.

**ಕೆನರಾ ಬ್ಯಾಂಕ್ Canara Bank**
**ಸೋಮನಹಳ್ಳಿ ಶಾಖೆ**
**ಬಿ.ಎಂ. ರಸ್ತೆ, ಸೋಮನಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.**

ಈ ಕೆಳಗೆ ಸೂಚಿಸಿರುವ ಸಾಲಗಾರರು ತಮ್ಮ ಆಭರಣಗಳನ್ನು ನಮ್ಮ ಬ್ಯಾಂಕಿನಲ್ಲಿ ಅಡವಿಟ್ಟು ಸಾಲ ಪಡೆದುಕೊಂಡಿದ್ದು, ಸಾಲ ಮರುಪಾವತಿ ಮಾಡಲು ವಿಫಲರಾಗಿರುವುದಕ್ಕಾಗಿ ನೋಟಿಸ್ ನೀಡಲಾಗಿದೆ. ಈ ನೋಟಿಸ್ ಮೂಲಕ ತಿಳಿಸುವುದೇನೆಂದರೆ ದಿನಾಂಕ 01.03.2023ರ ಒಳಗಾಗಿ ಬಡ್ಡಿ ಸಮೇತವಾಗಿ ಸಾಲದ ಹಣವನ್ನು ಮರುಪಾವತಿಸಿ ಆಭರಣಗಳನ್ನು ಬಿಡಿಸಿಕೊಳ್ಳದಿದ್ದಲ್ಲಿ ಆಭರಣಗಳನ್ನು **02.03.2023ರಂದು ಹರಾಜು ಮಾಡಲಾಗುವುದು** ಅಥವಾ ಇತರೆ ಯಾವುದೇ ನೋಟಿಸ್ ನೀಡಿದ ಸೂಕ್ತ ದಿನಾಂಕವನ್ನು ಬ್ಯಾಂಕ್ ನಿಗದಿಪಡಿಸಬಹುದು. ಹರಾಜಿನಲ್ಲಿ ಬಂದ ಮೊತ್ತದಿಂದ ಸಾಲಕ್ಕೆ ಜಮಾ ಮಾಡಿ, ಉಳಿದ ಪಕ್ಷದಲ್ಲಿ ಬೇರೆ ಯಾವುದೇ ಸಾಲದ ಬಾಬ್ತು ಇಲ್ಲದಿದ್ದಲ್ಲಿ ಅವರಿಗೆ ಹಿಂದಿರುಗಿಸಲಾಗುವುದು ಅಥವಾ ಕಡಿಮೆ ಇದ್ದ ಪಕ್ಷದಲ್ಲಿ ಹಣವನ್ನು ವಸೂಲಿ ಮಾಡಲು ಕಾನೂನಿನ ರೀತಿ ಕ್ರಮ ಕೈಗೊಳ್ಳಲಾಗುವುದು. ಸಾಲಗಾರರು ಮರಣ ಹೊಂದಿದ್ದಲ್ಲಿ ಅವರ ವಾರಸುದಾರರಿಗೆ ಈ ಷರತ್ತು ಮತ್ತು ನಿಯಮ ನಿಬಂಧನೆಗಳು ಅನ್ವಯವಾಗಿರುತ್ತದೆ.

**ಸಾಲಗಾರರ ಹೆಸರು ಮತ್ತು ವಿಳಾಸ: ಶ್ರೀ ಶಿವಶಂಕರ,** ಬಿನ್ ಎಲೆಮೊಗಯ್ಯ, ಮಾದನಾಯಕನಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯ.
**ಸಾಲದ ಖಾತೆ ನಂ. 16018390021134,** **ಬರಬೇಕಾದ ಸಾಲದ ಮೊತ್ತ : ರೂ. 40,606.22,**

**ದಿನಾಂಕ: 22.02.2023**
**ಸ್ಥಳ: ಸೋಮನಹಳ್ಳಿ**
**ಸಹಿ/- ಅಧಿಕೃತ ಅಧಿಕಾರಿಗಳು**
**ಕೆನರಾ ಬ್ಯಾಂಕ್**

**PUBLIC NOTICE**

As per the instructions of client C P Manjula w/o G Prasadh, Door No.310, Nallagurappa Beedhi, Kandavara Pete, Chickballapur Town. A.M Chickeerappa Advocate, Chickballapur Town publish this notice as under
My Client has lost the Original Register Sale deeds dated 17-02-1995 Vide No: 2490/1994-95. And another register sale deed dated 15-10-2007 Vide No: 2505/2007-08 registered before Sub registrar, Chickballapur. These original documents were with custody of client. While shifting the residential House the aforesaid original documents were lost. Regarding this accept Police Complaint was also given to the concerned Authority. In case if the documents are noticed or traced by any person's kindly handover to TOWY aral Police Station Chickballapur or to my client or to advocate address please call to the phone No: 9964327185.

**A.M. CHICKKEERAPPA** B.Sc. LLB,
ADVOCATE
Snnivasa Nilaya, Opp Prashantha Bola Mandir, Japasandra, Chickballapur-562101.
Mob:9845577307

**ಮಾನ್ಯ 2ನೇ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಕ್ಕಬಳ್ಳಾಪುರ**
**ಸಿ.ಎಂ.ಸಿ. ನಂ: 1017/2022**

ಅರ್ಜಿದಾರರು: 1. ಶ್ರೀಮತಿ ಅಶ್ವತ್ಥಮ್ಮ ಬಿನ್ ಲೇಟ್ ಮುನಿಯಪ್ಪ, ವಯಸ್ಸು : 48 ವರ್ಷ **2. ಶ್ರೀ ತಿಮ್ಮರಾಯಪ್ಪ** ಬಿನ್ ಲೇಟ್ ಬೆರಕಪ್ಪ, ವಯಸ್ಸು: 75 ವರ್ಷ. **3. ಶ್ರೀಮತಿ. ಸಾದಮ್ಮ** ಬಿನ್ ಲೇಟ್ ಬೆರಕಪ್ಪ ವಯಸ್ಸು : 73 ವರ್ಷ **4. ಚಿಕ್ಕಸಾದಪ್ಪ** ಬಿನ್ ಲೇಟ್ ಬೆರಕಪ್ಪ ವಯಸ್ಸು: 70 ವರ್ಷ 1 ರಿಂದ 4 ರವರ ಎಲ್ಲರ ವಾಸ : ನಂದಿ ಗ್ರಾಮ ಮತ್ತು ಹೋಬಳ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ. -ವಿರುದ್ಧ-
ಎದುರುದಾರರು: ಮಾನ್ಯ ತಹಸೀಲ್ದಾರ್‌ರವರು, ಜನನ ಮತ್ತು ಮರಣ ಪ್ರಮಾಣ ಪತ್ರದ ನೋಂದಣಾಧಿಕಾರಿಗಳು, ಅಕ್ಷಾಮದ ಕಾಲ್ಕ 50,

**ಮರಣ ಪ್ರಮಾಣ ಪತ್ರದ ಪತ್ರಿಕಾ ಪ್ರಕಟಣೆ**

ಈ ಪ್ರಕರಣದ 1ನೇ ಅರ್ಜಿದಾರರ ಅಜ್ಜಿ, 2 ರಿಂದ 4ನೇ ಅರ್ಜಿದಾರರ ತಾಯಿಯಾದ ಶ್ರೀಮತಿ. ವಸಂತಮ್ಮ ಕೋಂ ಲೇಟ್ ಬೆರಕಪ್ಪರವರು ದಿನಾಂಕ: 28-06-1990 ರಂದು ನಂದಿ ಗ್ರಾಮ ಮತ್ತು ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ ಈ ವಿಳಾಸದಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ಪ್ರಮಾಣ ಪತ್ರ ಪಡೆಯಲು ಇವರ ವಾರಸ್ಸುದಾರರಾದ ಅರ್ಜಿದಾರರು ಚಿಕ್ಕಬಳ್ಳಾಪುರ ಮಾನ್ಯ 2ನೇ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಚಿಕ್ಕಬಳ್ಳಾಪುರದಲ್ಲಿ ಮರಣ ಪ್ರಮಾಣ ಪತ್ರವನ್ನು ಪಡೆಯಲು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. 1ನೇ ಅರ್ಜಿದಾರರ ಅಜ್ಜಿ, 2 ರಿಂದ 4ನೇ (ಅರ್ಜಿದಾರರ ತಾಯಿಯಾದ ಶ್ರೀಮತಿ. ವಸಂತಮ್ಮ ಕೋಂ ಲೇಟ್ ಬೆರಕಪ್ಪರವರ ಮರಣ ಪ್ರಮಾಣ ಪತ್ರ ಪಡೆಯಲು ಯಾರಾದರು ತಕರಾರು ಇದ್ದಲ್ಲಿ ಅಥವಾ ವಿರೋದ ಇದ್ದಲ್ಲಿ ಲಿಖಿತವಾಗಿ ಅಥವಾ ಖುದ್ದಾಗಿ ದಾಖಲೆ ಸಮೇತ ದಿನಾಂಕ: 15.03.2023 ರಂದು 11.00 ಗಂಟೆಗೆ ಮಾನ್ಯ ಘನ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಅಹವಾಲುಗಳನ್ನು/ತಕರಾರನ್ನು ಸಲ್ಲಿಸುವುದು. ಇಲ್ಲವಾದಲ್ಲಿ ತಮ್ಮ ಗೈರು ಹಾಜರಿಯನ್ನು ನ್ಯಾಯಾಲಯವು ಪರಿಗಣಿಸಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ಅಂತಿಮ ತೀರ್ಪು ಹೊರಡಿಸಲಾಗುವುದು.
ನ್ಯಾಯಾಲಯದಿಂದ ನಾನು ಮೊಹರಿನ ಪತ್ರಿಕಾ ಪ್ರಕಟಣೆಯನ್ನು ಸ್ವೀಕರಿಸಿದ ದಿನಾಂಕ: 22.02.2023

**ಶಿರಸ್ತೇದಾರ್, ಮಾನ್ಯ 1ನೇ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಕ್ಕಬಳ್ಳಾಪುರ**
ಅರ್ಜಿದಾರರ ಪರ ವಕೀಲರು:
**ಶ್ರೀ. ನರಸಿಂಹಮೂರ್ತಿ,**
ವಕೀಲರು, ಆರ್.ಕೆ. ಕಾಂಪ್ಲೆಕ್ಸ್, ಎಸ್.ಟಿ.ಐ. ಬ್ಯಾಂಕ್ ಹತ್ತಿರ, ಬಿ.ಬಿ. ರಸ್ತೆ, ಚಿಕ್ಕಬಳ್ಳಾಪುರ–562101

**AFFIDAVIT**

S. MOHAN RAJ S/o. SUNDHARRAJ., Residing at No.2/458, pokkuvarthu nagar, alamaruthupatti post, kalikkampatti, Dindugal District - 624 303. Do here by solemnly affirm declare and state my affidavit as on this 21th day of February 2023.
I submit that the I am the petitioner in the case Case No- M.A.C.O.P NO 95/2020 is filed against the respondent -1 J.DIMAL JOHNSON S/O M.T John No 3, 4th Main Link Road, Madiwala Hosur Road, Bangalore. claiming compensation on account of injuries sustained in a road traffic accident. I have taken steps several times through court and RPAD In The (PRINCIPAL SUB COURT PALANI) Case No-M.A.C.O.P NO 95/2020. At the time of filing this petition, respondent no-1 is residing at the above said address. Though he is residing at the same address, he is only avoiding taking court summons purposefully and dragging on the proceedings and he was keeping out of the say for the purpose of avoiding service the case has been adjourned on 10.04.2023 for the appearance of the 1st respondent in said the court if they have any objection they should appear in the court on 10.04.2023 at 10 am in person through a lawyer and raise the objection it is hereby intimated that in default the petition will be ex-parte against them.
Bengaluru
Date:

**ಮಾನ್ಯ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ ಕನಕಪುರ**
**ಓ.ಎಸ್.ನಂ. 528/2021**

**ವಾದಿಗಳು:** ಶ್ರೀಮತಿ ಕೆಂಪಮ್ಮ
**ಮತ್ತು**
**ಪ್ರತಿವಾದಿಗಳು:** ಶ್ರೀ ಈಶ್ವರ ರಾವ್ ಮತ್ತು ಇತರರು ಪ್ರತಿವಾದಿ ನಂ.2 ಶ್ರೀಮತಿ ಜಯಶ್ರೀ ಕೋಂ ನಟರಾಜ್ ವಯಸ್ಸು 44 ವರ್ಷ ವಾಸ : ನಂ: 306/2, 5ನೇ ಮುಖ್ಯ ರಸ್ತೆ, 4ನೇ ಕ್ರಾಸ್ ಎಂ.ಟಿ.ಬಿ ಏರಿಯ, ಜಯನಗರ, ಬೆಂಗಳೂರು- 560041, ಶ್ರೀಮತಿ ಕಲ್ಪನಬಾಯಿ ಕೋಂ ಶ್ರೀನಿವಾಸರಾವ್ ವಯಸ್ಸು 44 ವರ್ಷವಾಸ : ಮೋತಿನಗರ, ರಾಮನಗರ ಟೌನ್, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ -562156

**ಪತ್ರಿಕ ಪ್ರಕಟಣೆ**

ವಾದಿಯು ಶ್ರೀಮತಿ ಕೆಂಪಮ್ಮ ಕೋಂ ಲೇಟ್ ಮಾದೇಗೌಡ @ ಹೊಟ್ಟಪ್ಪ ಮೇಲೆ ನಮೂದಿಸಿರುವ ಮೂಲ ದಾವೆಯನ್ನು ಷೆಡ್ಯೂಲ್ ಸ್ವತ್ತು, ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ಚೀಲೂರು ಗ್ರಾಮದ ಸರ್ವೆ ನಂ.94/3 ರಲ್ಲಿ 0-26 ಗುಂಟೆ ಸ್ವತ್ತಿಗೆ ಸಂಭಂದಿಸಿದಂತೆ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ದಾಖಲಿಸಿರುತ್ತಾರೆ. ಪ್ರತಿವಾದಿ ನಂ.2 ಮತ್ತು 3 ರವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ದಾವೆಯ ವಿಚಾರಣೆಯನ್ನು ದಿನಾಂಕ : 28-03-2023 ರಂದು ಬೆಳಿಗ್ಗೆ 11.00 ಗಂಟೆಗೆ ಕನಕಪುರ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ನಿಗದಿಪಡಿಸಿದ್ದು, ವಿಚಾರಣೆಗೆ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ. ಈ ದಾವೆಯ ವಿವಾದಕ್ಕೆ ಸಂಭಂದಿಸಿದಂತೆ ಲಿಖಿತ ಹೇಳಿಕೆ / ದಾಖಲೆಗಳನ್ನು ಆ ದಿವಸ ಹಾಜರುಪಡಿಸಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಈ ದಾವೆಯನ್ನು ನಿಮ್ಮಗಳ ಗೈರು ಹಾಜರಿಯಲ್ಲಿಯೇ ವಿಚಾರಣೆ ಮಾಡಿ ಇತ್ಯರ್ಥ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್ ಸ್ವತ್ತಿನ ವಿವರ**

2.ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು ಮರಳವಾಡಿ ಹೋಬಳಿ, ಚೀಲೂರು ಗ್ರಾಮದ ಸರ್ವೆ ನಂ.94/3 ರಲ್ಲಿ 0-26 ಗುಂಟೆ ವಿಸ್ತೀರ್ಣದ ಸ್ವತ್ತಿಗೆ ಚಕ್ಕುಬಂದಿ:-
ಪೂರ್ವಕ್ಕೆ: ಬಸವರಾಜು ರವರ ಸ್ವತ್ತು ಪಶ್ಚಿಮಕ್ಕೆ: ಸರ್ಕಾರಿ ರಸ್ತೆ ಉತ್ತರಕ್ಕೆ: ಬಸವರಾಜು ರವರ ಸ್ವತ್ತು. ದಕ್ಷಿಣಕ್ಕೆ: ಗಣೇಶಪ್ಪ ರವರ ಸ್ವತ್ತು.
ದಿನಾಂಕ 21-02-2023 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೆದಾರರು,**
**ಹಿರಿಯ ಸಿವಿಲ್ ನ್ಯಾಯಾಲಯ ಕನಕಪುರ**
**ವಾದಿಯಪರ ವಕೀಲರು**
**ಹೆಚ್.ಡಿ.ಲಿಂಗರಾಜು**
**ಸ್ಥಳ : ಕನಕಪುರ**
**ದಿನಾಂಕ: 14.02.2023**

**ಮಾನ್ಯ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ ಕನಕಪುರ**
**ಓ.ಎಸ್.ನಂ. 504/2021**

**ವಾದಿಗಳು:** ಶ್ರೀ ಸೋಮಶೇಖರ್
**ಮತ್ತು**
**ಪ್ರತಿವಾದಿಗಳು:** ಶ್ರೀ ದಿನೇಶ್‌ರಾವ್ ಪ್ರತಿವಾದಿ ನಂ.1 ಶ್ರೀ ದಿನೇಶ್ ರಾವ್ ಬಿನ್ ಶಂಕರ್‌ರಾವ್ ನಲಿಗೆ ವಯಸ್ಸು 53 ವರ್ಷ ವಾಸ : ರವಿ ರಾಗಿ ಮಿಲ್ಲ್ ಚಿಕ್ಕಮರಳವಾಡಿ ಗ್ರಾಮ. ಮರಳವಾಡಿ ಹೋಬಳಿ, ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ 562121

**ಪತ್ರಿಕ ಪ್ರಕಟಣೆ**

ವಾದಿಯು ಶ್ರೀ ಸೋಮಶೇಖರ್ ಬಿನ್ ಕೆ.ಎನ್.ಶಿವಪ್ರಸಾದ್ ರವರುಮೇಲೆ ನಮೂದಿಸಿರುವ ಮೂಲ ದಾವೆಯನ್ನು ಷೆಡ್ಯೂಲ್ ಸ್ವತ್ತು, ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ದೊಡ್ಡಮರಳವಾಡಿ ಗ್ರಾಮ ಪಂಚಾಯ್ತಿ, ಚಿಕ್ಕಮರಳವಾಡಿ ಗ್ರಾಮದ ಖಾನೇಷುಮಾರಿ ಹಳೆ ನಂ.166/208/ಬಿ ಮತ್ತು ಖಾನೇಷುಮಾರಿ ಹೊಸ ನಂ.45/208/ಎ/4 ರಲ್ಲಿ ವಿಸ್ತೀರ್ಣ ಪೂರ್ವ-ಪಶ್ಚಿಮ 50 ಅಡಿಗಳು, ಉತ್ತರ-ದಕ್ಷಿಣ 20 ಅಡಿಗಳು, ಇದರಲ್ಲಿ 15ಥ20 ಅಡಿ ಅಳತೆಯುಳ್ಳ ಮಂಗಳೂರು ಹೆಂಚಿನ ಎರಡು ಅಂಗಡಿ ಮಳಿಗೆಗಳು ಸಹ ಸೇರಿವೆ, ಈ ಸ್ವತ್ತಿಗೆ ಸಂಭಂದಿಸಿದಂತೆ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ದಾಖಲಿಸಿರುತ್ತಾರೆ. ಪ್ರತಿವಾದಿ ನಂ.1 ರವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ದಾವೆಯ ವಿಚಾರಣೆಯನ್ನು ದಿನಾಂಕ : 25-03-2023 ರಂದು ಬೆಳಿಗ್ಗೆ 11.00 ಗಂಟೆಗೆ ಕನಕಪುರ ಹಿರಿಯ ಸಿವಿಲ್ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯದಲ್ಲಿ ನಿಗದಿಪಡಿಸಿದ್ದು, ವಿಚಾರಣೆಗೆ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ. ಈ ದಾವೆಯ ವಿವಾದಕ್ಕೆ ಸಂಭಂದಿಸಿದಂತೆ ಲಿಖಿತ ಹೇಳಿಕೆ / ದಾಖಲೆಗಳನ್ನು ಆ ದಿವಸ ಹಾಜರುಪಡಿಸಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಈ ದಾವೆಯನ್ನು ನಿಮ್ಮಗಳ ಗೈರು ಹಾಜರಿಯಲ್ಲಿಯೇ ವಿಚಾರಣೆ ಮಾಡಿ ಇತ್ಯರ್ಥ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್ ಸ್ವತ್ತಿನ ವಿವರ**

1.ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ದೊಡ್ಡಮರಳವಾಡಿ ಗ್ರಾಮ ಪಂಚಾಯ್ತಿ, ಚಿಕ್ಕಮರಳವಾಡಿ ಗ್ರಾಮದ ಖಾನೇಷುಮಾರಿ ಹಳೆ ನಂ.166/208/ಬಿ ಮತ್ತು ಖಾನೇಷುಮಾರಿ ಹೊಸ ನಂ.45/208/ಎ/4 ರಲ್ಲಿ ವಿಸ್ತೀರ್ಣ ಪೂರ್ವ-ಪಶ್ಚಿಮ 50 ಅಡಿಗಳು, ಉತ್ತರ-ದಕ್ಷಿಣ 20 ಅಡಿಗಳು, ಇದರಲ್ಲಿ 15ಥ20 ಅಡಿ ಅಳತೆಯುಳ್ಳ ಮಂಗಳೂರು ಹೆಂಚಿನ ಎರಡು ಅಂಗಡಿ ಮಳಿಗೆಗಳು ಸಹ ಸೇರಿದ ಸ್ವತ್ತಿಗೆ ಚಕ್ಕುಬಂದಿ:
ಪೂರ್ವಕ್ಕೆ: ಪಿ.ಡಬ್ಲ್ಯೂ.ಡಿ ರಸ್ತೆ ಪಶ್ಚಿಮಕ್ಕೆ: ಶಂಕರ್ ರಾವ್ ನಲಿಗೆ ರವರ ಸ್ವತ್ತು ಉತ್ತರಕ್ಕೆ: ರವಿ ರವರ ಸ್ವತ್ತು. ದಕ್ಷಿಣಕ್ಕೆ: ಭೈರೇಗೌಡ ರವರ ಸ್ವತ್ತು.
ದಿನಾಂಕ 21-02-2023 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೆದಾರರು,**
**ಹಿರಿಯ ಸಿವಿಲ್ ನ್ಯಾಯಾಲಯ ಕನಕಪುರ**
**ವಾದಿಯಪರ ವಕೀಲರು**
**ಹೆಚ್.ಡಿ.ಲಿಂಗರಾಜು**
**ಸ್ಥಳ : ಕನಕಪುರ**
**ದಿನಾಂಕ: 14.02.2023**

**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ, ನ್ಯಾಯಾಲಯ ಕನಕಪುರ**
**ಸಿ.ಮಿಸ್.ನಂ. 1161/2022**

**ಅರ್ಜಿದಾರರು:** ಶ್ರೀಮತಿ ಕಾಳಮ್ಮ ಬಿನ್ ಲೇಟ್ ಮೊಳ್ಳೇಗೌಡ ವಯಸ್ಸು 83 ವರ್ಷ ವಿಳಾಸ: ಗೇರಹಳ್ಳಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು
**ವಿರುದ್ಧ**
**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಗೇರಹಳ್ಳಿ ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
**ಪ್ರಕಟಣೆ**
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ಸಹೋದರ, 3ನೇ ಅರ್ಜಿದಾರರ ಗಂಡ ಮತ್ತು 4ನೇ ಅರ್ಜಿದಾರರ ಭಾವನವರಾದ ಶ್ರೀ ರಾಮಸ್ವಾಮಿ ಬಿನ್ ಲೇಟ್ ಮೊಳ್ಳೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಗೇರಹಳ್ಳಿ ಗ್ರಾಮದಲ್ಲಿ ದಿನಾಂಕ 08.11.1990 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 04.03.2023 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2023ರ ಫೆಬ್ರವರಿ 21ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೆದಾರರು,**
**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ**
**ಅರ್ಜಿದಾರರ ಪರ ವಕೀಲರು**
**ಸಿ.ಎಂ.ಜಗದೀಶ್**
**ವಕೀಲರು, ಕನಕಪುರ**
**ಸ್ಥಳ : ಕನಕಪುರ**
**ದಿನಾಂಕ: 21/02/2023**

**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ, ನ್ಯಾಯಾಲಯ ಕನಕಪುರ**
**ಸಿ.ಮಿಸ್.ನಂ. 1160/2022**

**ಅರ್ಜಿದಾರರು:** ಶ್ರೀಮತಿ ಕಾಳಮ್ಮ ಬಿನ್ ಲೇಟ್ ಮೊಳ್ಳೇಗೌಡ ವಯಸ್ಸು 83 ವರ್ಷ ವಿಳಾಸ: ಗೇರಹಳ್ಳಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು
**ವಿರುದ್ಧ**
**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಗೇರಹಳ್ಳಿ ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
**ಪ್ರಕಟಣೆ**
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ತಾಯಿ, 3 ಮತ್ತು 4ನೇ ಅರ್ಜಿದಾರರ ಅತ್ತೆಯವರಾದ ಶ್ರೀಮತಿ ಪುಟ್ಟಮಾರಮ್ಮ ಕೋಂ ಮೊಳ್ಳೇಗೌಡರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಗೇರಹಳ್ಳಿ ಗ್ರಾಮದಲ್ಲಿ ದಿನಾಂಕ 15.09.1991 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 04.03.2023 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2023ರ ಫೆಬ್ರವರಿ 21ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೆದಾರರು,**
**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ**
**ಅರ್ಜಿದಾರರ ಪರ ವಕೀಲರು**
**ಸಿ.ಎಂ.ಜಗದೀಶ್**
**ವಕೀಲರು, ಕನಕಪುರ**
**ಸ್ಥಳ : ಕನಕಪುರ**
**ದಿನಾಂಕ: 21/02/2023**

**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ, ನ್ಯಾಯಾಲಯ ಕನಕಪುರ**
**ಸಿ.ಮಿಸ್.ನಂ. 1159/2022**

**ಅರ್ಜಿದಾರರು:** ಶ್ರೀಮತಿ ಕಾಳಮ್ಮ ಬಿನ್ ಲೇಟ್ ಮೊಳ್ಳೇಗೌಡ ವಯಸ್ಸು 83 ವರ್ಷ ವಿಳಾಸ: ಗೇರಹಳ್ಳಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು
**ವಿರುದ್ಧ**
**ಪ್ರತಿ ಅರ್ಜಿದಾರರು:** 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಗೇರಹಳ್ಳಿ ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
**ಪ್ರಕಟಣೆ**
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ತಂದೆ 3 ಮತ್ತು 4ನೇ ಅರ್ಜಿದಾರರ ಮಾವನವರಾದ ಶ್ರೀ ಮೊಳ್ಳೇಗೌಡ ಬಿನ್ ಲೇಟ್ ಅತ್ತಿಹಳ್ಳಿಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಗೇರಹಳ್ಳಿ ಗ್ರಾಮದಲ್ಲಿ ದಿನಾಂಕ 10.08.1985 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 04.03.2023 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2023ರ ಫೆಬ್ರವರಿ 21ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೆದಾರರು,**
**ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ**
**ಅರ್ಜಿದಾರರ ಪರ ವಕೀಲರು**
**ಸಿ.ಎಂ.ಜಗದೀಶ್**
**ವಕೀಲರು, ಕನಕಪುರ**
**ಸ್ಥಳ : ಕನಕಪುರ**
**ದಿನಾಂಕ: 21/02/2023**

## ಚುಟುಕು ಸುದ್ದಿ

### ಪಠ್ಯವು ನಾಟಕ ಅಭಿನಯದ ಮೂಲಕ ಗಟ್ಟಿಗೊಳ್ಳುವುದು: ಚಂದ್ರಶೇಖರ ಹಡಪದ



**ಉದಯಕಾಲ ನ್ಯೂಸ್**

**ವಿಜಯಪುರ:** ಮಕ್ಕಳಿಗೆ ಯಾವದೇ ಪಠ್ಯದ ಮನನ ವಾಗಬೇಕಾದರೆ ಚರ್ಚೆ,ಚಟುವಟಿಕೆ,ನಾಟಕ,ರೂಪಕದ ಮೂಲಕ ಸಾಧ್ಯ. ಹಾಗೆ ಪಠ್ಯದ ಸ್ಪಷ್ಟ ಚಿತ್ರಣ ಮಕ್ಕಳಲ್ಲಿನ ಸುಪ್ತ ಆಸಕ್ತ ಕಲೆ ಪ್ರದರ್ಶನಕ್ಕೆ ಸೂಕ್ತ ಅವಕಾಶ ಎಂಬ ವಿಚಾರವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ನಾರಾಯಣಪುರ ಶಾಲೆಯ ಮುಖ್ಯೋಪಾಧ್ಯಾಯರಾದ ಚಂದ್ರಶೇಖರ ಹಡಪದ ತಿಳಿಸಿದರು.

ಅವರು ಇಲ್ಲಿಗೆ ಸಮೀಪದ ಸರ್ಕಾರಿ ಹಿರಿಯ ಪ್ರಾಥಮಿಕ ನಾರಾಯಣಪುರ ಶಾಲೆಯ 7ನೇ ತರಗತಿಯ ಮಕ್ಕಳಿಗೆ ಪಠ್ಯಪುಸ್ತಕದ ಬಿಲ್ಲಹಬ್ಬ ನಾಟಕ ಪ್ರದರ್ಶನ ಸಂದರ್ಭದಲ್ಲಿ ಮಾತನಾಡುತ್ತಿದ್ದರು. ಪಠ್ಯದಲ್ಲಿನ ನಾಟಕವನ್ನು ಸ್ಪರ್ಧೆಯಾಗಿ ನಿಗದಿಮಾಡಿ ನಾಲ್ಕು ತಂಡಗಳಿಗೆ ಯೋಜನಾಕಾರ್ಯ (ಪ್ರಾಜೆಕ್ಟ್)ನೀಡಲಾಗಿದ್ದು ತೀರ್ಪುಗಾರರಾಗಿ ಹನುಮಂತರಾಜು, ಪರಮೇಶಯ್ಯ ನಿರ್ವಹಿಸಿದರು. ಕಲಿಕಾ ಹಬ್ಬ ದ ವಿವಿಧ ಚಟುವಟಿಕೆಯ ಫಲಿತಾಂಶ ಇಲ್ಲಿ ವ್ಯಕ್ತವಾಯಿತು. ಕುಮಾರಿ ಗಾನವಿಯ ಡಾ ಬಿ ಆರ್ ಅಂಬೇಡ್ಕರ್ ತಂಡ ಪ್ರಥಮ ಸ್ಥಾನ, ರಘು ಆಚಾರರ ಕುವೆಂಪು ತಂಡ ದ್ವಿತೀಯ ಸ್ಥಾನ ಪಡೆಯಿತು ಲಿಖಿತ್, ಪೃಥ್ವಿಕ,ಮದನಕುಮಾರ, ಲಾವಣ್ಯ ನವ್ಯ,ವಿದ್ಯಾಶ್ರೀ,ಸಾಗರ ಉತ್ತಮ ಪ್ರದರ್ಶನ ನೀಡಿದರು.

### ಧ್ರುವ ಟ್ರಸ್ಟ್‌ನಿಂದ ಕಲಿಕಾ ಸಾಮಗ್ರಿ ವಿತರಣೆ



**ಉದಯಕಾಲ ನ್ಯೂಸ್**

**ಮುಳಬಾಗಿಲು:** ಧ್ರುವ ಚಾರಿಟಬಲ್ ಟ್ರಸ್ಟ್ ವತಿಯಿಂದ ತಾಲ್ಲೂಕಿನ ಕಾಶಿಪುರ ಸರಸ್ವತಿ ಪ್ರೌಢಶಾಲೆ, ಊರುಕುಂಟೆ ಮಿಟ್ಟೂರು ಕೋದಂಡರಾಮಸ್ವಾಮಿ ಪ್ರೌಢಶಾಲೆ ಹಾಗೂ ಅಂಗೊಂಡಹಳ್ಳಿ ಸರ್ಕಾರಿ ಪ್ರೌಢಶಾಲೆಗಳ ನೂರಾರು ವಿದ್ಯಾರ್ಥಿಗಳಿಗೆ ಉಚಿತವಾಗಿ ಪರೀಕ್ಷಾ ಬೈಂಡ್ ಹಾಗೂ ಪೆನ್ನು, ಪುಸ್ತಕಗಳನ್ನು ವಿತರಿಸಲಾಯಿತು.

ಟ್ರಸ್ಟ್ ಅಧ್ಯಕ್ಷ ನಾಗರಾಜ್ ಮಾತನಾಡಿ, ಉತ್ತಮವಾಗಿ ಓದಿ ಉಜ್ವಲವಾದ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಉಪಾಧ್ಯಕ್ಷ ಹುಸೇನ್ ಮಾತನಾಡಿ, ಮುಂದೆ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡಿ ಉನ್ನತ ಹಂತದ ಶಿಕ್ಷಣದವರೆಗೂ ಸೌಲಭ್ಯಗಳನ್ನು ನೀಡಲಾಗುವುದು ಎಂದು ಹೇಳಿದರು. ಟ್ರಸ್ಟ್ ಅಧ್ಯಕ್ಷ ನಾಗರಾಜ್, ಉಪಾಧ್ಯಕ್ಷ ಹುಸೇನ್, ಕಾರ್ಯದರ್ಶಿ ಶಿವಶಂಕರ ರೆಡ್ಡಿ, ಖಜಾಂಚಿ ರಾಜೇಶ್, ಊರುಕುಂಟೆ ಮಿಟ್ಟೂರು ಗ್ರಾಮ ಪಂಚಾಯತಿ ಸದಸ್ಯೆ ಜಯಮ್ಮ, ಸದಸ್ಯರಾದ ಭಾಸ್ಕರ್, ವೆಂಕಟೇಶ್, ಸುಹೇಲ್, ಭಾಗ್ಯಲಕ್ಷ್ಮೀ ಮತ್ತು ಮೂರೂ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಸಿಬ್ಬಂದಿ ಇದ್ದರು.

### ಯುವ ಜೆಡಿಎಸ್ ನೂತನ ಅಧ್ಯಕ್ಷರಾಗಿ ಹೊಸಳ್ಳಿ ಟಿ.ರವಿ ನೇಮಕ

**ಉದಯಕಾಲ ನ್ಯೂಸ್**

**ದೇವನಹಳ್ಳಿ:** ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಯುವ ಜನತಾ ದಳ ಘಟಕದ ಅಧ್ಯಕ್ಷರಾಗಿ ಹೊಸಳ್ಳಿ ಟಿ.ರವಿ ಅವರನ್ನು ತಾಲೂಕು ಜೆಡಿಎಸ್ ಅಧ್ಯಕ್ಷ ಆರ್.ಮುನೇಗೌಡ ನೇಮಕಾತಿ ಪತ್ರ ನೀಡಿ ಪಕ್ಷದ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಪಕ್ಷ ಸಂಘಟಿಸಬೇಕೆಂದು ಆದೇಶಿಸಿದ್ದಾರೆ.



ಹೊಸಳ್ಳಿ ಟಿ.ರವಿ ಮಾತನಾಡಿ, ಪಕ್ಷದ ತತ್ವ ಸಿದ್ಧಾಂತಗಳಡಿಯಲ್ಲಿ ಕ್ಷೇತ್ರದಲ್ಲಿ ಪಕ್ಷವನ್ನು ಹಾಗೂ ಯುವ ಜನತಾ ದಳ ಘಟಕವನ್ನು ಪರಿಣಾಮಕಾರಿಯಾಗಿ ಸಂಘಟಿಸುವ ಮೂಲಕ ಪಕ್ಷವನ್ನು ಬೂತ್ ಮಟ್ಟದಲ್ಲಿ ಗಟ್ಟಿಗೊಳಿಸಲಾಗುತ್ತದೆ. ಪ್ರತಿ ಹಳ್ಳಿಯಲ್ಲಿನ ಯುವಕರನ್ನು ಸಂಘಟಿಸಿ, ಜೆಡಿಎಸ್ ಬಲವರ್ಧನೆಗೆ ಶ್ರಮಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಜೆಡಿಎಸ್ ಪಕ್ಷವನ್ನು ಎಲ್ಲಾ ಕ್ಷೇತ್ರದಲ್ಲೂ ಚುನಾಯಿಸಿ, ಕ್ಷೇತ್ರದಲ್ಲಿ ಮತ್ತೊಮ್ಮೆ ಶಾಸಕರನ್ನು ಗೆಲ್ಲಿಸಿಕೊಳ್ಳುವುದರ ಜತೆಗೆ ರಾಜ್ಯದಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಕೈ ಬಲಗೊಳಿಸಲಾಗುತ್ತದೆ ಎಂದು ಹೇಳಿದರು.

# ಕುಮಾರಸ್ವಾಮಿ ಗೆಲ್ಲಿಸಿ, ಪಂಚರತ್ನ ಯೋಜನೆಜಾರಿಗೊಳಿಸಿ

## ಜೆಡಿಎಸ್ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಎಲ್.ಎನ್.ನಾರಾಯಣಸ್ವಾಮಿ ಮನವಿ

**ಉದಯಕಾಲ ನ್ಯೂಸ್**

**ದೇವನಹಳ್ಳಿ:** ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕುಮಾರಣ್ಣ ಪಂಚರತ್ನ ಯೋಜನೆಯನ್ನು ಜಾರಿಗೆ ತರುವ ಆಶಯವನ್ನು ಹೊಂದಿದ್ದಾರೆ, ಅವರ ಆಶಯ ನಿಜವಾಗಲು ನಿಮ್ಮೆಲ್ಲರ ಸಹಕಾರ ಬಹುಮುಖ್ಯವಾಗಿರುತ್ತದೆ ಎಂದು ಶಾಸಕ ಎಲ್.ಎನ್.ನಾರಾಯಣಸ್ವಾಮಿ ತಿಳಿಸಿದರು.

ದೇವನಹಳ್ಳಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ವತಿಯಿಂದ ಹಮ್ಮಿಕೊಂಡಿದ್ದ ಜನತಾದಳ ಕಾರ್ಯಕರ್ತರ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಕ್ಷೇತ್ರದ ಜನತೆಯ ನಿರಂತರ ಬೆಳವಣಿಗೆಗೆ ಅವಶ್ಯಕವಾದ ಕಾರ್ಯತಂತ್ರಗಳನ್ನು ರೂಪಿಸಿದ್ದಕ್ಕೆ ದೇವನಹಳ್ಳಿಯ ಪ್ರತಿಯೊಂದು ಗ್ರಾಮದ ಹಿರಿಯರು, ಯುವಕರು, ಮಹಿಳೆಯರು, ಮಕ್ಕಳು ನಮ್ಮ ಎಂಎಲ್ಎ ಎಂದು ನನ್ನ ಹೆಸರು ಹೇಳುತ್ತಿರುವುದೇ ನನ್ನ ಆಡಳಿತಾವಧಿಯಲ್ಲಿನ ಜನಾಭಿವೃದ್ಧಿ ಕಾರ್ಯಗಳಾಗಿವೆ. ನಮ್ಮ ಪಕ್ಷ ಜಾತ್ಯತೀತವಾದದು, ಯಾವುದೇ ಜನಾಂಗವನ್ನು ಕಡೆಗಣಿಸದೇ ಸಮಾಜದ ಪ್ರತಿಯೊಂದು



ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸುವುದೇ ನಮ್ಮ ಪಕ್ಷದ ಗುರಿಯಾಗಿದೆ ಎಂದು ಹೇಳಿದರು.

ಕೋವಿಡ್ ಲಾಕ್‌ಡೌನ್ ಎಂದು ತೆರಿಗೆಗಳ ಮೂಲಕ ರಾಜ್ಯದ ಜನರನ್ನು ವಂಚಿಸಿ ಆರ್ಥಿಕ ಮತ್ತು ಮಾನಸಿಕವಾಗಿ ಕುಗ್ಗಿಸುವ ಕೆಲಸಗಳನ್ನು ಸರ್ಕಾರ ಮಾಡಿದೆ. ಬಿಜೆಪಿ ಸರ್ಕಾರ ಜನರಿಗೆ ಸುಳ್ಳು ಭರವಸೆಗಳನ್ನು ನೀಡುತ್ತಾ ಕಾಲಕಾಲಕ್ಕೆ ಬಣ್ಣ ಬದಲಾಯಿಸುವ ಸರಕಾರವಾಗಿದೆ ಎಂದು ಲೇವಡಿ ಮಾಡಿದರು.

ಜೆಡಿಎಸ್ ಪಕ್ಷ ಬೆಂಬಲಿಸಲು ಮನವಿ: ದೇವನಹಳ್ಳಿಯನ್ನು ಜಿಲ್ಲಾಕೇಂದ್ರವನ್ನು ಘೋಷಣೆ ಮಾಡುವುದಾಗಿ ಸಚಿವರು ಹೇಳಿ ತಿಂಗಳುಗಳೇ ಕಳೆದರೂ, ಈ ರೀತಿ ಅದೆಷ್ಟೋ ಸುಳ್ಳಿನ ಕೋಟೆ ಕಟ್ಟಿ ಜನರನ್ನು ಯಾಮಾರಿಸುತ್ತಿದ್ದಾರೆ. ಆದರಿಂದ ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಪಂಚರತ್ನ ಯೋಜನೆಯ ಮೂಲ ಉದ್ದೇಶ ಪರಿಪೂರ್ಣ ಮಾಡಲು ರಾಜ್ಯದ ಜನತೆ ಜೆಡಿಎಸ್ನ ಕುಮಾರಣ್ಣ ನೇತೃತ್ವದ ಸರಕಾರ ಬರಲು ಪಕ್ಷವನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

> ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದ್ದಲ್ಲಿ ಇಬ್ಬರು ಜವಾಬ್ದಾರಿಯುತ ಅಧಿಕಾರಿ ಹೆಣ್ಣುಮಕ್ಕಳನ್ನು ಸರಿಯಾಗಿ ಈ ಸರ್ಕಾರಕ್ಕೆ ನಿಭಾಯಿಸಲಿಕ್ಕೆ ಆಗಲಿಲ್ಲ, ಇನ್ನೂ ರಾಜ್ಯದ ಪರಿಸ್ಥಿತಿ ಏನು?
>
> **- ಬಿ.ಮುನೇಗೌಡ ,**
> **ಜೆಡಿಎಸ್ ಜಿಲ್ಲಾಧ್ಯಕ್ಷ, ಬೆಂ.ಗ್ರಾ.ಜಿಲ್ಲೆ**

ಅಭ್ಯರ್ಥಿ ಕುರಿತು ಗೊಂದಲ ಬೇಡ: ದೇವನಹಳ್ಳಿ ಕ್ಷೇತ್ರದ ಜನತೆಯಲ್ಲಿ ಅಭ್ಯರ್ಥಿಯ ಕುರಿತು ಯಾವುದೇ ರೀತಿಯ ಗೊಂದಲ ಬೇಡ, ಇತ್ತೀಚಿನ ವಿದ್ಯಮಾನಗಳಲ್ಲಿ ಕೆಲವರಿಂದ ಅಭ್ಯರ್ಥಿ ವಿಚಾರವಾಗಿ ಗೊಂದಲ ಸೃಷ್ಟಿಯಾಗುತ್ತಿದೆ. ಇದಕ್ಕೆ ಯಾರೂ ಸಹ ಕಿವಿಕೊಡಬೇಡಿ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರದ ಜನತೆ ಹಾಗೂ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ನನ್ನೊಂದಿಗೆ ಇದ್ದೇ ಇರುತ್ತಾರೆ ಎಂಬ ವಿಶ್ವಾಸ ಇದೆ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಪಕ್ಷಗಳನ್ನು ತೊರೆದು ಹಲವಾರು ಜನರು ಜೆಡಿಎಸ್ ಸೇರಿದರು.

> ಪಕ್ಷದ ಸರ್ಕಾರಾವಧಿಯಲ್ಲಿ ಸ್ವಸಹಾಯ ಸಂಘಗಳ ಹೆಣ್ಣು ಮಕ್ಕಳ ಸಾಲಮನ್ನಾ ಮಾಡಿದ ಹೆಮ್ಮೆ ನಮ್ಮದು. ಇತರ ಪಕ್ಷಗಳು ಯಾಕೆ ಮಾಡಲಿಲ್ಲ? ಅವರಿಗೆ ಬೇಕಾಗಿರುವುದು ಜನರ ಅಭಿವೃದ್ಧಿಯಲ್ಲ ,ಕೇವಲ ಹಣ ಮಾತ್ರ. ಆದ್ದರಿಂದ ನಮ್ಮ ಕ್ಷೇತ್ರದಲ್ಲಿ ಜನಸೇವೆ ಮಾಡಲು ಪಕ್ಷದ ನೀವೆಲ್ಲಾ ಬೆಂಬಲಿಸಿ ಶಕ್ತಿ ತುಂಬುವ ಕಾರ್ಯ ಮಾಡಬೇಕಿದೆ.
>
> **- ಆರ್.ಮುನೇಗೌಡ,**
> **ಜೆಡಿಎಸ್ ತಾಲೂಕು ಅಧ್ಯಕ್ಷ, ದೇವನಹಳ್ಳಿ**

ಈ ವೇಳೆ ದೇವನಹಳ್ಳಿ ಪುರಸಭಾ ಅಧ್ಯಕ್ಷೆ ಗೋಪಮ್ಮ, ವಿಜಯಪುರ ಪುರಸಭೆಯ ಅಧ್ಯಕ್ಷೆ ರಾಜೇಶ್ವರಿ ಭಾಸ್ಕರ್, ಉಪಾಧ್ಯಕ್ಷ ಕೇಶವಪ್ಪ, ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಜಿ.ಎ.ರವೀಂದ್ರ, ಕಾಮೇನಹಳ್ಳಿ ರಮೇಶ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಸೊಣಪ್ಪ, ಟಿಎಪಿಎಸ್ ಅಧ್ಯಕ್ಷ ದೇವರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ವಿ.ಮಂಜುನಾಥ್, ಜೆಡಿಎಸ್ ಯುವ ಮುಖಂಡ ಕೋಡಗುರ್ಕಿ ಮಹೇಶ್, ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀನಾಥ್ ಇದ್ದರು.

### ಯುವ ಬರಹಗಾರ್ತಿಯರಿಗೆ ರಾಜ್ಯಮಟ್ಟದ ಕನ್ನಡ ಕಾವ್ಯ-ಸಂಸ್ಕೃತಿ ಶಿಬಿರ



**ಉದಯಕಾಲ ನ್ಯೂಸ್**

**ಚನ್ನಪಟ್ಟಣ:** ವಿಶ್ವಮಾನವತ್ವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಅವರ ಯುಕ್ತಿಯಂತೆ ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆಯಾಗಬೇಕೆ ಹೊರತು, ಅದನ್ನು ತುಂಬುವ ಚೀಲವಾಗಬಾರದು ಎಂದು ಪ್ರಗತಿಪರ ಚಿಂತಕಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಇಂದಿರಾ ಬಿ.ಕೃಷ್ಣಪ್ಪ ಅವರು ವಿದ್ಯಾರ್ಥಿ ವೃಂದಕ್ಕೆ ಕರೆ ನೀಡಿದರು.

ತಾಲ್ಲೂಕಿನ ಕೆಂಗಲ್ ಕುವೆಂಪು ಕಾಲೇಜಿನಲ್ಲಿ ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಎನ್ ಎಸ್ ಎಸ್ ಯೋಜನಾ ಕೋಶ, ಯುವ ಸಬಲೀಕರಣ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರ ಸಂಯುಕ್ತ ಆಶ್ರಯದಲ್ಲಿ ಯುವ ಬರಹಗಾರ್ತಿಯರು ಹಾಗೂ ಕಾಲೇಜು ವಿದ್ಯಾರ್ಥಿನಿಯರಿಗಾಗಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಮೂರು ದಿನಗಳ ಕನ್ನಡ ಕಾವ್ಯ-ಸಂಸ್ಕೃತಿ, ಎನ್ ಎಸ್ ಎಸ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಜೀವನ ಕೌಶಲ್ಯ, ವ್ಯಕ್ತಿತ್ವ ವಿಕಸನ, ನಾಯಕತ್ವ ಗುಣ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಳಕಳಿಯನ್ನು ವಿದ್ಯಾರ್ಥಿ ದಿಸೆಯಿಂದಲೇ ರೂಢಿಸಿಕೊಳ್ಳಲು ಎನ್ ಎಸ್ ಎಸ್ ಸಹಭಾಗಿತ್ವದೊಂದಿಗೆ ಗಾಂಧಿ ಸ್ಮಾರಕ ನಿಧಿಯು ಕೆಲಸ ಮಾಡುತ್ತಿದ್ದು, ಇದನ್ನು ವಿದ್ಯಾರ್ಥಿಗಳು ಸದುಪಯೋಗ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಾಜ ಚಿಕಿತ್ಸರೂ, ದಾರ್ಶನಿಕರೂ ಆದ ಬುದ್ಧ, ಬಸವ, ಗಾಂಧಿ ಹೆಸರಿನ ಸಾಂಸ್ಕೃತಿಕ ಟ್ರಸ್ಟ್ ಗ್ರಾಮೀಣ ಸೊಗಡಿನ ಸಾಹಿತಿ, ದೇಶಿ ಪ್ರತಿಭೆ ಡಾ.ರಾಮಲಿಂಗೇಶ್ವರ ಅವರ ನೇತೃತ್ವದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯವನ್ನು ವೃದ್ಧಿಸುವ ಕಾಯಕವನ್ನು ನಿರಂತರವಾಗಿ ಮಾಡುತ್ತಿರುವುದು ಪ್ರಶಂಸನೀಯ ವಿಚಾರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬುದ್ಧ, ಬಸವ, ಗಾಂಧಿ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ, ಗ್ರಾಮೀಣ ಸೊಗಡಿನ ಸಾಹಿತಿ ಡಾ.ರಾಮಲಿಂಗೇಶ್ವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಕನ್ನಡ ಉಪನ್ಯಾಸಕಿ ಪ್ರೊ.ಸಿ.ಬಿ.ಶೈಲಜಾ ಶಿವಾನಂದ ಹಾಗೂ ಸಾಮಾಜಿಕ ಕಾರ್ಯಕರ್ತ, ಪತ್ರಕರ್ತ ಹೇಮಂತ್ ಗೌಡ ಅವರ ಕನ್ನಡ ಸೇವೆ ಹಾಗೂ ಸಾಮಾಜಿಕ ಸೇವೆಯನ್ನು ಗುರುತಿಸಿ 2022ನೇ ಸಾಲಿನ ಕನ್ನಡ ಪ್ರೇಮಿ ಯು.ಸಿ.ಚಿಕ್ಕಣ್ಣ ಪ್ರಶಸ್ತಿ ಯನ್ನು ಪ್ರದಾನ ಮಾಡಲಾಯಿತು.

ಬೆಂಗಳೂರು ಹಾಗೂ ರಾಜ್ಯದ ಹಲವಾರು ಕಡೆಗಳಿಂದ ಬಂದು ಶಿಬಿರದಲ್ಲಿ ಭಾಗವಹಿಸಿದ್ದ ನೂರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಹಾಗೂ ಯುವ ಬರಹಗಾರ್ತಿಯರಿಗೆ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಗಣ್ಯರು ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು.

### ಗ್ರಾಮೀಣ ಭಾಗದಲ್ಲಿ ಅಕ್ರಮ ಮದ್ಯದ ಘಮಲು

**ಉದಯಕಾಲ ವಿಶೇಷ**

**ಚೇಳೂರು:** ತಾಲೂಕಿನ ಹಲವು ಗ್ರಾಮ ಪಂಚಾಯತಿ ಗಳಲ್ಲಿ ಅಕ್ರಮ ಮದ್ಯದ ಮಾರಾಟ ಅವ್ಯಾಹತವಾಗಿ ನಡೆಯುತ್ತಿದೆ. ಗ್ರಾಮೀಣ ಭಾಗದ ಕಿರಾಣಿ ಅಂಗಡಿಗಳು,ಪೆಟ್ಟಿಗೆ ಅಂಗಡಿ ಮತ್ತು ಸಣ್ಣ ಹೋಟೆಲ್‌ಗಳಲ್ಲಿ ದಿನದ 24 ಘಂಟೆಗಳಲ್ಲೂ ಮದ್ಯ ಲಭ್ಯವಿದ್ದು,ಗ್ರಾಮೀಣ ಪ್ರದೇಶದ ಜನರು, ವಿದ್ಯಾರ್ಥಿಗಳು ಮತ್ತು ಅಪ್ರಾಪ್ತರು ದಿನವಿಡೀ ಮದ್ಯದ ಅಮಲಿನಲ್ಲಿ ತೇಲುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮದ್ಯ ಮಾರಾಟದಿಂದ ರಾಜ್ಯದ ಬೊಕ್ಕಸಕ್ಕೆ ಅತೀವ ರಾಜಸ್ವ ಬರುವುದಂತು ನಿಜ.ಆದರೆ,ಮದ್ಯ ವ್ಯಸನದಿಂದ ಉಂಟಾಗುವ ಅನಾರೋಗ್ಯ, ವಿದ್ಯಾಭ್ಯಾಸ ಕುಂಠಿತ, ಸಾಂಸಾರಿಕ ಕಲಹ, ಕೊಲೆ,ಸುಲಿಗೆ ಮತ್ತು ಸಾಂಸಾರಿಕ ವ್ಯಾಜ್ಯಗಳಿಗೆ ಪರಿಹಾರ ನೀಡುವವವರು ಯಾರು? ಅಕ್ರಮ ಮದ್ಯ ಮಾರಾಟದ ಅಕ್ರಮವನ್ನು ನಿಗ್ರಹಿಸುವವರು ಯಾರು ಇಲ್ಲವೇ ಎಂದು ಹತಾಶೆ ವ್ಯಕ್ತಪಡಿಸಿದ್ದಾರೆ.

(This is an Advertisement for information purposes only and not for publication or distribution or release directly or indirectly outside India and is not an offer document announcement)

## PACIFIC INDUSTRIES LIMITED

**Corporate Identification Number:** L14101KA1989PLC062041

Pacific Industries Limited ("Company" or "Issuer was incorporated as a public limited company under the Companies Act, 1956, at Jaipur, Rajasthan, as Pacific Granites Limited. Our Company was granted a certificate of incorporation and certificate of commencement of business dated July 13, 1989 and August 28, 1989, respectively, by the Registrar of Companies Jaipur, Rajasthan. Thereafter, the name of our Company was changed to Pacific Industries Limited and a fresh certificate of incorporation, consequent upon change of name, was issued by the Registrar of Companies, Bangalore on November 25, 1994. The registered office of our Company was shifted from the state of Rajasthan to the state of Karnataka pursuant to the order passed by the Hon'ble Company Law Board, New Delhi Bench on November 30, 2011.

**Registered Office:** Survey No. 13, National Highway 48, Kempalinganahalli Village, Nelamangala Taluk, Bangalore (R) 562123 Karnataka
**Corporate Office:** Village Sapetia, Brahmano Ka Guda, Bedla, Udaipur 313004, Rajasthan | **Tel:** +91-294-2440196/2440388/2440933/2440934
**Contact Person:** Mr. Sachin Shah, Company Secretary and Compliance Officer
**E-mail:** pilnorth@pacificgranites.com | pacificind@rediffmail.com | pilnorth@pacificgranites.com | pacificinvestor@rediffmail.com
**Website:** www.pacificindustriesltd.com

**OUR PROMOTERS: JAGDISH PRASAD AGARWAL, GEETA DEVI AGARWAL AND KAPIL AGARWAL**

**ISSUE OF UPTO 34,46,325 EQUITY SHARES OF FACE VALUE OF ₹10 EACH ("RIGHTS EQUITY SHARES") OF OUR COMPANY FOR CASH AT A PRICE OF ₹139 PER EQUITY SHARE (INCLUDING A SHARE PREMIUM OF ₹129 PER EQUITY SHARE) (THE "ISSUE PRICE"), AGGREGATING UPTO ₹4790.39 LAKHS ON A RIGHTS BASIS TO THE EXISTING ELIGIBLE EQUITY SHAREHOLDERS OF OUR COMPANY IN THE RATIO OF 1 (ONE) RIGHTS EQUITY SHARE(S) FOR EVERY 1 (ONE) FULLY PAID-UP EQUITY SHARE(S) HELD BY SUCH EXISTING ELIGIBLE EQUITY SHAREHOLDERS ON THE RECORD DATE, THAT IS ON WEDNESDAY, JANUARY 11, 2023 (THE "ISSUE").**

**BASIS OF ALLOTMENT**

The Board of Directors of our Company would like to thank all its shareholders and investors for their response to the Issue, which opened for subscription on January 19, 2023 and closed on February 02, 2023 and the last date for On Market Renunciation of Rights Entitlements was January 30, 2023.

Considering the fact that promoter and promoter group subscription was lower than that of their individual rights entitlement; which was not in consonance with the disclosure provided in the Letter of Offer, the Company had given an option to the public shareholders to withdraw their subscription in the Right Issue. The withdrawal window was opened for the subscribers commencing from Monday, February 13, 2023 and closed on February 14, 2023. The Basis of Allotment process was undertaken post completion of the above stated withdrawal process given to subscribers.

Out of the total 1,341 Applications for 48,92,957 Rights Equity Shares, 200 Applications for 1,28,029 Rights Equity Shares were rejected due to technical rejections as disclosed in the Letter of Offer. The total number of valid Applications received were 1,141 for 47,64,928 Rights Equity Shares, which was 141.98% of the Issue size. In accordance with the Letter of Offer, the Basis of Allotment was finalized on February 16, 2023, by the Company in consultation with BSE Limited ("BSE"), the Designated Stock Exchange, the Lead Manager to the Issue and the Registrar tothe Issue. The Board of Director of the Company has at its meeting held on February 21, 2023, approved the allotment of 34,46,325 Rights Equity Shares to the successful Applicants. All valid Applications after technical rejections have been considered for allotment. In the Issue, NIL Rights Equity Shares have been keptin abeyance.

**1. The breakup of valid applications received through ASBA (after technical rejections) is given below:**

| Applicants | No. of valid CAFs (including ASBA applications) received | No. of Equity Shares accepted and allotted against Entitlement (A) | No. of Equity Shares accepted and allotted against Additional applied (B) | Total Equity Shares accepted and allotted (A+B) |
|---|---|---|---|---|
| Non Renouncees | 1080 | 1968735 | 1466749 | 3435484 |
| Renouncees | 65 | 10841 | 0 | 10841 |
| **Total** | **1145** | **1979576** | **1466749** | **3446325** |

**2. Information regarding total Applications received:**

| Category | Applications Received | | Rights Equity Shares Applied for | | | Rights Equity Shares Allotted | | |
|---|---|---|---|---|---|---|---|---|
| | Number | % | Number | Value (₹) | % | Number | Value (₹) | % |
| Eligible Equity Shareholders | 1274 | 95.00% | 4844782 | 673424698.00 | 99.02% | 3435484 | 477532276.00 | 99.69% |
| Renouncees | 67 | 5.00% | 48175 | 6696325.00 | 0.98% | 10841 | 1506899.00 | 0.31% |
| **Total** | **1341** | **100.00%** | **4892957** | **680121023.00** | **100.00%** | **3446325** | **479039175.00** | **100.00%** |

**Includes far partially rejected cases.*

**Information for Allotment/refund/rejected cases:** The dispatch of Allotment Advice cum Refund intimation to the Allottees, as applicable, has been completed on February22, 2023. The instructions for unblocking of funds incase of ASBA Applications were issued ta SCSAs on February 16, 2023, The Listing applications were filed with the BSE Limited ("BSE ") on February 21, 2023, The Company received the listing approvals from the BSE on February 21, 2023, The credit ofRights Equity Shares to the respective demat accounts of the allottees in respect of Allotment in dematerialized form has been completed on February 22, 2023. For furtherdetails, see "Terms of the Issue —Allotment Advice' unblocking of ASBA Accounts" on page 248 of the Letter of Offer. The trading in fully paid-up Equity Shares issued in the Rights Issue shall commence on BSE upon receipt of trading permission. The trading is expected to commence on or about February 27, 2023. Further, in accordance with SEBI circular bearing reference - SEBVHONCFODIL2ICIRP/ 2020/13 dated January 22, 2020, the request for extinguishment of Rights Entitlements has been sent to NSDL & CDSL on February 21, 2023.

**INVESTORS MAY PLEASE NOTE THAT THE RIGHTS EQUITY SHARES CAN BE TRADED ON THE STOCK EXCHANGES ONLY IN DEMATERIALISED FORM.**

**DISCLAIMER CLAUSE OF SEBI:** It is to be distinctly understood that the submission of the Letter of Offer to SEBI should not in any way deemed or construed that the Letter of Offer has been cleared or approved by SEBI. The investors are advised to refer to the Letter of Offer for the full text as provided in "Other Regulatory and Statutory Disclosures – Disclaimer Clause of SEBI" on page 207 of the Letter of Offer.

**DISCLAIMER CLAUSE OF BSE (THE DESIGNATED STOCK EXCHANGE):** It is to be distinctly understood that the permission given by BSE should not, in anyway, be deemed or construed that the Letter of Offer has been Cleared or approved by BSE; nor does it certify the correctness or completeness of any of the contents of the Letter of Offer. The Investors are advised to refer to the full text of the Disclaimer clause of BSE as provided in 'other Regulatory and Statutory Disclosures - Disclaimer Clause of BSE" on page 211 of the Letter of Offer.

Unless otherwise spaced, all capitalised terms used herein shall have the same meaning ascribed to such terms in the Letter.

**THE LEVEL OF SUBSCRIPTION SHOULD NOT BE TAKEN TO BE INDICATIVE OF EITHER THE MARKET PRICE OF THE EQUITY SHARES OR THE BUSINESS PROSPECTS OF THE COMPANY.**

| LEAD MANAGER TO THE ISSUE | REGISTRAR TO THE ISSUE | COMPANY SECRETARY AND COMPLIANCE OFFICER |
|---|---|---|
| SRUJAN ALPHA CAPITAL ADVISORS<br>**SRUJAN ALPHA CAPITAL ADVISORS LLP**<br>**Registered Office:** 112A, Arun Bazar, Swami Vivekananda Road, Malad West, Mumbai-400064 Maharashtra<br>**Correspondence Address:** 824 & 825, Corporate Avenue, Sonawala Rd, opposite Atlanta Centre, Sonawala Industry Estate, Goregaon, Mumbai-400064<br>**Tel:** +91–22– 4016 7322<br>**E-mail:** pil.rightsissue@srujanalpha.com<br>**Website:** www.srujanalpha.com<br>**Contact Person:** Mr. Jinesh Doshi<br>**LLPIN No.:** AAW-1680<br>**SEBI Registration No.:** INM000012829 | LINKIntime<br>**LINKINTIME INDIA PRIVATE LIMITED**<br>C 101, 1st Floor, 247 Park, L.B.S. Marg, Vikhroli (West), Mumbai-400083, Maharashtra, India<br>**Tel:** +91 22 49186200/ +91 8108114949<br>**Email:** pacific.rights@linkintime.co.in<br>**Website:** www.linkintime.co.in<br>**Investor grievance email:** pacific.rights@linkintime.co.in<br>**Contact Person:** Mr. Sumeet Deshpande<br>**SEBI Registration Number:** INR000004058 | **PACIFIC INDUSTRIES LIMITED**<br>**Mr. Sachin Shah,** Company Secretary and Compliance Officer<br>**Registered Office:** Survey No. 13, National Highway 48, Kempalinganahalli Village, Nelamangala Taluk, Bangalore (R) 562123 Karnataka.<br>**Corporate Office:** Village Sapetia, Brahmano Ka Guda, Bedla, Udaipur 313004, Rajasthan.<br>**Telephone:** +91-294-2440196/2440388/2440934 \| 0807723004/ 77255974<br>**E-mailid:** pilnorth@pacificgranites.com \| pacificind@rediffmail.com pilnorth@pacificgranites.com \| pacificinvestor@rediffmail.com<br>**Website:** www.pacificindustriesltd.com<br>**Corporate Identification Number:** L14101KA1989PLC062041 |

**For Pacific Industries Limited**
**On behalf of Board of Directors**
**Sd/-**
**Place:** Udaipur
**Date:** February 22, 2023
**Sachin Shah**
**Company Secretary and Compliance Officer**

*__PACIFIC INDUSTRIES LIMITED__ has filed a Letter of Offer with BSE, the designated stock exchange. The Letter of Offer is available on the website of SEBI at www.sebi.gov.in, and BSE at www.bseindia.com, the website of the Lead Manager to the Issue, i.e., Srujan Alpha Capital Advisors LLPat www.srujanalpha.com, website of the company at www.pacificindustriesltd.com and website of the Registrar at www.linkintime.co.in. Investors should note that investment in equity shares involves a degree of risk and for details relating to the same, please see the section entitled "Risk Factors" on page 24 of the Letter of Offer. The Rights Entitlements and the Rights Equity Shares have not been and will not be registered under U.S Securities Act and may not be offered, sold, resold or otherwise transferred within the United States, except in transaction not subject to, or exempt from the registration requirements ofthe US, Securities Act and applicable state securities laws. Accordingly, the Rights Entitlements and the Rights Equity Shares are only being offered and sold outside the United States in offshore transactions in compliance with Regulation 5 under the US. Securities Act and the applicable laws of the jurisdiction where those offers and sales occur. The RightE ntitlements and the Equity Shares may not be re-offered, re-sold, pledged or otherwisetransferred except in an offshore transection in accordance withRegulation $ under the U.S. Securities Act. The offering to which the Letter of offer relates is not, and under no circumstances is to be construed as, an offering of any Rights Equity Shares or the Rights Entitlement for sale in the United States or as a solicitation therein of an offer to buy any of the Rights Equity Shares or Rights Entitlement. There is no intention to register any portion of the Issue of any of the securities described herein in the United States or to conduct a public offering of securities in the United States. Accordingly, the Issue Documents and the Application Form should not be forwarded to or transmitted in or to the United States.*

Raka

# ಸಂಕಷ್ಟದಲ್ಲಿ ಸಾಲಸೌಲಭ್ಯ ಬದುಕಿಗೆ ಆಸರೆ: ಎನ್.ಎಚ್.ಶಿವಶಂಕರರೆಡ್ಡಿ

## ಡಿಸಿಸಿ ಬ್ಯಾಂಕ್, ನಬಾರ್ಡ್ ಸಹಯೋಗದಲ್ಲಿ ಮಹಿಳಾ ಸಂಘಗಳಿಗೆ ಸಾಲ ವಿತರಣೆ

**ಉದಯಕಾಲ ನ್ಯೂಸ್**

**ಗೌರಿಬಿದನೂರು:** ಸಮಾಜದಲ್ಲಿ ಕುಟುಂಬ ನಿರ್ವಹಣೆಗಾಗಿ ಸಂಕಷ್ಟ ಎದುರಿಸುತ್ತಿರುವ ಮಹಿಳೆಯರಿಗೆ ನೀಡುವ ಸಾಲದ ಸೌಲಭ್ಯವು ಅವರ ಬದುಕಿಗೆ ಪ್ರೋತ್ಸಾಹ ನೀಡುವ ಜತೆಗೆ ಆತ್ಮಸ್ಥೈರ್ಯ ಹೆಚ್ಚಿಸುತ್ತದೆ ಎಂದು ಶಾಸಕ ಎನ್.ಎಚ್.ಶಿವಶಂಕರರೆಡ್ಡಿ ತಿಳಿಸಿದರು.

ನಗರದಲ್ಲಿ ಬುಧವಾರ ಡಿಸಿಸಿ ಬ್ಯಾಂಕ್ ಹಾಗೂ ನಬಾರ್ಡ್ ಸಹಯೋಗದೊಂದಿಗೆ ಕಲ್ಲೂಡಿ ವಿಎಸ್ಎಸ್ಎನ್ ವತಿಯಿಂದ ಆಯೋಜಿಸಿದ್ದ ಮಹಿಳಾ ಸ್ವಸಹಾಯ ಸಂಘಗಳಿಗೆ ಸಾಲದ ಎ.ಟಿ.ಎಂ ಕಾರ್ಡ್ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ಥಳೀಯ ಮಹಿಳಾ ಸಂಘಗಳಿಗೆ ನೀಡುವ ಸಾಲವು ಯಾವುದೇ ಕಾರಣಕ್ಕೂ ಪೋಲಾಗದೆ ಸಮರ್ಪಕವಾಗಿ ಸದ್ಬಳಕೆಯಾಗುವ ಮೂಲಕ ಅವರ ಕುಟುಂಬಕ್ಕೆ ಆಸರೆಯಾಗಲಿದೆ. ಮಹಿಳೆಯರು ಮನೆಯಲ್ಲಿಯೇ ಸ್ವಾವಲಂಬಿಯಾಗಿ ಸಣ್ಣ ಪ್ರಮಾಣದ ಉದ್ದಿಮೆಯನ್ನು ಆರಂಭಿಸಿ ಡಿಸಿಸಿ ಬ್ಯಾಂಕ್ ನೀಡುವ ಸಾಲವನ್ನು ಅದರಲ್ಲಿ ತೊಡಗಿಸಿಕೊಳ್ಳುವ ಮೂಲಕ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿಭಿನ್ನವಾಗಿ ಬದುಕುವ ಕಲೆಯನ್ನು ಬೆಳೆಸಿಕೊಳ್ಳಬೇಕಾಗಿದೆ. ಬ್ಯಾಂಕಿನಿಂದ ಪಡೆದ ಸಾಲವನ್ನು ಹಂತಹಂತವಾಗಿ ಮರುಪಾವತಿ ಮಾಡುವ ಮೂಲಕ ವಿಶ್ವಾಸ ಮತ್ತು ನಂಬಿಕೆಯನ್ನು ಉಳಿಸಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಡಿಸಿಸಿ ಬ್ಯಾಂಕಿನ ನಿರ್ದೇಶಕರಾದ ಮರಳೂರು ಹನುಮಂತರೆಡ್ಡಿ ಮಾತನಾಡಿ, ದಶಕಗಳಿಂದಲೂ ಮಹಿಳೆಯರ ಸ್ವಾವಲಂಬಿ ಬದುಕಿಗೆ ಡಿಸಿಸಿ ಬ್ಯಾಂಕ್ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿದೆ. ಮಹಿಳೆಯರು ತಮ್ಮ ಅಮೂಲ್ಯವಾದ ಮತವನ್ನು ಹಣಕ್ಕೆ ಮಾರಾಟ ಮಾಡಿಕೊಳ್ಳದೆ ಚಿಂತಿಸಿ ಸಂವಿಧಾನದ ಆಶಯಗಳನ್ನು ಉಳಿಸುವ ಜತೆಗೆ ಭವಿಷ್ಯದಲ್ಲಿ ಅಭಿವೃದ್ಧಿಯ ಕನಸನ್ನು ಹೊತ್ತಿರುವ ನಾಯಕರಿಗೆ ಮತ ನೀಡಿ ಸ್ವಾಸ್ಥ್ಯ ಮತ್ತು ಸಾಮರಸ್ಯದ ಸಮಾಜವನ್ನು ನಿರ್ಮಾಣ ಮಾಡಲು ಸಹಕರಿಸಬೇಕಾಗಿದೆ.



ಇದರಿಂದಾಗಿ ಮುಂದಿನ ದಿನಗಳಲ್ಲಿ ಮತ್ತಷ್ಟು ಸಾಲದ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಲಿದೆ ಎಂದು ಹೇಳಿದರು. ಕೋಲಾರ ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ಆರ್ಥಿಕ ನೆರವಿನಿಂದ ಸ್ಥಳೀಯ ವ್ಯವಸಾಯ ಸೇವಾ ಸಂಘದ ವತಿಯಿಂದ 55 ಮಹಿಳಾ ಸಂಘಗಳಿಗೆ ಒಟ್ಟು ರೂ. 2.75 ಕೋಟಿ ಸಾಲ ವಿತರಣೆ ಮಾಡಲಾಗುತ್ತಿದೆ ಎಂದು ಬ್ಯಾಂಕ್ ನ ವ್ಯವಸ್ಥಾಪಕರಾದ ಮಹಮದ್ ಅಸ್ಲಾಂ ತಿಳಿಸಿದರು.

ಇದೇ ವೇಳೆ ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷರಾದ ನಾಗರಾಜ್, ಮೇಲ್ವಿಚಾರಕರಾದ ಚಂದ್ರಶೇಖರ್, ಸ್ಥಳೀಯ ವಿಎಸ್ಎಸ್ಎನ್‌ನ ಆಡಳಿತಾಧಿಕಾರಿ ಪಿ.ಆರ್.ಮಂಜುನಾಥ್, ಕಾರ್ಯದರ್ಶಿ ಎನ್. ರಂಗನಾಥ್, ನಗರಸಭೆ ಸದಸ್ಯರಾದ ಕೆ.ಎಂ. ಗಾಯತ್ರಿ ಬಸವರಾಜ್, ಗೋಪಾಲ್, ಮಾಜಿ ನಿರ್ದೇಶಕರಾದ ಕೆ.ಪಿ.ನರಸಿಂಹಮೂರ್ತಿ, ಬೈಪಾಸ್ ನಾಗರಾಜ್, ಕೆ.ವಿ.ವೆಂಕಟಾಚಲಯ್ಯ, ಜಿ.ಕೃಷ್ಣಪ್ಪ, ಅಶ್ವತ್ಥನಾರಾಯಣಪ್ಪಸೇರಿದಂತೆ ಇತರರು ಭಾಗವಹಿಸಿದ್ದರು.

## ಚುಟುಕು ಸುದ್ದಿ

### ಅದ್ದೂರಿ ರಾಮಲಿಂಗೇಶ್ವರ ಜಾತ್ರೆ, ಬಸವೇಶ್ವರ ಕೊಂಡೋತ್ಸವ



**ಉದಯಕಾಲ ನ್ಯೂಸ್**

**ಎಚ್‌ಡಿ ಕೋಟೆ:** ಪ್ರತಿ ವರ್ಷದಂತೆ ಈ ವರ್ಷವೂ ಹೆಚ್. ಮಟಕೆರೆ ರಾಮಲಿಂಗಶ್ವರ ಸನ್ನಿದಿಯಲ್ಲಿ ಜಾತ್ರೆ ಮತ್ತು ಬಸವೇಶ್ವರ ಕೊಂಡೋತ್ಸವ ನಡೆಯಿತು.

ಕಪಿಲಾ ಮತ್ತು ತಾರಕ ನದಿಗಳು ಒಂದೆಡೆ ಸೇರುವ ಸಂಗಮ ಎಂದೇ ಖ್ಯಾತಿ ಪಡೆದಿರುವ ರಾಮಲಿಂಗೇಶ್ವರ ದೇವಾಲಯದಲ್ಲಿ ಲಿಂಗವನ್ನು ವಿಶೇಶವಾಗಿ ವಿವಿಧ ಹೂ ಗಳಿಂದ ಅಲಂಕರಿಸಿ ಬೆಳಗಿನಿಂದಲ್ಲೆ ಸುತ್ತಮುತ್ತಲ ಗ್ರಾಮಗಳಿಂದ ಬಂದತಹ ಭಕ್ತಾಧಿಗಳಿಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು.

ಮಂಗಳವಾರ ನಡಯುವ ಬಸವೇಶ್ವರ ಕೊಂಡೋತ್ಸವ ವಿಶೇಶವಾಗಿತ್ತು ದೇವಸ್ಥಾನವನ್ನು ತಳಿರು ತೋರಣಗಳಿಂದ ಶೃಂಗಾರಗೊಳಿಸಿ ದೇವಾಲಯದ ಮುಂಭಾಗ ಕೊಂಡವನ್ನು ಹಾಕಿ ಕಪಿಲಾ ನದಿಯಿಂದ ದೇವರ ಮೂರ್ತಿಯನ್ನು ಸತ್ತಿಗೆ ಸೂರಿಪಾನಿ ವೀರಗಾಸೆ ಕುಣಿತದೊಂದಿಗೆ ಮೆರವಣಿಗೆ ದೇವಸ್ಥಾನ ಬಳಿ ಸಾಗಿ ಸುತ್ತ ಮುತ್ತಲ ಊರುಗಳಿಂದ ಬಂದಿದ್ದ ಭಕ್ತಾಧಿಗಳು ಬಾಯಿಬೀಗ ಹಾಕಿಸಿಕೊಂಡು ಕೊಂಡವನ್ನು ಹಾಯುವ ಮೂಲಕ ತಮ್ಮ ಹರಕೆಯನ್ನು ತೀರಿಸಿ ದೇವರ ಕೃಪೆಗೆ ಪಾತ್ರರಾದರು, ಜಾತ್ರೆಯಲ್ಲಿ ಎಲ್ಲ ಭಕ್ತಾಧಿಗಳಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಜಾತ್ರೆಯ ಅಂಗವಾಗಿ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿಯನ್ನು ಹಾಗೂ ಮನರಂಜನೆಗಾಗಿ ಕುರುಕ್ಷೇತ್ರ ಪೌರಾಣಿಕ ನಾಟಕವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯದಲ್ಲಿ ಗ್ರಾಮಸ್ಥರು, ಯುವಕರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

### ಸಾಮಾನ್ಯ ಸಬೆಯಲ್ಲಿ ಆದ ಪ್ರಾದಕ್ಕೆ ಕ್ಷಮೆ ಕೋರಿದ ಸದಸ್ಯ

**ಉದಯಕಾಲ ನ್ಯೂಸ್**

**ಚನ್ನರಾಯಪಟ್ಟಣ :** ಸೋಮವಾರದಂದು ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ ತಮ್ಮ ಅನುಚಿತ ವರ್ತನೆಯಿಂದ ಅಧಿಕಾರಿಗಳಿಗೆ ನೋವಾಗಿದ್ದರೇ, ಕ್ಷಮೆ ಕೋರುವುದಾಗಿ, ಮತ್ತು ಮುಂದಿನ ದಿನಗಳಲ್ಲಿ ಸಮಸ್ಯೆಗಳ ವಿರುದ್ಧ ಕಾನೂನು ಚೌಕಟ್ಟಿನಲ್ಲಿ ಪ್ರತಿಭಟನೆ ನಡೆಸುವುದಾಗಿ ನಾಮನಿರ್ದೇಶತ ಸದಸ್ಯ ನಂಜುಂಡಮ್ಮೆಮ್ ತಿಳಿಸಿದರು.



ಪಟ್ಟಣದ ಪತ್ರಕರ್ತರ ಭವನದಲ್ಲಿ ಬುಧವಾರದಂದು ಸುದ್ದಿಗೋಷ್ಠಿ ನಡೆಸಿದ ನಾಮಿನಿ ಸದಸ್ಯ ನಂಜುಂಡಮ್ಮೆಮ್ ನಾನು ಉದ್ದೇಶಪೂರ್ವಕವಾಗಿ ಯಾವ ಅಧಿಕಾರಿ, ಸದಸ್ಯರ ವಿರುದ್ಧ ಪ್ರತಿಭಟನೆ ನಡೆಸಿದ್ದಲ್ಲ, ಕಳೆದ ಮರ್‍ನಾಲ್ಕು ಸಭೆಗಳಿಂದಲೂ ತಮ್ಮ ಅಹವಾಲಿಗೆ ಸ್ಪಂದಿಸದ ಅಧಿಕಾರಿಗಳ ನಡೆಯಿಂದ ಬೇಸತ್ತು ಪ್ರತಿಭಟನೆಗೆ ಮುಂದಾಗಿದ್ದೆ ಎಂದರು.

ಕಳೆದ ಡಿಸೆಂಬರ್ ಮಾಹೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಶಾಸಕರು ಸದಸ್ಯರಿಗೆ ಪ್ರತ್ಯೇಕ ಕೊಠಡಿ ನೀಡುವಂತೆ ಸೂಚಿಸಿದ್ದರೂ, ಅಧಿಕಾರಿಗಳು ಮುಂದಾಗಿಲ್ಲ, ಇನ್ನೂ ಕೆ.ಆರ್.ಸರ್ಕಲ್‌ಗೆ ನಾಮಫಲಕ ಅಳವಡಿಸುವ ವಿಚಾರವನ್ನು ಎಸ್ಟಿಮೇಟ್, ಪ್ಲಾನಿಂಗ್ ಎಂದೇಳಿ ಅಧಿಕಾರಿಗಳು ಮುಂದೂಡುವ ಕೆಲಸ ಮಾಡುತ್ತಿರುವುದರ ವಿರುದ್ಧ, ಮತ್ತು ವಾರ್ಡ್ಗಳಲ್ಲಿ ಸೂಕ್ತ ಅಭಿವೃದ್ದಿಯಾಗದಿರುವುದರ ವಿರುದ್ಧ ಆಕ್ರೋಶಿತನಾಗಿ ಜನಪದ ಹಾಡಿನ ಮೂಲಕ ಪ್ರತಿಭಟನೆ ಮಾಡಿದ್ದಾಗಿ ತಿಳಿಸಿದರು.

ಇನ್ನೂ ತಮ್ಮ ಸದಸ್ಯತ್ವ ರದ್ದತಿಗೆ ಆಗ್ರಹಿಸಿ ಅಧಿಕಾರಿಗಳು ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಿರುವ ವಿಚಾರವಾಗಿ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ನಂಜುಂಡಮ್ಮೆಮ್ ಈ ಘಟನೆ ಕುರಿತಾಗಿ ತಾವು ಈಗಾಗಲೇ ಜಿಲ್ಲಾಮಂತ್ರಿಗಳ ಗಮನಕ್ಕೆ ತಂದಿದ್ದು, ತಾವು ಕೂಡ ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳಿಗೆ ಘಟನೆ ಕುರಿತಾಗಿ ಮನವಿ ಪತ್ರ ಅರ್ಪಿಸುವುದಾಗಿ ಹೇಳಿದರು.

# ಗುಂಡ್ಲುಪೇಟೆಯಲ್ಲಿ ಮೊಳಗಿದ ಕಾಂಗ್ರೆಸ್ ಪ್ರಜಾಧ್ವನಿ ಕಹಳೆ

## ಭ್ರಷ್ಟ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕರೆ

**ಉದಯಕಾಲ ನ್ಯೂಸ್**

**ಗುಂಡ್ಲುಪೇಟೆ:** ರಾಜ್ಯ ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ ನಡೆದಿರುವ ವ್ಯಾಪಕ ಭಷ್ಟಚಾರ ಅರಿತಿರುವ ರಾಜ್ಯದ ಮತದಾರರು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ದ ಮತ ಚಲಾಯಿಸಿ, ಕಾಂಗ್ರೆಸ್ ಬೆಂಬಲಿಸುವ ಮೂಲಕ ರಾಜ್ಯದಲ್ಲಿ ಸ್ಪಷ್ಟ ಬಹುಮತದೊಂದಿಗೆ ಕಾಂಗ್ರೆಸ್ ಸರ್ಕಾರ ರಚನೆ ಮಾಡಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಹಳೇ ಬಸ್ ನಿಲ್ದಾಣದ ನೆಹರು ಪಾರ್ಕ್ ಮುಂಭಾಗದಲ್ಲಿ ಆಯೋಜಿಸಿದ್ದ ಪ್ರಜಾಧ್ವನಿ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಸತತ 26 ವರ್ಷಗಳ ಕಾಲ ಕಾಂಗ್ರೆಸ್ ಶಾಸಕರು ಆರಿಸಿ ಬಂದಿದ್ದಾರೆ. ಅಲ್ಲದೆ ಮಾಜಿ ಸಚಿವ ದಿ. ಹೆಚ್.ಎಸ್. ಮಹದೇವ ಪ್ರಸಾದ್ ಸೇರಿದಂತೆ ಅವರ ಕುಟುಂಬದ ಸದಸ್ಯರಿಗೆ ಅಧಿಕಾರ ನೀಡಿರುವ ಕ್ಷೇತ್ರದ ಮತದಾರರು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಅವರ ಪುತ್ರ, ಕಾಂಗ್ರೆಸ್ ಅಭ್ಯರ್ಥಿ ಹೆಚ್.ಎಂ. ಗಣೇಶ್ ಪ್ರಸಾದ್ ಅವರನ್ನು ಗೆಲ್ಲಿಸಿ, ಮತ್ತೆ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರವನ್ನು ಕಾಂಗ್ರೆಸ್ ಭದ್ರ ಕೋಟೆಯನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

**ಬಿಜೆಪಿ ಸರ್ಕಾರ ಕಿತ್ತೊಗೆಯಿರಿ**

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಭ್ರಷ್ಟ ಬಿಜೆಪಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯಬೇಕಿದೆ. ಬಡವರ ಕಷ್ಟ ಲೆಕ್ಕಿಸದೆ ಸರ್ಕಾರ ಖಜಾನೆ ಲೂಟಿ ಮಾಡುತ್ತಿದೆ. ಲಂಚ ಮತ್ತು ಮಂಚಕ್ಕಾಗಿ ಮಂತ್ರಿಗಳು ಅಧಿಕಾರ ಕಳೆದುಕೊಂಡಿದ್ದಾರೆ. ಅಧಿಕಾರದಲ್ಲಿರುವ ಯಾವುದೇ ನೈತಿಕತೆ ಅವರಿಗಿಲ್ಲ, ಕೋವಿಡ್ ಸಮಯದಲ್ಲಿ ಚಾಮರಾಜನಗರದಲ್ಲಿ ಆಕ್ಸಿಜನ್ ಕೊರತೆಯಿಂದ 36 ಮಂದಿ ಅಮಾಯಕರನ್ನು ಕೊಂದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲಾ 36 ಕುಟುಂಬಗಳ ಸದಸ್ಯರಿಗೆ ಸರ್ಕಾರಿ ನೌಕರಿ ನೀಡುವುದಾಗಿ ಅಯೂರು ಭರವಸೆ ನೀಡುವ ಜೊತೆಗೆ ಇನ್ನು 50 ದಿನಗಳು ಕಳೆದರೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದರು.





**ಗಣೇಶ್ ಪ್ರಸಾದ್ ಗೆಲ್ಲಿಸಲು ಮನವಿ**

**ಭಾರತ ಜೋಡೋ ಯಾತ್ರೆ ಸಂದರ್ಭದಲ್ಲಿ ರಾಜ್ಯಕ್ಕೆ ಯಾತ್ರೆ ಆಗಮಿಸಿದಾಗ ಕ್ಷೇತ್ರದ ಜನ ಶಕ್ತಿ ನಮ್ಮ ಜೊತೆ ಹೆಜ್ಜೆ ಹಾಕಿದ ಎಲ್ಲರಿಗೂ ಅಭಿನಂದನೆಗಳು. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಹೆಚ್.ಎಂ. ಗಣೇಶ್ ಪ್ರಸಾದ್ ಸ್ಪರ್ಧಿಸಲಿದ್ದು, ಕ್ಷೇತ್ರದ ಮತದಾರರು, ಪಕ್ಷದ ಮುಖಂಡರು, ಕಾರ್ಯಕರ್ತರು ಇವರ ಗೆಲುವಿಗೆ ಸಹಕರಿಸಬೇಕು ಎಂದುರು. ಎಲ್ಲರ ಮನ ಗೆದ್ದಿರುವ ದಿ. ಮಹದೇವ ಪ್ರಸಾದ್ ಪುತ್ರರಾಗಿರುವ ಗಣೇಶ್ ಪ್ರಸಾದ್ ನಿಮ್ಮ ಸೇವೆಗಾಗಿ ಬಂದಿದ್ದಾರೆ. ಅವರನ್ನು ಮುಂಬರುವ ಚುನಾವಣೆಯಲ್ಲಿ ಅಧಿಕ ಬಹುಮತದಿಂದ ಗೆಲ್ಲಿಸುವ ಮೂಲಕ ಕ್ಷೇತ್ರದಲ್ಲಿ ಮತ್ತೆ ಕಾಂಗ್ರೆಸ್‌ನ್ನು ಅಧಿಕಾರಕ್ಕೆ ತರಬೇಕು ಎಂದು ಕರೆ ನೀಡಿದರು.**

**ಬಿಜೆಪಿ ಶೇ.40 ಕಮೀಷನ್ ಮಾಫಿಯಾ**

ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ ಭಷ್ಟಚಾರ ತುಂಬಿ ತುಳುಕುತ್ತಿದೆ. ಕೆಂಪಣ್ಣ ಆರೋಪ ಮಾಡಿದಂತೆ ಶೇ.40 ಕಮೀಷನ್ ಧಂದೆ ವಿಧಾನಸೌಧದ ಪ್ರತಿ ಗೋಡೆಯೂ ಹೇಳುತ್ತಿದೆ. ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಮಿತಿಮೀರಿದೆ, ಬಿಜೆಪಿ ಸರ್ಕಾರದಲ್ಲಿ ಅಧಿಕಾರಕ್ಕೆ ಬಂದರೆ ಎಲ್ಲಾ ಖಾತೆಗೂ 15 ಲಕ್ಷ, ವರ್ಷಕ್ಕೆ ಎರಡು ಕೋಟಿ ಉದ್ಯೋಗ ಎಂದು ಆಶ್ವಾಸನೆ ನೀಡಿದ್ದರು, ಯಾವುದೂ ಬರಲಿಲ್ಲ. ಆದರೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿ ಜಿಎಸ್‌ಟಿ ತಂದು ಬಡವರ ಜೀವನ ನಡೆಸುವುದೇ ಕಷ್ಟ ಮಾಡಿದ್ದಾರೆ ಎಂದರು.

ಕೊರೋನಾ ಸಂಕಷ್ಟ ಸಮಯದಲ್ಲೂ ಹಣ ಲೂಟಿ ಮಾಡಿದರು, ಬಿಜೆಪಿಯವರು ಬೊಗಳೆ ಬಿಟ್ಟು ಜನರಿಗೆ ಮಂಕು ಬೂದಿ ಎರಚಿದರು, ಇದು ಎಲ್ಲರಿಗೂ ಈಗ ಅರಿವಾಗಿದೆ ಇದಕ್ಕೆ ತಕ್ಕ ಪಾಠವನ್ನು ಮುಂದಿನ ಚುನಾವಣೆಯಲ್ಲಿ ಕಲಿಯಲಿದ್ದಾರೆ, ಇವರು ಮನೆಗೆ ಹೋಗುವುದು ಖಚಿತ ಎಂದರು.

ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ನಳಪಾಡ್, ಚಲನಚಿತ್ರ ನಟ ಸಾಧು ಕೋಕಿಲ , ರಾಜ್ಯ ಸಭಾ ಸದಸ್ಯ ಚಂದ್ರಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್, ಚಾಮೂಲ್ ನಿರ್ದೇಶಕ ಹೆಚ್.ಎನ್. ನಂಜುಂಡ ಪ್ರಸಾದ್, ಕಾಡ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಹೆಚ್.ಎಂ. ಗಣೇಶ್ ಪ್ರಸಾದ್, ಬ್ಲಾಕ್ ಅಧ್ಯಕ್ಷ ಬಿ.ಎಂ. ಮುನಿರಾಜು, ಕೆ.ಎಸ್. ಮಹೇಶ್, ಹೆಚ್.ಎನ್. ನಟೇಶ್, ಹೆಚ್.ಎನ್. ಬಸವರಾಜು, ಮಾಜಿ ಸಂಸದ ಎ. ಸಿದ್ದರಾಜು, ಜಿ.ಕೆ. ನಾಜೀಮುದ್ದಿನ್, ಹಂಗಳ ಗಂಗಪ್ಪ, ದೇಪಾಪುರ ಡಿ.ಎಸ್. ಸಿದ್ದಪ್ಪ . ತೆರಕಣಾಂಬಿ ಮಹಾದೇವಪ್ಪ, ಬಿ. ಕುಮಾರಸ್ವಾಮಿ, ಪಿ. ಲಿಂಗರಾಜು. ವೈ.ಎನ್. ರಾಜಶೇಖರ. ದೇಪಾಪುರ ಡಿ.ಎಸ್. ಸಿದ್ದಪ್ಪ ಇದ್ದರು.

# ಕತ್ತಲಲ್ಲಿ ಮುಳುಗಿದ ಪಾಳ್ಯ ನಾಡಕಚೇರಿ

**ಉದಯಕಾಲ ನ್ಯೂಸ್**

**ಹಾಸನ:** ತೀವ್ರ ಹಿಂದುಳಿದ ತಾಲ್ಲೂಕು ಎಂಬ ಹಣೆಪಟ್ಟಿ ಹೊಂದಿರುವ ಆಲೂರು ತಾಲ್ಲೂಕಿನ ಪಾಳ್ಯ ನಾಡಕಚೇರಿಯಲ್ಲಿ ಚೆಸ್ಕಾಂಗೆ ವಿದ್ಯುತ್ ಬಿಲ್ ಪಾವತಿಸದ ಹಿನ್ನೆಲೆಯಲ್ಲಿ ಪವರ್ ಕಟ್ ಮಾಡಿದ್ದು, ಇಂದು ನಾಡಕಚೇರಿ ಕತ್ತಲಲ್ಲಿ ಮುಳುಗಿತ್ತು.

ಕಳೆದ ನಾಲ್ಕೈದು ತಿಂಗಳಿನಿಂದ 6 ಸಾವಿರ ರು.ಗೂ ಹೆಚ್ಚು ವಿದ್ಯುತ್ ಬಿಲ್ಲನ್ನು ಪಾವತಿಸದ ಹಿನ್ನೆಲೆಯಲ್ಲಿ ಚೆಸ್ಕಾಂ ಸಿಬ್ಬಂದಿಗಳು ನೆನ್ನೆ ನಾಡಕಚೇರಿಗೆ ಸಂಪರ್ಕ ಕಲ್ಪಿಸಿರುವ ವಿದ್ಯುತ್ ವೈರನ್ನು ತುಂಡರಿಸಿರುವ ಪರಿಣಾಮ ಇಂದು ಯಾವ ಕೆಲಸ ಕಾರ್ಯಗಳು ನಡೆಯದೆ ಜನರು ತೊಂದರೆ ಅನುಭವಿಸಿದ್ದಾರೆ. ಆದರೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕರೆಂಟ್ ಇಲ್ಲನೆಪ ಹೇಳಿಕೊಂಡು ಕಾಲಹರಣ ಮಾಡುತ್ತಿದ್ದರು.

ಪಾಳ್ಯ ನಾಡಕಚೇರಿಗೆ ಪ್ರತಿನಿತ್ಯ ನೂರಾರು ರೈತರು, ಜನಸಾಮಾನ್ಯರು, ಮಹಿಳೆಯರು ತಮ್ಮ ಕೆಲಸ ಕಾರ್ಯಗಳಿಗಾಗಿ ಆಗಮಿಸುತ್ತಾರೆ. ಆದರೆ ಇಲ್ಲಿ ಎಲ್ಲವೂ ಸರಿ ಇದ್ದ ವೇಳೆಯಲ್ಲೇ ಕೆಲಸವಾಗುವುದು ಅಷ್ಟಕ್ಕಷ್ಟೇ. ಒಂದು ನಾಡಕಚೇರಿಯ ವಿದ್ಯುತ್ ಬಿಲ್ ಪಾವತಿಸದೆ ಕರೆಂಟ್ ಕಟ್ ಮಾಡಿರುವುದು ಇಡೀ ತಾಲ್ಲೂಕು ಆಡಳಿತಕ್ಕೆ ನಾಚಿಕೆಗೇಡಿನ ಸಂಗತಿಯಾಗಿದೆ.



ಪ್ರತಿದಿನವೂ ನಾಡಕಚೇರಿಗೆ ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಪಹಣಿ ಪತ್ರ, ಸಣ್ಣ ಹಿಡುವಳಿ ಮತ್ತು ಭೂ ಹಿಡುವಳಿ, ವೃದ್ಧಾಪ್ಯ ವೇತನ ಸೇರಿದಂತೆ ಹಲವು ಯೋಜನೆಗಳ ಫಲಾನುಭವಿಗಳು ಇಂದು ಕೆಲಸ ಕಾರ್ಯಗಳನ್ನು ಬಿಟ್ಟು ನಾಡಕಚೇರಿಗೆ ಬಂದಂತಹವರಿಗೆ ಕರೆಂಟ್ ಇಲ್ಲ ಎಂದು ಹೇಳಿ ಕಳುಹಿಸುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

**ಅವ್ಯವಸ್ಥೆಗಳ ಆಗರವಾದ ಕಚೇರಿ**

ಪಾಳ್ಯ ನಾಡಕಚೇರಿಗೆ ಸುಮಾರು 83 ಗ್ರಾಮಗಳು ವ್ಯಾಪ್ತಿಗೆ ಒಳಪಡುತ್ತವೆ. ಇಲ್ಲಿ ಕಂದಾಯದ ಆಡಳಿತದ ದೃಷ್ಟಿಯಿಂದ 8 ವೃತ್ತಗಗಳನ್ನಾಗಿ ವಿಂಗಡಿಸಿ ಅವುಗಳಿಗೆ ಗ್ರಾಮ ಲೆಕ್ಕಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಓರ್ವ ಕಂದಾಯಾಧಿಕಾರಿ, ಓರ್ವ ಉಪ ತಹಸೀಲ್ದಾರ್ ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿ ಅವ್ಯವಸ್ಥೆಗಳ ಆಗರವಾಗಿದೆ. ಕಚೇರಿಗೆ ಸರಿಯಾದ ಕಟ್ಟಡದ ವ್ಯವಸ್ಥೆ ಇಲ್ಲ, ಮಳೆಗಾಲದಲ್ಲಿ ಸಾಕಷ್ಟು ತೊಂದರೆಯಾಗುತ್ತದೆ, ಜೊತೆಗೆ ವಿದ್ಯುತ್ ಸಮಸ್ಯೆ ಆಗಾಗ್ಗೆ ತಲೆದೋರುತ್ತಲೇ ಇರುತ್ತದೆ. ಪರ್ಯಾಯವಾಗಿ ಯುಪಿಎಸ್ ಅಥವಾ ಜನರೇಟರ್ ವ್ಯವಸ್ಥೆ ಕಲ್ಪಿಸಲಾಗಿಲ್ಲ. ಇದರಿಂದ ಸಾಕಷ್ಟು ಸಮಸ್ಯೆಗಳಾಗುತ್ತಿವೆ.

**ದಂಡಾಧಿಕಾರಿಗಳಿಲ್ಲದ ಆಡಳಿತ**

ಆಲೂರು ತಾಲ್ಲೂಕಿಗೆ ಖಾಯಂ ದಂಡಾಧಿಕಾರಿ ಇಲ್ಲದೆ ಇರುವುದು ಇಷ್ಟೆಲ್ಲಾ ಸಮಸ್ಯೆಗಳಿಗೆ ಕಾರಣ ಎಂದು ಹೇಳಲಾಗುತ್ತಿದೆ. ಕಳೆದ ಹಲವು ದಿನಗಳ ಹಿಂದೆ ತಹಸೀಲ್ದಾರ್ ಆಗಿದ್ದ ಸೌಮ್ಯ ಅವರನ್ನು ಸರ್ಕಾರ ವರ್ಗಾವಣೆಗೊಳಿಸಿ ಆದೇಶ ಹೊರಡಿಸಿತ್ತು. ಆದರೆ ಈ ಸ್ಥಾನಕ್ಕೆ ಬೇರೆ ಯಾರನ್ನೂ ನಿಯೋಜಿಸದೆ ಸಕಲೇಶಪುರ ತಹಸೀಲ್ದಾರ್ ಮೇಘನಾ ಅವರಿಗೆ ಹೆಚ್ಚುವರಿಂಜಿಗಿ ಜವಾಬ್ದಾರಿ ನೀಡಲಾಗಿದೆ. ಇವರು ಬೆಳಗ್ಗೆ ಮತ್ತು ಸಂಜೆ ಬಂದು ಕಡತಗಳಿಗೆ ಸಹಿ ಹಾಕಿ ಹೋಗುವುದಷ್ಟೆ ಇವರ ಕೆಲಸವಾಗಿದೆ. ಆದ್ದರಿಂದ ತಕ್ಷಣವೇ ಸರ್ಕಾರ ಖಾಯಂ ಅಧಿಕಾರಿಯನ್ನು ನೇಮಿಸುವಂತೆ ಜನರು ಒತ್ತಾಯಿಸಿದ್ದಾರೆ.

# ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ತಪಾಸಣಾ ಶಿಬಿರ



**ಉದಯಕಾಲ ನ್ಯೂಸ್**

**ಚನ್ನರಾಯಪಟ್ಟಣ:** ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ತಾಲೂಕಿನ 29 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸಲು ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೂಚನೆ ನೀಡಲಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸರ್ಕಾರ ಭಾರತ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ನವದೆಹಲಿ ಆಲಿ ಯರ್ವ ಜಂಗ್‌ಅಖಿಲ ಭಾರತೀಯ ವಾಕ್ ಮತ್ತು ಶ್ರವಣದೋಷ ಸಂಸ್ಥೆ, ಮುಂಬೈ

(ವಿಕಲಚೇತನರ ಸಬಲೀಕರಣ ಸ್ವಾಯತ್ತ ಸಂಸ್ಥೆ) ಲಯನ್ಸ್ ಸನ್ ರೈಸ್ ಸೇವಾ ಸಂಸ್ಥೆ, ಸಾರ್ವಜನಿಕ ಆಸ್ಪತ್ರೆ ಚನ್ನರಾಯಪಟ್ಟಣ ಇವರ ಸಂಯುಕ್ತಾಶ್ರಯದಲ್ಲಿ ವಿಶೇಷ ಚೇತನತರ ಸೌಲಭ್ಯ ಮಾಹಿತಿ ಕಾರ್ಯಾಗಾರ ಮತ್ತು ಶ್ರವಣಸಾಧನಗಳ ವಿತರಣಾ ಶಿಬಿರವನ್ನು ಉದ್ಘಾಟಿಸಿದರು ಅವರು ಮಾತನಾಡಿ ಕಿವಿ ಕೇಳದವರಿಗೆ ಕೇಳುವಂತೆ ಮಾಡುವುದು ಪುಣ್ಯದ ಕೆಲಸ ಆಲಿಯುರ್ವ ಜಂಕ್ ಅಖಿಲ ಭಾರತೀಯ ವಾಕ್ ಮತ್ತು ಶ್ರವಣ ದೋಷ ಸಂಸ್ಥೆ ಇಂತಹ ಮಹತ್ಕಾರ್ಯವನ್ನು ಮಾಡುತ್ತಿರುವುದು ಹೆಮ್ಮೆಯ ವಿಷಯವೆಂದು ಶ್ಲಾಘಿಸಿದರು.

ಇಂದಿನ ಕಾರ್ಯಗಾರದಲ್ಲಿ ವಿಶೇಷ ಚೇತನರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಮಾಹಿತಿಯನ್ನು ಸವಿವರವಾಗಿ ನೀಡಲಿದ್ದು ತಾಲೂಕಿನ ವಿಶೇಷ ಚೇತನರು ಈ ಕಾರ್ಯಗಾರದ ಸದುಪಯೋಗ ಪಡೆದುಕೊಳ್ಳಬೇಕೆಂದರು. ತಾಲೂಕಿನಲ್ಲಿರುವ 29 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದು ಯಾವ ಕೇಂದ್ರದಲ್ಲಿಯು ಸಹ ವೈದ್ಯರ ಕೊರತೆ ಇರುವುದಿಲ್ಲ. ನಗರದಲ್ಲಿ ಎರಡು ನಮ್ಮ ಕ್ಲಿನಿಕ್ ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಆಯುಷ್ ಕ್ಲಿನಿಕ್ ನ್ನು ತೆರೆಯಲು ಕ್ರಮವಹಿಸಿದ್ದು.ಪಟ್ಟಣದ ತಾಲೂಕು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಲ್ಲಾ ವಿಭಾಗಗಳಲ್ಲೂ ತಜ್ಞ ವೈದ್ಯರುಗಳಿದ್ದು ನಾಗರೀಕರ ಆರೋಗ್ಯ ಸೇವೆಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ವಿ. ಮಹೇಶ್, ಭೋಜರಾಜ್‌ಗೌಡ, ಡಾ. ಗಾಯತ್ರಿ, ಅರವಿಂದ್, ಗೋಪಾಲ್ ಶರ್ಮ, ಸತ್ಯಭಾನು, ಮೋಹನ್ ಕುಮಾರ್, ಪುರಸಭಾ ಅಧ್ಯಕ್ಷೆ ರೇಖಾ ಅನಿಲ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕಿಶೋರ್ ಕುಮಾರ್, ಡಾ.ಯೋಗೀಶ್, ತಹಸೀಲ್ದಾರ್ ಗೋವಿಂದರಾಜು, ಹೇಮಂತ್, ಶೃತಿ, ಸುಬ್ರಮಣ್ಯ, ಶೋಭಾ, ನೀಲಮ್ಮ, ಲಯನ್ ನಾಗರಾಜು, ಲಯನ್ ಮಂಜುನಾಥ್, ಶಿವಣ್ಣ, ಗುರುಮೂರ್ತಿ ಉಪಸಿತರಿದ್ದರು.

### ನೀರು ಬಳಕೆದಾರರ ಸಂಘದ ಅಧ್ಯಕ್ಷರಾಗಿ ಎಸ್. ನಾಗರಾಜಪ್ಪ ಆಯ್ಕೆ



**ಉದಯಕಾಲ ನ್ಯೂಸ್**

**ಯಳಂದೂರು:** ಸಮೀಪದ ಬಾಣಹಳ್ಳಿ ಗ್ರಾಮದ ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರಾಗಿ ಎಸ್. ನಾಗರಾಜಪ್ಪ ಹಾಗೂ ಉಪಾಧ್ಯಕ್ಷೆಯಾಗಿ ಬಿ.ಎಮ್. ಭಾರತಿ ಅವಿರೋಧವಾಗಿ ಆಯ್ಕೆಯಾದರು.

ಬಾಣಹಳ್ಳಿ ಗ್ರಾಮದ ನೀರು ಬಳಕೆದಾರರ ಸಹಕಾರ ಸಂಘದ ಕಚೇರಿಯಲ್ಲಿ ಬುಧವಾರ ಈ ಸಂಬಂಧ ಚುನಾವಣೆ ನಡೆದಿತ್ತು. ತಲಾ ಎರಡೂ ಸ್ಥಾನಗಳಿಗೂ ಒಂದೊಂದೆ ಅರ್ಜಿ ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿದ್ದ ಜನಾರ್ಧನ್ ಇವರಿಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಅಧಿಕೃತವಾಗಿ ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಎಸ್. ನಾಗರಾಜಪ್ಪ ಮಾತನಾಡಿ, ಸಹಕಾರ ಸಂಘದ ಎಲ್ಲಾ ಸದಸ್ಯರೂ, ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಮ್ಮ ನೀರಾವರಿ ಅಚ್ಚುಕಟ್ಟಿಗೆ ಬರುವ ವ್ಯಾಪ್ತಿಯಲ್ಲಿನ ಜನರಿಗೆ ಕಾಡಾದಿಂದ ಬರುವ ಎಲ್ಲಾ ಸವಲತ್ತುಗಳನ್ನು ದೊರಕಿಸಿಕೊಡುವಲ್ಲಿ ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ. ಸಂಘವನ್ನು ಮತ್ತಷ್ಟು ಬಲಿಷ್ಠಗೊಳಿಸಲು ಬೇಕಿರುವ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೇನೆ. ಇದನ್ನು ಸದಾ ಚಟುವಟಿಕೆಯಲ್ಲಿಡಲು ಯತ್ನಿಸುತ್ತೇನೆ ಎಂದರು.

ನಿರ್ದೇಶಕರಾದ ಚಿನ್ನಸ್ವಾಮಿ, ನಟರಾಜು, ಪುಟ್ಟಣ್ಣ, ಸುಬ್ಬಣ್ಣ, ನಾಗೇಂದ್ರಸ್ವಾಮಿ, ಗೌರಮ್ಮ, ಬಸವನಾಯಕ, ಮರಿಸ್ವಾಮಿ ಕಾರ್ಯದರ್ಶಿ ಶಾಂತರಾಜು, ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

### ಫೆ.25, 26ರಂದು ಜನಾಂದೋಲನ ಜಾಥ

**ಮಡಿಕೇರಿ:** ಕೇಂದ್ರ ಮತ್ತು ರಾಜ್ಯ ಸರ್ಕಾರ ಬಜೆಟ್ ಮಂಡನೆಯಲ್ಲಿ ಕೊಡಗು ಜಿಲ್ಲೆಯನ್ನು ಕಡೆಗಣಿಸಿದ ಪರಿಣಾಮ ಫೆ.25, 26ರಂದು ಜಿಲ್ಲೆಯಲ್ಲಿ ಭಾರತ್ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವತಿಯಿಂದ ಜನಾಂ ದೋಲನ ಜಾಥ ನಡೆಯಲಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಎಚ್.ಬಿ.ರಮೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ರಾಜ್ಯದ ವಿವಿಧೆಡೆ ಫೆ22ರಿಂದ ಜನಾಂ ದೋಲನ ಜಾಥ ಆರಂಭವಾಗಿದೆ. ಇದರ ಭಾಗವಾಗಿ ಫೆ.25 ರಂದು ಮಡಿಕೇರಿಯಲ್ಲಿ ಆರಂಭವಾಗಿ ಚೆಟ್ಟಳ್ಳಿಯಲ್ಲಿ ಅಂತ್ಯ ಗೊಳ್ಳಲಿದೆ. ಫೆ.26ರಂದು ವಿರಾಜಪೇಟೆಯಲ್ಲಿ ಆರಂಭವಾಗಿ ನೆಲ್ಯಹುದಿಕೇರಿಯಲ್ಲಿ ಜಾಥ ಸಮಾಪ್ತಿಗೊಳ್ಳಲಿದೆ.

ಪ್ರಕೃತಿ ವಿಕೋಪ ಸಂದರ್ಭ ಮನೆ ಕಳೆದುಕೊಂಡ ಎಲ್ಲರಿಗೂ ಇನ್ನು ಮನೆ ಸಿಗಲಿಲ್ಲ. ರೈಲು ತರುತ್ತೇವೆ ಎಂದ ಜನಪ್ರತಿನಿಧಿಗಳು ತರಲಿಲ್ಲ. ವನ್ಯ ಜೀವಿ ಸಂಘರ್ಷಕ್ಕೆ ಶಾಶ್ವತ ಪರಿಹಾಸ ನೀಡಲಿಲ್ಲ. ಕಸ್ತೂರಿ ರಂಗನ್ ವರದಿ ತಡೆಹಿಡಿಯಲು ಸಾಧ್ಯವಾಗುತ್ತಿಲ್ಲ. ಕೊಡಗಿಗಾಗಿ ಪ್ರತ್ಯೇಕವಾದ ಯೋಜನೆ ರೂಪಿಸಿಲ್ಲ ಎಂದ ಅವರು, ಇದೊಂದು ಚುನಾವಣಾ ಬಜೆಟ್ ಆಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಭಾರತ್ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಸದಸ್ಯರಾದ ಎ.ಸಿ.ಸಾಬು, ಎಚ್.ಆರ್.ಶಿವಪ್ಪ, ಎನ್.ಡಿ.ಕುಟ್ಟಪ್ಪ ಉಪಸ್ಥಿತರಿದ್ದರು

# ಗರ್ಭಿಣಿಯರು ಪೌಷ್ಠಿಕಾಂಶಯುಕ್ತ ಆಹಾರ ಸೇವಿಸಬೇಕು

**ಉದಯಕಾಲ ನ್ಯೂಸ್**

**ಹುಣಸೂರು:** ಗರ್ಭಿಣಿಯರು ಸೊಪ್ಪು ತರಕಾರಿ ಮೊಳಕೆ ಕಾಳು ಇನ್ನಿತರೆ ಪೌಷ್ಠಿಕ ಆಹಾರವನ್ನು ಸೇವಿಸಿ ಆರೋಗ್ಯ ಸಮಾಜ ನಿರ್ಮಾಣ ಮಾಡಲು ಸಹಕಾರಿಯಾಗಬೇಕು ಎಂದು ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳಿ ನಿಗಮದ ಅಧ್ಯಕ್ಷೆ ಕೆ.ಲಲಿತಾ ಜಿ.ಟಿ.ದೇವೇಗೌಡ ಹೇಳಿದರು.

ತಾಲೂಕಿನ ನೇರಳಕುಪ್ಪೆ ಗ್ರಾಮದ ಆಶ್ರಮ ಶಾಲೆಯಲ್ಲಿ ಸ್ವಾಮಿ ವಿವೇಕಾನಂದ ಯುತ್ ಮೂವ್ಮೆಂಟ್. ಹಾಗೂ ಲಕ್ಷ್ಮಿಮಹಿಳಾ ಸಹಕಾರ ಸಂಘದ ಸಹಭಾಗಿತ್ವದಲ್ಲಿ ಸುಮಾರು 30 ಜನರಿಗೆ ಹಮ್ಮಿಕೊಂಡಿದ್ದ ಗಿರಿಜನ ಹಾಡಿಯ ಗರ್ಭಿಣಿ ಮಹಿಳೆಯರಿಗೆ ಸೀಮಂತ ಕಾರ್ಯಕ್ರಮ ಉಧ್ಘಾಟಿಸಿ ಮಾತನಾಡಿದ ಅವರು ಮನೆಯಲ್ಲಿ ನಮ್ಮವರ ಎದುರು ನಡೆಯು ಕಾರ್ಯಕ್ರಮಕ್ಕಿಂತ ಇಂತಹ ಸಾಮೂಹಿಕ ಕಾರ್ಯಕ್ರಮ ತುಂಬಾ ಸಂತೋಷ ಕೊಟ್ಟಿದೆ.ಗರ್ಭಿಣಿಯರು ಪೌಷ್ಠಿಕ ಆಹಾರದ ಜೊತೆಗೆ ನಿಮ್ಮ ಸುತ್ತ ಮುತ್ತ ಪರಿಸರವನ್ನು ಸ್ವಚ್ಚವಾಗಿ ಇಟ್ಟುಕೊಂಡು ಅರೋಗ್ಯವಂತ ಮಗು ಜನಿಸುವಂತೆ ಮಾಡಬೇಕು ಎಂದರು.ಗರ್ಭಿಣಿ ಮಹಿಳೆಯರಿಗೆ ಹರಿಶಿನ. ಕುಂಕುಮ ಸೀರೆ. ಕೊಬ್ಬರಿ. ಎಲೆ ಅಡಿಕೆ ಬಳೆ. ರವಕೆ.ಹಣ್ಣು. ಹೂವು ತೆಂಗಿಕಾಯಿ ನೀಡಿ ಮಡಿಲು ತುಂಬಿ ಹಾರೈಸದರು.



ಇದಕ್ಕೂ ಮುನ್ನ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯಧಿಕಾರಿ ಡಾ.ಶಿಲ್ಪ ಮಾತನಾಡಿ ಮಹಿಳೆಯರು ಪೌಷ್ಠಿಕ ಆಹಾರ ಸೇವಿಸಬೇಕು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸದೆ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಉತ್ತಮ ಆರೋಗ್ಯ ಹೊಂದಲು ಪೌಷ್ಠಿಕಕಾಂಶದ ಆಹಾರವನ್ನು ಮನೆಯಲ್ಲಿಯೇ ತಯಾರಿಸಿ ಸೇವಿಸಬೇಕು. ಸರ್ಕಾರಿ ಅಸ್ಪತ್ರೆಗಳಲ್ಲಿ ಯಾವುದೇ ಭಯ ವಿಲ್ಲದೆ ಎಚ್ ಐವಿ ತಪಾಸಣೆ ಮಾಡಿಕೋಳ್ಳಬೇಕು. ಎಚ್‌ಐವಿ ಹೈ ರಿಸ್ಕ್ ಇದ್ದರೆ. ಅಸ್ಪತ್ರೆಗಳಲ್ಲೇ ಉಚಿತವಾಗಿ ತಪಾಸಣೆ ನಡೆಸಲಾಗಿತ್ತದೆ. ವೈಧ್ಯಕೀಯವಾಗಿ ಸಿಕ್ಕುವ ಔಷಧಿಗಳು ಚಕಪ್‌ಗಳು ಸೇರಿದಂತೆ ಸರ್ಕಾರದ ವಿವಿಧ ಯೋಜನೆಗಳು ಎಂದು ತಿಳಿಸಿದರು.

ವಿವೇಕಾನಂದ ಮೆಮೊರಿಯಲ್ ಆಸ್ಪತ್ರೆಯ ಡಾ.ಅಭಿಷೇಕ್ ಮಾತನಾಡಿ ಗರ್ಭಿಣಿಯರಿಗೆ ಯಾವರೀತಿಯಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಮತ್ತು ಸ್ವಾಮಿ ವಿವೇಕನಂದರ ಯುತ್ ಮೂವ್ಮೆಂಟ್ ನ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂ.ಮಾಜಿ ಸದಸ್ಯರಾದ ಕಟ್ಟನಾಯಕ. ತಾ.ಪಂ.ಮಾಜಿ ಸ. ಕೆ ಗಣಪತಿ. ದೊಡ್ಡಹೆಜ್ಜೋರು.ಗ್ರಾ.ಪಂ.ಅಧ್ಯಕ್ಷರಾದ ಶುಭಾಶ್ ತಾ.ಪಂ.ಮಾಜಿ ಸದಸ್ಯೆ.ಪುಷ್ಪಲತಾ. ಹನಗೂಡು ಸೋಸೈಟಿ ನಿರ್ದೇಶಕ ಉಜ್ಜೀನಿಗೌಡ ವ್ಯವಸ್ಥಾಪಕಿ ಕುಸುಮ .ಬೋರಪ್ಪ.ಪೂಜಾ. ನವೀನ್. ಆನಂದ್. ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವ

**ಉದಯಕಾಲ ನ್ಯೂಸ್**

**ಹನೂರು:** ಮಹದೇಶ್ವರ ಬೆಟ್ಟದಲ್ಲಿ ಬೇಡಗಂಪಣ ಸಮುದಾಯದ ಅರ್ಚಕರು ಭಕ್ತಿ ಭಾವದಿಂದ ಕೊಂಡೋತ್ಸವ ಹಾಗೂ ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವ ಅಂಗವಾಗಿ ವಿವಿಧ ವಿಶೇಷ ಪೂಜೆ, ತೇರು ಜೊತೆಗೆ ತಡರಾತ್ರಿ ಕೊಂಡೋತ್ಸವದೊಂದಿಗೆ ತೆರೆ ಬಿದ್ದಿದೆ.

ದೇವಾಲಯದ ರಾಜಗೋಪುರ ಮುಂಭಾಗ ಕೊಂಡೋತ್ಸವ ನಡೆಯಿತು. ರಾಜಗೋಪುರದ ಮುಂದೆ ಶುಭ ಸಂಕೇತದ ಬಾಳೆ ಕಂಬಕಟ್ಟಿ ಮಾವಿನ ತೋರಣ ಸಹಿತ ಹಸಿರು ತೋರಣಗಳಿಂದ ಸಿಂಗರಿಸಿದಂತಹ ಕೊಂಡ ನಿರ್ಮಿಸಲಾಗಿತ್ತು ಸಾಲೂರು ಬ್ರಹ್ಮನ ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು ಪೂಜಾ ಕಾರ್ಯಕ್ರಮ ನೆರವೇರಿಸಿದ ನಂತರ .. ಬೇಡ ಗಾಂಪಣ್ಣ ಸಮುದಾಯದ 12 ಅರ್ಚಕರು ಪೂಜೆ ವಿಧಿ ವಿಧಾನಗಳೊಂದಿಗೆ ಕಾಲಿಗೆ ಗೆಜ್ಜೆ ಕಟ್ಟಿ, ಸೊಂಟಕ್ಕೆ ದೇವರ ಮೂರ್ತಿ ಕಟ್ಟಿಕೊಂಡು ಕೈಯಲ್ಲಿ ಉದ್ದನೆಯ ಕತ್ತಿ ಹಿಡಿದು ಕೆಂಡದ ಮೇಲೆ ನಡೆಯುತ್ತಾ ಭಕ್ತಿ ಭಾವ ಮೆರೆದರು.

ಕಣ್ಣು ತುಂಬಿಕೊಂಡ ಭಕ್ತ ಬಳಗ : ಮಹದೇಶ್ವರ ಬೆಟ್ಟದಲ್ಲಿ ನಡೆದ ಕೊಂಡೋತ್ಸವವನ್ನು ಲಕ್ಷಾಂತರ ಭಕ್ತಾದಿಗಳು ನೋಡಿ ಕಣ್ಣು ತುಂಬಿಕೊಂಡರು ಪ್ರಾಧಿಕಾರದ ಕಾರ್ಯದರ್ಶಿ ಕಾತಯಾನಿದೇವಿ. ಉಪಕಾರ ದರ್ಶಿ ಬಸವರಾಜ್. ಅರ್ಚಕ ಕರವೀರ ಸ್ವಾಮಿ ಮಹದೇಶ್ವರ ಬೆಟ್ಟ ಠಾಣೆಯ ವೃತ್ತ ನಿರೀಕ್ಷಕರಾದ ನಂಜುಂಡಸ್ವಾಮಿ ಪೊಲೀಸ್ ಸಿಬ್ಬಂದಿಗಳು. ಸಾರ್ವಜನಿಕರ ಜೊತೆ ಉತ್ತಮವಾಗಿ ಸ್ಪಂದಿಸಿ ದೇವರ ಕೊಂಡೋತ್ಸವಕ್ಕೆ ಭಕ್ತಾದಿಗಳಿಗೆ ಅನುವು ಮಾಡಿಕೊಟ್ಟರು. ಇದೇ ಸಂದರ್ಭದಲ್ಲಿ ಪ್ರಾಧಿಕಾರದ ಸಿಬ್ಬಂದಿಗಳು ಹಾಗೂ ಭಕ್ತಾದಿಗಳು ಹಾಗೂ ಇನ್ನಿತರ ಹಾಜರಿದ್ದರು.



Udayakala printed and published by **K.N.Puttalingaiah** on behalf of **Anikethana Publication and Printers** and Printed at M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at Elegant Offset Printers Pvt Ltd impression Building 3360/4, Gondi halli galli Belagavi-590001, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi, ELEGANT OFFSET PRINTERSPVT LTD Plat No-33/1, 15/1 (Eastern Part) MT Sagar Industrial Estate Gokul Road Hubballi -580030 and Published at no 1576, Rame Gowda Building, 2nd floor, V.V.Road, Mandya-571 401. ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, SHIMOGA- 577 201 **Editor: K N Puttalingaiah: 9742623551** (Responsible for all the news printed). All rights reserved. Reproduction in whole or in part without written permission is prohibited.RNI REG NO. 71090/97.Volume:**26** Issue: **268**

# ಹಾವುಗಳನ್ನು ರಕ್ಷಿಸಿ, ಪರಿಸರ ಸಮತೋಲನ ಕಾಪಾಡಿ; ಅಭಿಯಾನ

**ಉದಯಕಾಲ ವಿಶೇಷ**
**ವರದಿ: ನಾಗೇಶ್ ಎಸ್, ವಿ.ಜಿ.ದೊಡ್ಡಿ**

**ಮಾಗಡಿ:** ಹಾವುಗಳೆಂದರೆ ಮನಸ್ಸಲ್ಲಿ ಭಯ ಮೂಡುವುದು ಸಹಜ. ಹಾವು ಕಂಡರೆ ಜನರು ಗಾಬರಿಗೊಳ್ಳುವುದೂ ಉಂಟು.

ಆದರೆ ಹಾವಿಗೆ ನಮಗಿಂತಲೂ ಹೆಚ್ಚು ಭಯವಿರುತ್ತದೆ ಎನ್ನುವ ಇವರು ಇದುವರೆಗೆ ಬರೋಬ್ಬರಿ 3 ಸಾವಿರಕ್ಕೂ ಹೆಚ್ಚು ಹಾವುಗಳನ್ನು ರಕ್ಷಿಸಿ ಕಾಡಿಗೆ ಬಿಟ್ಟಿದ್ದಾರೆ.

ಅಷ್ಟೇ ಅಲ್ಲ, ಅವುಗಳ ಉಳಿವಿನ ಬಗ್ಗೆ ಹಾವುಗಳನ್ನು ರಕ್ಷಿಸಿ, ಪರಿಸರ ಸಮತೋಲನವನ್ನು ಕಾಪಾಡಿ ಎಂಬ ಅಭಿಯಾನದ ಮುಖಾಂತರ ಜನರಲ್ಲಿ ಅರಿವು ಮೂಡಿಸುತ್ತಿದ್ದಾರೆ.

ತಾಲ್ಲೂಕಿನ ಜ್ಯೋತಿನಗರದ ನಿವಾಸಿ ಸ್ನೇಕ್ ರಾಯ ಅವರೇ ಈ ಜನಸೇವೆ ಕರ್ತೃ. ಪ್ರಸ್ತುತ ಸಂದರ್ಭದಲ್ಲಿ ಸಂಬಳ ಕೊಟ್ಟರೂ ಕನಿಷ್ಟ ಸೇವೆ ನೀಡದ ವ್ಯವಸ್ಥೆ ಎಲ್ಲೆಡೆಕಂಡು ಬರುತ್ತಿದೆ.

ಉದ್ಯೋಗವಿಲ್ಲದೆ ಬಡತನದ ಹಿನ್ನಲೆ ಇರುವ ಸ್ನೇಕ್ ರಾಯ ಹಣದ ನೆರವು ನಿರೀಕ್ಷಿಸದೇ ಜೀವದ ಹಂಗುತೊರೆದು ಉರಗಗಳ ರಕ್ಷಣೆಯಲ್ಲಿ ತೊಡಗಿದ್ದಾರೆ.

ಜತೆಗೆ ಹಾವು ಕಡಿತದ ಸಾವು ತಗ್ಗಿಸುವಲ್ಲಿ ಶ್ರಮಿಸುತ್ತಿದ್ದಾರೆ. ಅಚ್ಚರಿಯ ಸಂಗತಿ ಎಂದರೆ ಇವರಿಗೆ ಸ್ಥಳೀಯ ತಾಲ್ಲೂಕು ಮತ್ತು ಪಟ್ಟಣದ ಆಡಳಿತ ಸೇರಿ ಯಾರೊಬ್ಬರೂ ನೆರವಿಗೆ ಬಂದಿಲ್ಲ.

ಸರಿಯಾಗಿ ಯಾವುದೇ ಉದ್ಯೋಗವಿಲ್ಲದೆ ಬಡತನದಲ್ಲಿದ್ದರೂ ಸುಮಾರು 10 ವರ್ಷಗಳಿಂದ ಹಾವು ಹಿಡಿಯುವುದನ್ನು ಪ್ರವೃತ್ತಿಯಾಗಿಸಿಕೊಂಡಿದ್ದಾರೆ.



ನಗರದಲ್ಲಿ ಬಡಾವಣೆಗಳು ಹೆಚ್ಚಾದಂತೆ ಬಯಲು ಪ್ರದೇಶ ಕಡಿಮೆಯಾಗಿ ಹಾವುಗಳು ಅಲ್ಲಲ್ಲಿ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿದೆ. ಗಮನೀಯ ಅಂಶವೆಂದರೆ ಇವರ ಬಳಿ ಉರಗ ರಕ್ಷಣೆಯಲ್ಲಿ ಬಳಸಲು ಸರಿಯಾದ ಸಾಧನ-ಸಲಕರಣೆಗಳಿಲ್ಲ.

ಒಂದೊಮ್ಮೆ ಅಪಾಯಸಂಭವಿಸಿದರೆ ಇವರ ಕುಟುಂಬಕ್ಕೆ ಆಸರೆಯಾಗಲು ವಿಮೆಯಂಥ ಕನಿಷ್ಠ ಸೌಲಭ್ಯವೂ ಇಲ್ಲ.

ಜೀವ ವೈವಿಧ್ಯತೆಯ ಅಗತ್ಯತೆ, ಉರಗಗಳ ಸಂರಕ್ಷಣೆ ಏಕೆ ಮಾಡಬೇಕು, ಮನೆಗೆ ಹಾವು ಬಂದಾಗ ಮಾಡಬೇಕಾದ ಮುಂಜಾಗ್ರತ ಕ್ರಮಗಳೇನು ಎಂಬುದರ ಬಗ್ಗೆ ಹಾವುಗಳನ್ನು ರಕ್ಷಿಸಿ, ಪರಿಸರ ಸಮತೋಲನವನ್ನು ಕಾಪಾಡಿ ಎಂಬ ವಿಶೇಷ ಆಂದೋಲನದೊಂದಿಗೆ ಜಾಗೃತಿ ಮೂಡಿಸುತ್ತಿದ್ದಾರೆ.

3000ಕ್ಕೂ ಹೆಚ್ಚು ಹಾವುಗಳ ರಕ್ಷಣೆ:ನಾನಾ ಜಾತಿಯ ಉರಗಗಳನ್ನು ರಕ್ಷಿಸಿರುವ ಸ್ನೇಕ ರಾಯ ಇಲ್ಲಿಯವರೆಗೆ ಸುಮಾರು 3000ಕ್ಕೂ ಹೆಚ್ಚು ಹಾವುಗಳನ್ನು ಹಿಡಿದಿದ್ದಾರೆ.



> ಪರಿಸರ ಸಮತೋಲನಕ್ಕೆ ಹಾವುಗಳ ಪಾತ್ರ ಬಹಳ ಮುಖ್ಯ. ಹಾವುಗಳು ಯಾರಿಗೂ ವಿನಾಕಾರಣ ತೊಂದರೆ ಕೊಡುವುದಿಲ್ಲ. ಅವುಗಳಿಗೆ ನಮಗಿಂತ ಹೆಚ್ಚು ಭಯ ಇರುತ್ತದೆ. ಹೀಗಾಗಿ ಅವುಗಳನ್ನು ಕೊಲ್ಲದೆ ರಕ್ಷಣೆ ಮಾಡಬೇಕು.
> ನಿರುದ್ಯೋಗಿಯಾಗಿದ್ದರೂ ಸಹ ಸತತ 10 ವರ್ಷಗಳಿಂದ ಮಾಗಡಿ ತಾಲ್ಲೂಕಿನಾದ್ಯಂತ ಯಾರೇ ಕರೆ ಮಾಡಿದರೂ ಉರಗ ಸಂತತಿ ಉಳಿಯಬೇಕೆಂಬ ಅಭಿಲಾಷೆಯಿಂದ ಹಾವು ಹಿಡಿಯುವ ಕೆಲಸ ಮಾಡುತ್ತಿದ್ದೇನೆ.
> ಉದ್ಯೋಗವಿಲ್ಲದ ನನಗೆ ಸರ್ಕಾರಿ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಮನವಿ ಮಾಡುತ್ತೇನೆ.
>
> – ಸ್ನೇಕ್ ರಾಯ, ಉರಗ ರಕ್ಷಕ
> (ಮೊ: +91 7022867663)

> ಹಾವುಗಳ ರಕ್ಷಣೆಯಲ್ಲಿ ಅನೇಕ ಜನರು ತೊಡಗಿಸಿಕೊಂಡಿದ್ದಾರೆ. ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಅವರ ಬಗ್ಗೆ ನಮಗೆ ಯಾವುದೇ ವಿವರಗಳಿಲ್ಲ. ನಿಮ್ಮ ಉದಯಕಾಲ ದಿನಪತ್ರಿಕೆಯ ಮುಖೇನ ಮಾಗಡಿಯಲ್ಲಿ ಈ ಉರಗ ರಕ್ಷಕ ಸ್ನೇಕ್ ರಾಯ ಅವರ ಬಗ್ಗೆ ಮಾಹಿತಿ ಸಿಕ್ಕಿದೆ. ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ನಾವು ಅವರ ಚಟುವಟಿಕೆಗಳನ್ನು ಸುಗಮಗೊಳಿಸಲು ಮತ್ತು ಅವರಿಗೆ ಇಲಾಖೆಯಿಂದ ಉದ್ಯೋಗ ಅಥವಾ ಸಹಾಯ ಹಸ್ತ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.
>
> –ಜಗದೀಶ್ ಗೌಡ, ವಲಯ ಅರಣ್ಯಾಧಿಕಾರಿಗಳು, ಮಾಗಡಿ

## ಬೇಲೂರು ಪುರಸಭೆ ಅಧ್ಯಕ್ಷೆ ತೀರ್ಥಕುಮಾರಿ



**ಉದಯಕಾಲ ನ್ಯೂಸ್**

**ಬೇಲೂರು:** ಪುರಸಭೆಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಲ್ಲಿ 7ನೇ ವಾರ್ಡಿನ ಕಾಂಗ್ರೆಸ್ ಸದಸ್ಯೆತೀರ್ಥಕುಮಾರಿ ಅವಿರೋಧ ಆಯ್ಕೆಯಾಗಿದ್ದಾರೆ. ನಂತರ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ವಾರ್ಡಿನ ಎಲ್ಲಾ ಮತದಾರರಿಗೆ ಹಾಗೂ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರಿಗೆ ಅಭಿನಂದನೆ ತಿಳಿಸಿದರು. ಬೇಲೂರು ಪಟ್ಟಣದ ಸಮಗ್ರ ಅಭಿವೃದ್ಧಿಗೆ ಹಾಗೂ ನಗರದ 23 ವಾರ್ಡುಗಳ ಸಾರ್ವಜನಿಕರಿಗೆ ಮೂಲಸೌಕರ್ಯ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ಇದೇ ಸಂದರ್ಭ ಮಾಜಿ ಸಚಿವ ಬಿ ಶಿವರಾಂ, ಮಾಜಿ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಮ್ ಆರ್. ವೆಂಕಟೇಶ್, ಪುರಸಭೆ ಉಪಾಧ್ಯಕ್ಷ ಉಷಾ ಸತೀಶ್, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ತೌಫಿಕ್ ಇದ್ದರು.

## ಆಧ್ಯಾತ್ಮಿಕ ಚಿಂತನೆ ಮೈಗೂಡಿಸಿಕೊಳ್ಳಿ: ಡಾಲು ರವಿ



**ಉದಯಕಾಲ ನ್ಯೂಸ್**

**ಕೆ ಆರ್ ಪೇಟೆ:** ತಾಲೂಕಿನ ಶೀಳನೆರೆ ಹೋಬಳಿಯ ಅಂಚೆಮುದ್ದನಹಳ್ಳಿ ಗ್ರಾಮದಲ್ಲಿ ಶ್ರೀ ಮುನೇಶ್ವರ ದೇವಾಲಯ ಪುನರ್ ನಿರ್ಮಾಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದಮನ್ಮುಲ್ ನಿರ್ದೇಶಕ ಡಾಲುರವಿ, ಪ್ರತಿಯೊಬ್ಬರೂ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಚಿಂತನೆಯನ್ನು ಮೈಗೂಡಿಸಿಕೊಳ್ಳಬೇಕು.ದೇವಾಲಯಗಳು ಸುಖ,ಶಾಂತಿ ಹಾಗೂ ನೆಮ್ಮದಿಯನ್ನು ಕರುಣಿಸುವ ಧಾರ್ಮಿಕಕೇಂದ್ರಗಳಾಗಿವೆ.ಆದ್ದರಿಂದ ಎಲ್ಲರೂ ತಮ್ಮ ಧರ್ಮ ಆಚಾರ ವಿಚಾರಗಳನ್ನು ಚಾಚು ತಪ್ಪದೆ ಪಾಲಿಸಬೇಕು ಎಂದರು. ಈ ಸಂದರ್ಭದಲ್ಲಿ ಹಿರಿಯ ಮುಖಂಡ ಹಾದನೂರು ಪರಮೇಶ್,ಮಂಜು, ಅಶೋಕ್, ಜಯರಾಮ್, ನವೀನ್, ಸೋಮಣ್ಣ, ಗುಂಡ ಚೇತನ್,ತೆಂಡೆಕೆರೆ ನಾಗೇಶ್, ದಿನೇಶ್‌ಸೇರಿದಂತೆ ಉಪಸ್ಥಿತರಿದ್ದರು.

## ಕೊಪ್ಪ ಗ್ರಾಮದಲ್ಲಿ ಚಿರತೆ ಸೆರೆ



**ಉದಯಕಾಲ ನ್ಯೂಸ್**

**ಗುಬ್ಬಿ:** ಕುರಿ, ಮೇಕೆ, ಸಾಕು ನಾಯಿಗಳ ಬೇಟೆಯಾಡುತ್ತಾ ಹಲವು ದಿನಗಳಿಂದ ರೈತರ ನಿದ್ದೆಗೆಡಿಸಿದ್ದ ಹೆಣ್ಣು ಚಿರತೆಯೊಂದು ಅರಣ್ಯ ಇಲಾಖೆ ಅಳವಡಿಸಿದ್ದ ಬೋನಿನಲ್ಲಿ ತಡರಾತ್ರಿ ತಾಲ್ಲೂಕಿನ ಕಡಬ ಹೋಬಳಿ ಕೊಪ್ಪ ಗ್ರಾಮದಲ್ಲಿ ಸೆರೆಯಾಗಿದೆ.

ಕೊಪ್ಪ ಗ್ರಾಮದ ರಾಮಕೃಷ್ಣಯ್ಯ ಎಂಬುವರ ತೋಟದ ಬಳಿಯಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಹೆಣ್ಣು ಚಿರತೆ ಸೆರೆಯಾಗಿದೆ. ಚಿರತೆ ಓಡಾಟದ ಜಾಡು ಹಿಡಿದು ಬೋನ್ ಅಳವಡಿಸಿದ್ದ ಸಿಬ್ಬಂದಿ ಕಾರ್ಯಾಚರಣೆ ಮಂಗಳವಾರ ರಾತ್ರಿ ಯಶಸ್ವಿಯಾಗಿದೆ.

ಒಂದು ತಿಂಗಳಿಂದ ಲಕ್ಷಾಂತರ ಬೆಲೆ ಬಾಳುವ ಕುರಿಗಳು, ಮೇಕೆಗಳನ್ನು ಆಹಾರ ಮಾಡಿಕೊಂಡಿದ್ದ ಚಿರತೆ ಈ ಭಾಗದಲ್ಲಿ ರಾಜಾರೋಷವಾಗಿ ಓಡಾಡುತ್ತಿತ್ತು. ಜೊತೆಗೆ ಪಕ್ಕದ ಮಡೇನಹಳ್ಳಿ ಗ್ರಾಮದಲ್ಲಿ ಒಂದೇ ತಿಂಗಳಲ್ಲಿ ಎರಡು ಚಿರತೆ ಬೋನಿಗೆ ಸಿಕ್ಕ ಬೆನ್ನಲ್ಲೇ ಮಡೇನಹಳ್ಳಿ ಪಕ್ಕದ ಕೊಪ್ಪ ಗ್ರಾಮದಲ್ಲಿ ಮೂರು ವರ್ಷ ಪ್ರಾಯದ ಮತ್ತೊಂದು ಹೆಣ್ಣು ಚಿರತೆ ಸೆರೆಯಾಗಿರುವುದು ಜನತೆಯಲ್ಲಿ ಆತಂಕ ಮೂಡಿಸಿದೆ.

ಕಸಬಾ ಹೋಬಳಿಯ ವ್ಯಾಪ್ತಿಯಲ್ಲಿ ಮತ್ತಷ್ಟು ಹೆಚ್ಚಿನ ಚಿರತೆಗಳು ಕಾಣಿಸಿಕೊಂಡು ಚಿರತೆಯ ಉಪಟಳಕ್ಕೆ ಬೇಸತ್ತ ಸ್ಥಳೀಯರು ಚಿರತೆ ಸೆರೆಗೆ ಅರಣ್ಯ ಇಲಾಖೆಗೆ ಆಗ್ರಹಿಸಿದ್ದರು. ಕಡಬ, ಕಸಬಾ ಹೋಬಳಿಯ ಕೆಲ ಗ್ರಾಮದಲ್ಲಿ ಕಾಣಿಸಿಕೊಂಡ ಚಿರತೆಗಳು ಹಗಲಿನಲ್ಲಿ ಸಂಚಾರ ಮಾಡಿರುವುದು ಭಯ ತಂದಿದೆ. ಕೃಷಿ ಚಟುವಟಿಕೆಗೆ ರೈತರು ತಮ್ಮ ತೋಟ ಹೊಲಗಳಿಗೆ ತೆರಳಲು ಭಯ ಪಡುವಂತಾಗಿತ್ತು. ಚಿರತೆ ಸೆರೆಯಿಂದ ಈ ಭಾಗದ ರೈತರು ಸದ್ಯ ನಿಟ್ಟುಸಿರು ಬಿಟ್ಟಿದ್ದಾರೆ. ಇನ್ನಷ್ಟು ಚಿರತೆ ಸೆರೆಯಾಗಬೇಕು ಎಂದು ಸ್ಥಳೀಯರ ಆಗ್ರಹವಾಗಿದೆ.

# ಖಾಸಗಿ ಬಡಾವಣೆ ಮಾಲೀಕರಿಂದ ರಾಜಕಾಲುವೆ ಒತ್ತುವರಿ

## ಪುರಸಭೆ ನಿರ್ಲಕ್ಷ್ಯಕ್ಕೆ ಸಾರ್ವಜನಿಕರ ಆಕ್ರೋಶ

**ಉದಯಕಾಲ ವಿಶೇಷ**
**ವರದಿ: ವಡ್ಡೆಶ್ರೀನಿವಾಸುಲು**

**ಪಾವಗಡ:** ಪಟ್ಟಣದ ವ್ಯಾಪ್ತಿಯಲ್ಲಿ ರಿಯಲ್ ಎಸ್ಟೇಟ್ ಮಾಲೀಕರು, ಸುತ್ತಮುತ್ತಲಿರುವ ಜಮೀನುಗಳನ್ನು ಕೊಂಡು ಬಡಾವಣೆಗಳನ್ನು ನಿರ್ಮಿಸಲು ಮುಂದಾಗಿ, ಸರಕಾರಿ ಕೆರೆ ಕುಂಟೆ ಹಳ್ಳಗಳನ್ನು ಒತ್ತುವರಿ ಮಾಡುತ್ತಿದ್ದರೂ ತಹಸೀಲ್ದಾರ್, ಪುರಸಭೆ ಮುಖ್ಯಾಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಸಾರ್ವಜನಿಕರು ಹಿಡಿ ಶಾಪ ಹಾಕುತ್ತಿದ್ದಾರೆ. ಪಟ್ಟಣದ ಕಲುಮನ್ ಚೆರುವು, ಶ್ರೀನಿವಾಸನಗರ, ಜೈನ್ ಲೇಔಟ್, ಶಾಂತಿನಗರ, ಹೊಸ ಬಸ್ ಸ್ಟ್ಯಾಂಡ್,ವಿನಾಯಕನಗರ ಮತ್ತು 3ನೇ ವಾರ್ಡ್ ಕೆಇಬಿ ಹಿಂಭಾಗದಿಂದ ಕಡಮಲ ಕುಂಟೆ ಗ್ರಾಮಕ್ಕೆ ಹಾದುಹೋಗುವ ಡೋಲಾರ್ ಹಳ್ಳವು ಹಲವು ವರ್ಷಗಳ ಹಿಂದೆಯೇ ಬಹುತೇಕವಾಗಿ ಉಳ್ಳವರ ಪಾಲಾಗಿದ್ದು 150 ಅಡಿ ಕಾಲುವೆ ದಿನದಿಂದ ದಿನಕ್ಕೆ ಒತ್ತುವರಿಯಾಗುತ್ತಿದೆ. ರಾಜಕಾಲುವೆಗೆ ಅಲಂಕಾರ ಚಿತ್ರಮಂದಿರದ ಹತ್ತಿರ ಅಡ್ಡಲಾಗಿ ಚೆಕ್ ಡ್ಯಾಮ್ ,ಸೇತುವೆ ರಸ್ತೆ ನಿರ್ಮಿಸುತ್ತಿರುವುದು ಮುಂಬರುವ ದಿನಗಳಲ್ಲಿ ಮಳೆ ಬಂದರೆ ಅಕ್ಕಪಕ್ಕದ ಮನೆಗಳಿಗೆ ನೀರು ನುಗ್ಗಿ ಬಹುದೊಡ್ಡ ಅನಾಹುತಗಳಿಗೆ ಪುರಸಭೆ ಮುಖ್ಯಾಧಿಕಾರಿ ಮತ್ತು ತಹಸೀಲ್ದಾರ್ ನೇರ ಹೊಣೆಗಾರರಾಗಬೇಕು ಎಂದು ಸಾರ್ವಜನಿಕರು ಕಿಡಿ ಕಾರಿದ್ದಾರೆ.



ತಾಲೂಕು ದಂಡಾಧಿಕಾರಿಗಳು ಈಗಲಾದರೂ ಎಚ್ಚೆತ್ತುಕೊಂಡು ಸಂಪೂರ್ಣವಾಗಿ ತಮ್ಮ ಸಮಕ್ಷಮದಲ್ಲಿ ತಾಲ್ಲೂಕಿನ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಮತ್ತು ಪುರಸಭೆ ಅಧಿಕಾರಿ, ಸಿಬ್ಬಂದಿಒಳಗೊಂಡಂತೆ ಒತ್ತುವರಿ ಮಾಡಿದ ರಾಜ ಕಾಲುವೆಯ ಪ್ರತಿ ಸರ್ವೆ ನಂಬರನ್ನು ಅಳತೆ ಮಾಡಿಸಿ ಕಾನೂಕು ಕ್ರಮ ಜರುಗಿಸಬೇಕಿದೆ. ಇಲ್ಲವಾದರೆ ಸಂಬಂಧಿಸಿದ ರಾಜ್ಯಮಟ್ಟದ ಅಧಿಕಾರಿಗಳಿಗೆ ಮತ್ತು ಲೋಕಾಯುಕ್ತ ಅಧಿಕಾರಿಗಳಿಗೆ, ಒತ್ತುವರಿ ಮಾಡಿದ ಖಾಸಗಿ ವ್ಯಕ್ತಿಗಳ ಮೇಲು ಹಾಗೂ ಆಯಾ ಅವಧಿಯಲ್ಲಿ ಕಾರ್ಯನಿರ್ವಹಿಸಿರುವ ಅಧಿಕಾರಿಗಳೆಲ್ಲರ ಮೇಲು ದೂರು ನೀಡುತ್ತೇವೆ ಎಂದು ನಾಗರಿಕರು ತಿಳಿಸಿದ್ದಾರೆ.

# ಚಿಕ್ಕಬಳ್ಳಾಪುರ ಕಸಾಪದಿಂದ ಮಾತೃಭಾಷಾ ದಿನಾಚರಣೆ



**ಉದಯಕಾಲ ನ್ಯೂಸ್**

**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರ ತಾಲ್ಲೂಕು ಕಸಾಪ ವತಿಯಿಂದ ನಗರದ ನಂದಿ ರಂಗಮಂದಿರದ ಕಸಾಪ ಕಚೇರಿಯಲ್ಲಿ ಮಾತೃಭಾಷಾ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಸುಶೀಲಾ ಮಂಜುನಾಥ್ ಮಾತನಾಡಿ, ಮಾತೃಭಾಷೆಯೆಂದರೆ ತಾಯಿ ತನ್ನ ಮಗುವಿನೊಡನೆ ಮಾತನಾಡುವ ಮೊದಲ ಮಾತು ಎಂದರು. ಸಾಹಿತಿ ಸರಸಮ್ಮ ಮಾತಾಡಿ, ನೆಲ್ಸನ್ ಮಂಡೇಲಾರವರು ಹೇಳಿದ ಹಾಗೆ, ಅರ್ಥವಾಗುವ ಭಾಷೆಯಲ್ಲಿ ಮಾತಾಡಿದರೆ ತಲೆಗೆ ಮುಟ್ಟುತ್ತೆ, ಅವರ ಮಾತೃಭಾಷೆಯಲ್ಲಿ ಮಾತನಾಡಿದರೆ ಹೃದಯ ಮುಟ್ಟುತ್ತೆ. ಮಾತೃಭಾಷೆಯನ್ನು ಎಲ್ಲರೂ ಗೌರವಿಸುವಂತಾಗಲು ಭಾಷೆಯನ್ನು ಬಳಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲ್ಲೂಕು ಕಸಾಪ ಅಧ್ಯಕ್ಷರಾದ ಯಲುವಹಳ್ಳಿ ಸೊಣ್ಣೇಗೌಡವಹಿಸಿದ್ದರು. ಸಮಿತಿ ಕಾರ್ಯದರ್ಶಿ ಕೆ.ಎಂ.ರೆಡ್ಡಪ್ಪ, ಜಂಟಿ ಕಾರ್ಯದರ್ಶಿ ಡಿ.ಎಂ.ಶ್ರೀರಾಮ, ಸಹಕಾರ್ಯದರ್ಶಿ ಮಂಜುನಾಥ್, ಪ್ರತಿನಿಧಿ ನರಸಿಂಹರೆಡ್ಡಿ, ಸಾಂಸ್ಕೃತಿಕ ಕಾರ್ಯದರ್ಶಿ ಶಶಿಕಲಾ, ಮಹಿಳಾ ಪ್ರತಿನಿಧಿ ಕೆಂ.ಎಂ.ಕಾವ್ಯ, ಗೀತಾ ಇತರರು ಭಾಗವಹಿಸಿದ್ದರು.



ಮಂಡ್ಯ ವಿಧಾನಸಭಾ ಕ್ಷೇತ್ರದ ರಾಯ್ ಶೆಟ್ಟಿಪುರ ಗ್ರಾಮದಲ್ಲಿ ಜಾತ್ಯತೀತ ಜನತಾದಳದ ಪಂಚ ರತ್ನ ಯೋಜನೆಯ ಕರಪತ್ರವನ್ನು ಶಾಸಕ ಎಂ ಶ್ರೀನಿವಾಸ್ ನೇತೃತ್ವದಲ್ಲಿ ಮನೆ ಮನೆಗೆ ನೀಡಲಾಯಿತು.

# ವಿದ್ಯಾರ್ಥಿಗಳ ಅಭಿರುಚಿ ಕಲಿಕೆಗೆ ಒತ್ತು ನೀಡಿ

**ಉದಯಕಾಲ ನ್ಯೂಸ್**

**ಕೆ.ಆರ್.ನಗರ:** ಪೋಷಕರು ಮಕ್ಕಳಿಗೆ ಇಂತಹದನ್ನೇ ಓದಬೇಕು ಎಂದು ಒತ್ತಡ ಹೇರುವ ಬದಲು ಕಲಿಕೆಯನ್ನು ವಿದ್ಯಾರ್ಥಿಗಳ ಅಭಿರುಚಿಗೆ ಬಿಟ್ಟು ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದು ನವ ನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಹೇಳಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ಒಕ್ಕಲಿಗ ನೌಕರರ ಸ್ನೇಹ ಬಳಗದ ವತಿಯಿಂದ ನಡೆದ ನಿವೃತ್ತ ಸರ್ಕಾರಿ ನೌಕರರಿಗೆ ಸನ್ಮಾನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ಶಿಕ್ಷಕರು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಿದಾಗ ಮಾತ್ರ ಉನ್ನತ ಹಂತಕ್ಕೆ ತಲುಪಲು ಸಾಧ್ಯ ಎಂದರು.ಸಂಘದ ಅಧ್ಯಕ್ಷ ಹೆಚ್.ಟಿ.ಮಂಜು ಮಾತನಾಡಿ, ಸಂಘದ ಎಲ್ಲಾ ಸದಸ್ಯರ ಸಹಕಾರದಿಂದ ಮುಂದಿನ ದಿನಗಳಲ್ಲಿ ಮತ್ತಷ್ಟು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ನಿವೃತ್ತ ನೌಕರರು ಮತ್ತು ಪ್ರತಿಭಾ ವಂತ ವಿದ್ಯಾರ್ಥಿಗಳನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.



ನಿವೃತ್ತ ಉಪನ್ಯಾಸಕ ಕೆ.ಆರ್.ಲಕ್ಕೇಗೌಡ, ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ಸ್ನೇಹ ಬಳಗದ ಗೌರವಾಧ್ಯಕ್ಷ ಡಾ.ಟಿ.ಶಿವಪ್ರಸಾದ್, ಡಾ.ಚಂದ್ರಕಲಾ, ನೌಕರರ ಸಂಘದ ಅಧ್ಯಕ್ಷ ಅರುಣ್‌ಕುಮಾರ್ ಮಾತನಾಡಿದರು. ಪುರಸಭಾ ಸದಸ್ಯ ಕೆ.ಎಲ್.ಜಗದೀಶ್, ಮುಖಂಡರಾದ ಲೋಕನಾಥ್, ಬಾನುಪ್ರಕಾಶ್, ಕೆ.ಎಸ್.ನಾಗರಾಜು, ಮಂಜೇಗೌಡ, ಎಸ್.ಎಲ್.ರವಿ, ಲಕ್ಷ್ಮಿಕಾಂತ್ ಇದ್ದರು.

# ಮಹದೇವ್ ಅವರಿಂದ ಅಭಿವೃದ್ಧಿ ನಿರೀಕ್ಷಿಸಬೇಡಿ

## ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಶಾಸಕರ ವಿರುದ್ಧ ಕಿಡಿಕಾರಿದ ಮಾಜಿ ಶಾಸಕ

**ಉದಯಕಾಲ ನ್ಯೂಸ್**

**ಪಿರಿಯಾಪಟ್ಟಣ:** ರಾಜ್ಯಸಭಾ ಸದಸ್ಯತ್ವಕ್ಕೆ ಮಾಜಿ ಪ್ರಧಾನಿ ಜೆಡಿಎಸ್ ಪಕ್ಷದ ವರಿಷ್ಠರಾದ ಹೆಚ್.ಡಿ.ದೇವೆಗೌಡರನ್ನು ಪಕ್ಷ ಸೂಚಿಸಿದಾಗ ಶಾಸಕ ಕೆ.ಮಹದೇವ ವಯಸ್ಸಾದ ಅವರಿಗ್ಯಾಕೆ ಟಿಕೆಟ್ ನೀಡುತ್ತಾರೆ ಎಂದು ವ್ಯಂಗ್ಯವಾಡಿದ್ದರು ಎಂದು ಮಾಜಿ ಶಾಸಕ ಕೆ.ವೆಂಕಟೇಶ್ ತಿಳಿಸಿದರು.ತಾಲೂಕಿನ ಚೌತಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ವನ್ನುದ್ದೇಶಿಸಿ ಮಾತನಾಡಿದರು. ಶಾಸಕ ಕೆ.ಮಹದೇವ್ ಪಕ್ಷದ ವರಿಷ್ಠರನ್ನು ಗೌರವಿಸದಿರುವ ಕೀಳು ಮನಸ್ಥಿತಿಯನ್ನು ಹೊಂದಿದ್ದಾರೆ ಎಂದು ಆರೋಪಿಸಿದರು.

ಇವರಿಂದ ತಾಲೂಕಿನ ಜನತೆಯ ರಕ್ಷಣೆ ಮತ್ತು ಅಭಿವೃದ್ಧಿಯಾಗುತ್ತದೆ ಎಂದು ಯಾರು ತಿಳಿಯಬಾರದು. ಮೈಮುಲ್ ಚುನಾವಣೆಯಲ್ಲಿ ಪಕ್ಷದ ವರಿಷ್ಠರು ಸೂಚಿಸಿದ ಅಭ್ಯರ್ಥಿಗೆ ಮತ ನೀಡದಂತೆ ಸ್ವಾರ್ಥಕ್ಕೆ ತಮ್ಮ ಮಗನನ್ನು ಚುನಾವಣೆಯಲ್ಲಿ ನಿಲ್ಲಿಸಿದರು.

ವರಿಷ್ಠರ ಮಾತುಗಳನ್ನು ಧಿಕ್ಕರಿಸುವ ಮತ್ತು ಅವರನ್ನು ಅಗೌರದಿಂದ ಕಾಣುವ ದುರ್ನಡತೆಯಿಂದ ಕೂಡಿದ್ದಾರೆ.

ಇಂತಹ ವ್ಯಕ್ತಿಗಳಿಗೆ ಜನರು ತಕ್ಕ ಪಾಠ ಕಲಿಸಬೇಕು. ಇವರಿಗೆ ತಾಲೂಕಿನ ಅಭಿವೃದ್ಧಿಯಾಗಲಿ ಅಥವಾ ಸಾಮಾನ್ಯ ಜನರ ಬಗ್ಗೆ ಕಾಳಜಿ ಇಲ್ಲ ಇದನ್ನು ಜನತೆ ಅರಿತುಕೊಳ್ಳಬೇಕು. ಬಿಜೆಪಿ ಪಕ್ಷವು ಬೆಲೆ ಏರಿಕೆ ಸೇರಿದಂತೆ ರೈತ ವಿರೋಧಿ, ಕಾರ್ಮಿಕರ ವಿರೋಧಿ, ಬಡವರ ವಿರೋಧಿ ಆಡಳಿತವನ್ನು ನಡೆಸುವುದರ ಮೂಲಕ ಜನಸಾಮಾನ್ಯರಿಗೆ ಸಂಕಷ್ಟ ನೀಡುತ್ತಿದೆ ಮತ್ತು ಜೆಡಿಎಸ್ ಪಕ್ಷವು ಅವಕಾಶ ವಾದಿ ಮತ್ತು ಅನುಕೂಲವಾದಿ ರಾಜಕಾರಣ ಮಾಡುತ್ತ ಅಧಿಕಾರದ ಸ್ವಾರ್ಥಕ್ಕೆ ಬಲಿಯಾಗುತ್ತಿದೆ ಎಂದು ಆರೋಪಿಸಿದರು.



ನಾನು ಶಾಸಕನಾಗಿ 25 ವರ್ಷ ತಾಲೂಕಿನ ಆಡಳಿತ ನಡೆಸಿ ಪ್ರತಿ ಗ್ರಾಮಕ್ಕೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಶ್ರಮಿಸಿದ್ದೇನೆ. ರೈತರ, ಕಾರ್ಮಿಕರ ಮತ್ತು ಬಡವರ ಪರವಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇನೆ. ಆದ್ದರಿಂದ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನನಗೆ ಮತ ನೀಡಿ ತಾಲೂಕಿನ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ ಮಾತನಾಡಿ, ಅನೇಕ ಪ್ರಾಮಾಣಿಕ ಮತ್ತು ನೈತಿಕತೆ ಮೂಲಕ ರಾಜಕಾರಣ ಮಾಡಿದ ರಾಜಕಾರಣಿಗಳು ಕೆಲವು ಚುನಾವಣೆಯಲ್ಲಿ ಸೋತಿದ್ದಾರೆ, ಆದರೆ ಸೋಲೇ ಅಂತಿಮವಲ್ಲ. ಆದ್ದರಿಂದ ನೈತಿಕತೆ ಹೊಂದಿರುವ ರಾಜಕಾರಣಿಗಳನ್ನು ಸದಾ ನೆನಪಿಸಿಕೊಳ್ಳುತ್ತಾರೆ. ಈ ಸಾಲಿನಲ್ಲಿ ಮಾಜಿ ಸಚಿವರಾದ ಕೆ.ವೆಂಕಟೇಶ್ ನಿಂತಿದ್ದಾರೆ, ಆದ್ದರಿಂದ ಇವರ ಗೆಲುವಿಗೆ ತಾ ಲ್ಲೂಕಿನ ಜನತೆ ಶ್ರಮಿಸಬೇಕು ಎಂದರು. ಸಮಾವೇಶದಲ್ಲಿ ಕುರುಬ ಸಮುದಾಯದ ಅಧ್ಯಕ್ಷ ಎಚ್. ಡಿ.ಗಣೇಶ್, ತಾ ಪಂ ಮಾಜಿ ಸದಸ್ಯ ಟಿ. ಈರಯ್ಯ, ಭುಜಂಗ, ವಕೀಲ ಜವರೇಗೌಡ ಮಾತನಾಡಿದರು ಹಾಗೂ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಬೈಕ್ ರ್‍ಯಾಲಿ ನಡೆಸಿದರು. ಕಾಂಗ್ರೆಸ್ ಪಕ್ಷಕ್ಕೆ ವಿವಿಧ ಗ್ರಾಮದ ಮುಖಂಡರು ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಮಾಜಿ ತಾ ಪಂ ಸದಸ್ಯ ಮುತ್ತುರಾಜ್, ಗ್ರಾಪಂ ಸದಸ್ಯರಾದ ಶೃತಿ, ಯಮುನಾ, ರಾಜೇಶ್ವರಿ, ರಘು, ಕೆಪಿಸಿಸಿ ಸದಸ್ಯ ಅನಿಲ್ ಕುಮಾರ ಇದ್ದರು.

ಬೃಹತ್ ಉದ್ಯೋಗ ಮೇಳ
ಬೆಂಗಳೂರು ಪ್ರತಿಷ್ಠಿತ ಕಂಪನಿಗಳಲ್ಲಿ
ಉದ್ಯೋಗವಕಾಶಗಳು
ಯುವಕ ಅಭ್ಯರ್ಥಿಗಳಿಗೆ ಮಾತ್ರ
ದಿನಾಂಕ : 26-02-2023ನೇ ಭಾನುವಾರ
ಸಮಯ ಬೆಳಗ್ಗೆ 9-00 ರಿಂದ ಮದ್ಯಾಹ್ನ 2-00 ಗಂಟೆವರೆಗೆ
ಸ್ಥಳ : ಶ್ರೀ ಕೆಂಪಮ್ಮದೇವಿ ದೇವಾಲಯದ ಆವರಣ ಹಾಲ್ಕುರಿಕೆ, ತಿಪಟೂರು ತಾ||



ವಿದ್ಯಾರ್ಹತೆ
Technical Group
ITI, Deplomo, BE
Salary : 22,516/- to 24,440/-
Non Technical Group
SSLC, PUC, Any Degree
Salary : 18,486/-
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
8861922919
9353632724
ಆಯೋಜಕರು
ಲಿಂಗರಾಜು ಎಂ.ಸಿ.
ಸಮಾಜ ಸೇವಕರು ಹಾಗೂ ವಿದ್ಯಾರ್ಥಿ ಮಿತ್ರ
ಮಾಯಗೊಂಡನಹಳ್ಳಿ, ತಿಪಟೂರು ತಾ||

UK Since 1997 ಉದಯಕಾಲ
ಅನಿಕೇತನ ಪಬ್ಲಿಕೇಷನ್ ಅಂಡ್ ಪ್ರಿಂಟರ್ಸ್
# 730/A-1, 'ವೃದ್ಧಿ' 2ನೇ ಮಹಡಿ, ನಾಗರಭಾವಿ 2ನೇ ಹಂತ,11ನೇ ಬ್ಲಾಕ್, ಬೆಂಗಳೂರು- 560072.
080 - 29558575

ಜಾಹೀರಾತಿಗಾಗಿ ಸಂಪರ್ಕಿಸಿ
ಪುಟ್ಟಪ್ಪ ಬಿ.ಬಾಣದ: 98867 74482
ಕಛೇರಿ: 63643 03377
ಪತ್ರಿಕೆ ಬರುತ್ತಿಲ್ಲವೇ ? ಆತ್ಮೀಯ ಓದುಗರೇ, ಉದಯಕಾಲ ಪತ್ರಿಕೆಯ ಚಂದಾದಾರರಾಗಲು ಅಥವಾ ಪತ್ರಿಕೆ ಸರಬರಾಜಿನಲ್ಲಿ ಸಮಸ್ಯೆ ಇದ್ದಲ್ಲಿ ಕೂಡಲೇ ಸಂಪರ್ಕಿಸಿ
ಬೆಂಗಳೂರು: 9980103727, 9611133371
ಬೆಳಗಾವಿ/ಹುಬ್ಬಳ್ಳಿ: 6364303377
ಕಲಬುರಗಿ: 9731775345
ಶಿವಮೊಗ್ಗ : 7349310075



# ವಿಶ್ವಕಪ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಪೈಪೋಟಿ

## ಕೌರ್ ಬಳಗಕ್ಕೆ ಹಿಮಾಲಯದೆತ್ತರದ ಸವಾಲು

**ಕೇಪ್‌ಟೌನ್:** ಮಹಿಳಾ ಟಿ20 ವಿಶ್ವಕಪ್ ತನ್ನ ಕೊನೆಯ ಚರಣ ಪ್ರವೇಶಿಸಿದೆ. ಗುರುವಾರ ನಡೆಯಲಿರುವ ಸೆಮಿಫೈನಲ್ ಕಾಳಗದಲ್ಲಿ ಹಾಲಿ ರನ್ನರ್ ಅಪ್ ಇಂಡಿಯಾವು ಹಾಲಿ ಚಾಂಪಿಯನ್ ಆಸ್ಟ್ರೇಲಿಯಾದ ಸವಾಲು ಎದುರಿಸಲಿದೆ.

ಭಾರತ ಸೆಮಿಫೈನಲ್‌ಗೆ ಪ್ರವೇಶ ಪಡೆದಿದ್ದರೂ ಹಲವು ವಿಚಾರಗಳಲ್ಲಿ ಕುಂದು-ಕೊರತೆಗಳು ಢಾರಾಳವಾಗಿವೆ.

ಲೀಗ್ ಹಂತದಲ್ಲಿ ಇಂಗ್ಲೆಂಡ್ ವಿರುದ್ಧ ಸೋಲು ಅನುಭವಿಸಿದ್ದ ಭಾರತ ಈ ಬಾರಿ ಪ್ರಶಸ್ತಿ ಗೆಲ್ಲುವ ಕನಸು ನನಸು ಮಾಡಿಕೊಳ್ಳಬೇಕಿದ್ದರೆ ಸುಧಾರಿತ ಪ್ರದರ್ಶನ ನೀಡಬೇಕಾದ ಅನಿವಾರ್ಯತೆ ಇದೆ.

**ಸ್ಮೃತಿ ಮಂಧಾನ ಮೇಲೆ ಅವಲಂಬನೆ**

ಭಾರತದ ಆರಂಭಿಕ ಆಟಗಾರ್ತಿ ಹಾಗೂ ಉಪನಾಯಕಿ ಸ್ಮೃತಿ ಮಂಧಾನ ಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿ 87 ರನ್‌ಗಳ ಕೊಡುಗೆ ನೀಡಿದ್ದು ನಾಕೌಟ್ ಪಂದ್ಯಕ್ಕೂ ಮುನ್ನ ಭಾರತ ತಂಡದ ಆತ್ಮವಿಶ್ವಾಸ ಹೆಚ್ಚಿಸಿದೆ.

ಆದರೆ ಅಗ್ರ ಕ್ರಮಾಂಕದ ಇತರ ಬ್ಯಾಟರ್‌ಗಳ ಪ್ರದರ್ಶನ ಅಷ್ಟೇ ಕಳವಳ ಮೂಡಿಸಿದೆ. ಇಂಗ್ಲೆಂಡ್ ವಿರುದ್ಧ ಅನುಭವಿಸಿದ 11 ರನ್‌ಗಳ ಸೋಲು ಭಾರತದ ಕಳಪೆ ಸ್ಟ್ರೈಕ್‌ರೇಟ್‌ನ ಪರಿಣಾಮದ ಫಲಿತಾಂಶ ಎಂಬುದು ಕೂಡ ಸ್ಪಷ್ಟವಾಗಿದೆ.

ದಕ್ಷಿಣ ಆಫ್ರಿಕಾ ನೆಲದಲ್ಲಿ ಶಫಾಲಿ ವರ್ಮಾ ತಮ್ಮ ಸಹಜ ಶೈಲಿಯಲ್ಲಿ ಬ್ಯಾಟ್ ಬೀಸಲು ಸಾಧ್ಯವಾಗಬೇಕಿದೆ. ನಾಯಕಿ ಹರ್ಮನ್ ಪ್ರೀತ್ ಕೌರ್ ಬ್ಯಾಟ್‌ನಿಂದಲೂ ಸರಾಗವಾಗಿ ರನ್‌ಹರಿದು ಬರುವ ಅಗತ್ಯವಿದೆ.

ರಿಚಾ ಘೋಷ್ ಈ ಟೂರ್ನಿಯಲ್ಲಿ ಭಾರತದ ಪರವಾಗಿ ಅದ್ಭುತ ಪ್ರದರ್ಶನ ನೀಡಿದ ಆಟಗಾರ್ತಿ. ಒತ್ತಡದ ಸಂದರ್ಭದಲ್ಲಿಯೂ ರಿಚಾ ಅದ್ಭುತವಾಗಿ ಬ್ಯಾಟಿಂಗ್ ಪ್ರದರ್ಶಿಸಿ ಗಮನಸೆಳೆದಿದ್ದಾರೆ.

ಮೊದಲ ಎರಡು ಪಂದ್ಯಗಳಲ್ಲಿ ಪಾಕಿಸ್ತಾನ ಹಾಗೂ ವೆಸ್ಟ್ ಇಂಡೀಸ್ ವಿರುದ್ಧದ ಗೆಲುವಿನಲ್ಲಿ ರಿಚಾ ಪಾತ್ರ ಮಹತ್ವದ್ದಾಗಿತ್ತು. ಐದನೇ ಕ್ರಮಾಂಕದಲ್ಲಿ ರಿಚಾ ಅದ್ಭುತವಾಗಿ ಪ್ರದರ್ಶನ ನಿಡುತ್ತಿದ್ದಾರೆ.

ಆದರೆ ಅವರಿಗೆ ಮಧ್ಯಮ ಕ್ರಮಾಂಕದಲ್ಲಿ ಇತರ ಬ್ಯಾಟರ್‌ಗಳಿಂದ ನೆರವು ದೊರೆಯುತ್ತಿಲ್ಲ ಎಂಬುದು ಕೂಡ ಅಷ್ಟೇ ನಿಜ.

ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ 14 ಎಸೆತಗಳಲ್ಲಿ 34 ರನ್‌ಗಳನ್ನು ಗಳಿಸುವ ಸವಾಲು ಭಾರತದ ಮುಂದಿದ್ದಾಗ ಭಾರತ ಮುಂದಿನ 8 ಎಸೆತಗಳಲ್ಲಿ ಗಳಿಸಿದ್ದು ಕೇವಲ 3 ರನ್ ಮಾತ್ರ.

ಕೆಳ ಮಧ್ಯಮ ಕ್ರಮಾಂಕದ ಈ ಪ್ರದರ್ಶನ ನಿಜಕ್ಕೂ ಆತಂಕ ಮೂಡಿಸಿದೆ. ಇನ್ನು ಆಲ್‌ರೌಂಡರ್‌ಗಳಾದ ದೀಪ್ತಿ ಶರ್ಮಾ ಹಾಗು ಪೂಜಾ ವಸ್ತ್ರಾಕರ್ ಬ್ಯಾಟಿಂಗ್‌ನಲ್ಲಿಯೂ ನೆರವಿಗೆ ನಿಲ್ಲುವ ಅಗತ್ಯವನ್ನು ಅರ್ಥ ಮಾಡಿಕೊಳ್ಳಬೇಕಿದೆ.

ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ಮಹಿಳಾ ವಿಶ್ವಕಪ್‌ನಲ್ಲಿ ಇತರ ಬಹುತೇಕ ರಾಷ್ಟ್ರಗಳ ಸ್ಪಿನ್ನರ್‌ಗಳು ಅದ್ಭುತ ಪ್ರದರ್ಶನ ನೀಡಿದ್ದಾರೆ.

ಆದರೆ ಭಾರತದ ಸ್ಪಿನ್ನರ್‌ಗಳ ಪ್ರದರ್ಶನ ಮಾತ್ರ ಅಸ್ಥಿರವಾಗಿರುವುದು ತಂಡಕ್ಕೆ ದೊಡ್ಡ ಹಿನ್ನಡೆ. ಎಡಗೈ ಸ್ಪಿನ್ನರ್ ರಾಜೇಶ್ವರಿ ಗಾಯಕ್ವಾಡ್ ಈ ಟೂರ್ನಿಯಲ್ಲಿ ಒಂದೇ ಒಂದು ವಿಕೆಟ್ ಪಡೆಯಲು ಸಾಧ್ಯವಾಗಿಲ್ಲ.

ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ ದೀಪ್ತಿ ಶರ್ಮಾ ಅದ್ಭುತ ಪ್ರದರ್ಶನ ನೀಡಿದ್ದರು ಕೂಡ ಇಂಗ್ಲೆಂಡ್ ವಿರುದ್ಧ ನಾಲ್ಕು ಓವರ್‌ಗಳಲ್ಲಿ 37 ರನ್ ನೀಡಿ ದುಬಾರಿಯಾಗಿದ್ದರು.

ರಾಧಾ ಯಾದವ್ ಗಮನಸೆಳೆದಿದ್ದರು ಕೂಡ ಉಳಿದ ಸ್ಪಿನ್ನರ್‌ಗಳ ಪ್ರದರ್ಶನ ಪ್ರಶ್ನೆಗಳನ್ನುಂಟು ಮಾಡಿದ್ದು ಸ್ನೇಹ್ ರಾಣಾ ಅವರಂತಾ ಆಟಗಾರ್ತಿ ಆಡುವ ಬಳಗದಿಂದ ಹೊರಗುಳಿಯುವಂತಾಗಿರುವುದು ವಿಪರ್ಯಾಸ.

**ಭಾರತ:** ಹರ್ಮನ್‌ಪ್ರೀತ್ ಕೌರ್(ನಾಯಕಿ), ಸ್ಮೃತಿ ಮಂಧಾನ, ಶಫಾಲಿ ವರ್ಮಾ, ಯಾಸ್ತಿಕಾ ಭಾಟಿಯಾ, ರಿಚಾ ಘೋಷ್, ಜೆಮಿಮಾ ರಾಡ್ರಿಗಸ್, ಹರ್ಲೀನ್ ಡಿಯೋಲ್, ದೀಪ್ತಿ ಶರ್ಮಾ, ದೇವಿಕಾ ವೈದ್ಯ, ರಾಧಾ ಯಾದವ್, ರೇಣುಕಾ ಠಾಕೂರ್ ಸಿಂಗ್, ಅಂಜಲಿ ಸರ್ವಾಣಿ, ಪೂಜಾ ವಸ್ತ್ರಾಕರ್, ರಾಜೇಶ್ವರಿ ಗಾಯಕ್ವಾಡ್, ಶಿಖಾ ಪಾಂಡೆ

**ಆಸ್ಟ್ರೇಲಿಯಾ:** ಮೆಗ್ ಲ್ಯಾನಿಂಗ್ (ನಾಯಕಿ), ಅಲಿಸ್ಸಾ ಹೀಲಿ (ವಿಕೆಟ್ ಕೀಪರ್), ಡಾರ್ಸಿ ಬ್ರೌನ್, ಆಶ್ಲೀ ಗಾರ್ಡ್ನರ್, ಕಿಮ್ ಗಾರ್ತ್, ಹೀದರ್ ಗ್ರಹಾಂ, ಗ್ರೇಸ್ ಹ್ಯಾರಿಸ್, ಜೆಸ್ ಜೊನಾಸೆನ್, ಅಲಾನಾ ಕಿಂಗ್, ತಹ್ಲಿಯಾ ಮೆಕ್‌ಗ್ರಾತ್, ಬೆತ್ ಮೂನಿ, ಎಲ್ಲಿಸ್ ಪೆರ್ರಿ, ಮೇಗನ್ ಶುಟ್, ಅನ್ನಾಬೆಲ್ ಸದರ್ ಲ್ಯಾಂಡ್, ಜಾರ್ಜಿಯಾ ವೇರ್‌ಹ್ಯಾಮ್



# ಆನ್‌ಲೈನ್ ಚೆಸ್ ಲೀಗ್ : ಕಾರ್ಲ್‌ಸನ್ ಮಣಿಸಿದ ವಿದಿತ್

**ಹೊಸದೆಹಲಿ:** ಗ್ರ್ಯಾಂಡ್ ಮಾಸ್ಟರ್ ವಿದಿತ್ ಗುಜರಾತಿ ಅವರು ಪ್ರೊ ಚೆಸ್ ಲೀಗ್ ಆನ್‌ಲೈನ್ ಪಂದ್ಯದಲ್ಲಿ ನಾರ್ವೆಯ ಚೆಸ್ ಮಾಂತ್ರಿಕ ಮ್ಯಾಗ್ನಸ್ ಕಾರ್ಲ್‌ಸನ್‌ರನ್ನು ದಿಗ್ಭ್ರಮೆಗೊಳಿಸಿ ಅಚ್ಚರಿಯ ಫಲಿತಾಂಶ ಒದಗಿಸಿದ್ದಾರೆ.

ಇದೇ ವೇಳೆ ವಿದಿತ್ ಅವರು ಇತ್ತೀಚಿನ ದಿನಗಳಲ್ಲಿ ಕಾರ್ಲ್‌ಸನ್ ವಿರುದ್ಧ ಜಯ ಸಾಧಿಸಿದ ನಾಲ್ಕನೇ ಭಾರತೀಯ ಎನಿಸಿದರು.

ಟೀಮ್ ಇಂಡಿಯನ್ ಯೋಗಿಸ್‌ಗಾಗಿ ಆಡುತ್ತಿರುವ ಗುಜರಾತಿ ಅವರು ವಿಶ್ವದ ನಂಬರ್ ಒನ್ ಕಾರ್ಲ್‌ಸೆನ್ ಮಾಡಿದ ತಪ್ಪಿನ ಲಾಭ ಮಾಡಿಕೊಂಡರು.

ಪ್ರೊ ಚೆಸ್ ಲೀಗ್‌ನಲ್ಲಿ ಕಾರ್ಲ್‌ಸನ್ ಕೆನಡಾ ಚೆಸ್‌ಬ್ರಾಹ್ಸ್‌ಗಾಗಿ ಆಡುತ್ತಿದ್ದರು. ಈವೆಂಟ್‌ನಲ್ಲಿ 16 ತಂಡಗಳು ಕ್ಷಿಪ್ರ ಆಟಗಳನ್ನು ಆಡುತ್ತವೆ ಮತ್ತು 150,000 ಡಾಲರ್ ಬಹುಮಾನ ಹಣ ಪಡೆಯಲಿವೆ.

ಗುಜರಾತಿ ಅವರು ತಮ್ಮ ಪ್ರಸಿದ್ಧ ಎದುರಾಳಿಯ ಎದುರು ಕಪ್ಪು ಕಾಯಿಯಿಂದೊಗೆ ಆಡಿ ಗೆದ್ದದ್ದು ಗಮನಾರ್ಹವಾಗಿತ್ತು. ಇದಕ್ಕಾಗಿ ಅವರು ಅನುಸರಿಸಿದ ರಣನೀತಿಯೂ ಮೆಚ್ಚಿಕೆಕ್ಕೆ ಅಂಶವಾಗಿತ್ತು.

28ರ ಹರೆಯದ ಗುಜರಾತಿಯು ಕಾರ್ಲ್‌ಸನ್‌ರನ್ನು ಸೋಲಿಸುವ ಮೂಲಕ ಆ ಸಾಧನೆ ಮಾಡಿದ ಭಾರತದ ಸಹವರ್ತಿ ಜಿಎಂಗಳಾದ ಆರ್ ಪ್ರಗ್ನಾನಂದ, ಡಿ ಗುಕೇಶ್ ಮತ್ತು ಅರ್ಜುನ್ ಎರಿಗೈಸಿ ಅವರನ್ನು ಸೇರಿಕೊಂಡರು.

ಈ ಮೂವರು ಕಳೆದ ವರ್ಷ ವಿವಿಧ ಪಂದ್ಯಾವಳಿಗಳಲ್ಲಿ ನಾರ್ವೆಯ ಸೂಪರ್ ಸ್ಟಾರ್ ವಿರುದ್ಧ ಗೆಲುವು ಸಾಧಿಸಿದ್ದರು.

ಪ್ರೊ ಚೆಸ್ ಲೀಗ್ ಪಂದ್ಯದಲ್ಲಿ ಗುಜರಾತಿ ನೇತೃತ್ವದ ವೈಶಾಲಿ, ರೌನಕ್ ಮತ್ತು ಆರೋನ್ಯಾಕ್ ಅವರನ್ನೊಳಗೊಂಡ ಭಾರತ ತಂಡವು ಕಾರ್ಸ್ಟೆನ್, ಆರ್ಯನ್ ತಾರಿ, ರಜ್ಞಾನ್ ಪ್ರೋತು ಮತ್ತು ಜೆನ್ನಿಫರ್ ಯು ವಿರುದ್ಧ ಗೆದ್ದು ಕೇವಲ ಒಂದು ಅಂಕದ ಹಿನ್ನಡೆಯೊಂದಿಗೆ ಅಂತಿಮ ಸುತ್ತಿಗೆ ಪ್ರವೇಶಿಸಿತು.

ಮೊದಲು 8.5 ಅಂಕಗಳನ್ನು ಗಳಿಸಿದ ತಂಡವು ಪಂದ್ಯವನ್ನು ಗೆಲ್ಲುತ್ತದೆ. ಮತ್ತು ಯೋಗಿಗಳು ಎಲ್ಲಾ ನಾಲ್ಕು ಬೋರ್ಡ್‌ಗಳಲ್ಲಿ ಗೆಲ್ಲುವ ಮೂಲಕ ಕೋಷ್ಟಕಗಳನ್ನು ತಿರುಗಿಸಿದರು.

# ಬಾಂಗ್ಲಾಗೆ ಗುದ್ದು ನೀಡಿ ಸೆಮಿಗೆ ಆಫ್ರಿಕಾ

**ಕೇಪ್‌ಟೌನ್:** ಲಾರಾ ವೊಲ್ವಾರ್ಡ್ಟ್ ಮತ್ತು ತಜ್ಮಿನ್ ಬ್ರಿಟ್ಸ್ ತಮ್ಮ ಅಜೇಯ ಶತಕದ ಆರಂಭಿಕ ಪಾಲುದಾರಿಕೆಯಲ್ಲಿ ಅಜೇಯ ಅರ್ಧಶತಕಗಳನ್ನು ಬಾರಿಸಿದರು.

ದಕ್ಷಿಣ ಆಫ್ರಿಕಾವು ಬಾಂಗ್ಲಾದೇಶವನ್ನು 10 ವಿಕೆಟ್‌ಗಳಿಂದ ಸೋಲಿಸಿ ಮಹಿಳಾ ಟಿ20 ವಿಶ್ವಕಪ್‌ನ ಸೆಮಿಫೈನಲ್ ತಲುಪಿತು.

ಎಲ್ಲಾ ನಾಲ್ಕು ಪಂದ್ಯಗಳನ್ನು ಗೆದ್ದ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ಅಗ್ರ ಸ್ಥಾನ ಪಡೆದರೇ, ಗುಂಪಿನಿಂದ ಎರಡನೇ ತಂಡವಾಗಿ ಸೆಮಿಫೈನಲ್ ತಲುಪಿದರು.

ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್ ಮತ್ತು ಶ್ರೀಲಂಕಾ ತಂಡಗಳು ತಲಾ ನಾಲ್ಕು ಪಾಯಿಂಟ್‌ಗಳೊಂದಿಗೆ ತಮ್ಮ ಗುಂಪಿನ ವಹಿವಾಟು ಕೊನೆಗೊಳಿಸಿದವು.

ಆದರೆ ಆತಿಥೇಯರು +0.738 ರ ಅತ್ಯುತ್ತಮ ನಿವ್ವಳ ರನ್ ರೇಟ್ ಹೊಂದಿದ್ದ ಕಾರಣ ಸೆಮಿಫೈನಲ್‌ಗೆ ಪ್ರವೇಶಿಸಿದರು.

ಮೊದಲು ಬ್ಯಾಟ್ ಮಾಡಿದ ಬಾಂಗ್ಲಾದೇಶವು ತವರಿನ ದಾಳಿಕಾರರ ಪರಿಣಾಮಕಾರಿ ಪ್ರದರ್ಶನ ಕಾರಣ ತಿಣುಕಾಡಿ ಅಂತೂ ಇಂತೂ 20 ಓವರುಗಳಲ್ಲಿ 113 ರನ್‌ಗಳ ತೀರಾ ಅಲ್ಪ ಮೊತ್ತ ಕಲೆ ಹಾಕಿದರು.

ಈ ತಲಿಲ್ಪ ಮೊತ್ತವನ್ನು ಬೆನ್ನಟ್ಟಿದ ಆಫ್ರಿಕಾ ವಿಕೆಟ್ ಕಳೆದುಕೊಳ್ಳದಿದ್ದರೂ ರನ್ ಗಳಿಸಲು ಪರದಾಡಿತು. ಆರಂಭಿಕ ಜೋಡಿಯು 10 ಓವರುಗಳಲ್ಲಿ ಬೇರ್ಪಡದೆ ಕೇವಲ 43 ರನ್ ಗಳಿಸಿತ್ತು.

ಆದರೆ ಆ ಬಳಿಕ ಮೈಛಳಿ ಬಿಟ್ಟು ಆಡುವ ಮೂಲಕ ಶತಕದ ಜೊತೆಯಾಟ ನಿಭಾಯಿಸಿ ತಂಡಕ್ಕೆ ಸೆಮಿಯ ಹಾದಿ ತೋರಿದರು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 113 (ನಿಗರ್ ಸುಲ್ತಾನಾ ಜೋಟಿ 30, ಶೋಭಾನಾ ಮೊಸ್ತರಿ 27; ಮರಿಜಾನ್ನೆ ಕಪ್ 2/17, ಅಯಾಬೊಂಗಾ ಖಾಕಾ 2/21)

ದಕ್ಷಿಣ ಆಫ್ರಿಕಾ 17.5 ಓವರ್‌ಗಳಲ್ಲಿ ಯಾವುದೂ ವಿಕೆಟ್ ನಷ್ಟವಿಲ್ಲದೇ 117 (ಲಾರಾ ವೊಲ್ವಾರ್ಡ್ ಔಟಾಗದೆ 66, ತಜ್ಮಿನ್ ಬ್ರಿಟ್ಸ್ ಔಟಾಗದೆ 50; ಮಾರುಫಾ ಅಕ್ತರ್ 0/19, ಫಾಹಿಮಾ ಖಾತುನ್ 0/22)



# ಟಾಪ್‌ಟೆನ್ ಬೌಲರುಗಳ ಪಟ್ಟಿಗೆ ಜಡೇಜಾ



**ದುಬೈ:** ದೆಹಲಿಯಲ್ಲಿ ನಡೆದ ಎರಡನೇ ಟೆಸ್ಟ್‌ನಲ್ಲಿ ಆಸ್ಟ್ರೇಲಿಯ ವಿರುದ್ಧ 10 ವಿಕೆಟ್‌ಗಳನ್ನು ಗಳಿಸಿದ ನಂತರ ರವೀಂದ್ರ ಜಡೇಜಾ ಐಸಿಸಿ ಟೆಸ್ಟ್ ಬೌಲಿಂಗ್ ಶ್ರೇಯಾಂಕದಲ್ಲಿ ಒಂಬತ್ತನೇ ಸ್ಥಾನವನ್ನು ಗಳಿಸಿದ್ದಾರೆ.

ವಿಶ್ವದ ನಂ. 1 ಟೆಸ್ಟ್ ಆಲ್‌ರೌಂಡರ್ ಆಗಿರುವ ಜಡೇಜಾ ಇದೇ ಮೊದಲ ಬಾರಿಗೆ ಬೌಲರ್‌ಗಳ ಶ್ರೇಯಾಂಕದಲ್ಲಿ ಟಾಪ್-10 ಪಟ್ಟಿ ಸೇರಿದ್ದಾರೆ.

ಅವರ ಸ್ಪಿನ್ ಜೊತೆಗಾರ ರವಿಚಂದ್ರನ್ ಅಶ್ವಿನ್ ಟೆಸ್ಟ್ ಆಲ್‌ರೌಂಡರ್‌ಗಳ ಶ್ರೇಯಾಂಕದಲ್ಲಿ ಎರಡನೇ ಸ್ಥಾನಕ್ಕೆ ತೆರಳಿದ್ದಾರೆ ಮತ್ತು ಭಾರತದ ಇನ್ನೊಬ್ಬ ಸ್ಪಿನ್ನರ್ ಅಕ್ಷರ್ ಪಟೇಲ್ ಐದನೇ ಸ್ಥಾನಕ್ಕೆ ಬಂದಿದ್ದಾರೆ. ಆಸ್ಟ್ರೇಲಿಯದ ನಾಥನ್ ಲಿಯಾನ್ ಅವರು ದಿಲ್ಲಿ ಟೆಸ್ಟ್ ಪ್ರದರ್ಶನದ ನಂತರ ಎರಡು ಸ್ಥಾನಗಳನ್ನು ಗಳಿಸಿ 15 ನೇ ಸ್ಥಾನವನ್ನು ತಲುಪಿದ್ದಾರೆ.

ಇಂಗ್ಲೆಂಡ್ ಟೆಸ್ಟ್ ತಂಡದ ವೇಗದ ಬೌಲರ್ ಜೇಮ್ಸ್ ಆಂಡರ್ಸನ್ ಅಗ್ರಸ್ಥಾನಕ್ಕೇರಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಮೊದಲನೇ ಅತ್ಯುತ್ತಮ ಪ್ರದರ್ಶನ ನೀಡಿದ ನಂತರ ಅವರು ಮೊದಲ ಸ್ಥಾನವನ್ನು ಅಲಂಕರಿಸಿದ್ದಾರೆ. ಆಸ್ಟ್ರೇಲಿಯಾ ಟೆಸ್ಟ್ ತಂಡದ ನಾಯಕ, ಮಾರಕ ವೇಗಿ ಪ್ಯಾಟ್ ಕಮಿನ್ಸ್ 1466 ದಿನಗಳ ಕಾಲ ನಂಬರ್ 1 ಸ್ಥಾನವನ್ನು ಅಲಂಕರಿಸಿದ ಬಳಿಕ, ಮೂರನೇ ಸ್ಥಾನಕ್ಕೆ ಕುಸಿತ ಕಂಡಿದೆ.

# ಇದ್ದಾಗ ಅನುಭವಿಸಿ ಈಗ ತೆಗಳುವುದು ಎಷ್ಟು ಸರಿ: ಟಿಎಂಸಿ ಪ್ರಶ್ನೆ

**ನವದೆಹಲಿ:** ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಅವರನ್ನು ಕಾಂಗ್ರೆಸ್ ಬುಧವಾರ ವಾಗ್ದಾಳಿ ನಡೆಸಿದ್ದು, ಅವರನ್ನು ''ವಿಫಲ'' ಸಚಿವ ಎಂದು ಬಣ್ಣಿಸಿದೆ.

ಇದೇ ವೇಳೆ ಟಿಎಂಸಿ ಸೇರಿದಂತೆ ಹಲವು ವಿರೋಧ ಪಕ್ಷಗಳು ಸಹಾ ಜೈಶಂಕರ್ ಅವರ ಇತ್ತೀಚಿನ ಹೇಳಿಕೆಗಳನ್ನು ಟೀಕಿಸಿವೆ.

ಚೀನಾದ ಬಗ್ಗೆ ಅವರ ಹೇಳಿಕೆಗಳು ಭಾರತದ ಸಶಸ್ತ್ರ ಪಡೆಗಳ ಶೌರ್ಯವನ್ನು ಕುಗ್ಗಿಸುತ್ತಿವೆ ಮತ್ತು ಅವರ ನೈತಿಕತೆಯನ್ನು ಕಡಿಮೆ ಮಾಡುತ್ತಿವೆ ಎಂದು ಕಾಂಗ್ರೆಸ್ ಆರೋಪಿಸಿದೆ.

''ನಾಮ್ಮದು ಚಿಕ್ಕ ಆರ್ಥಿಕತೆ ಮತ್ತು ಚೀನಾ ದೊಡ್ಡ ಆರ್ಥಿಕತೆ ಮತ್ತು ನಾವು ಅವರೊಂದಿಗೆ ಜಗಳವಾಡಲು ಹೋಗುವುದಿಲ್ಲ'' ಎಂದು ಹೇಳುವ ಮೂಲಕ ಜೈಶಂಕರ್ ದೇಶನಿಂದನೆಯ ಹೇಳಿಕೆ ನೀಡಿದ್ದಾರೆ ಎಂದು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರಿನಾಥೆ ಹೇಳಿದ್ದಾರೆ.

ಇದನ್ನು ಉದ್ಯಮಿಯೊಬ್ಬರಿಗೆ ಗುತ್ತಿಗೆ ಪಡೆಯಲು ಬಳಸಲಾಗುತ್ತಿದೆ ಎಂದು ಅವರು ಆರೋಪಿಸಿದರು. ''ಅವರು ಹಾಗೆ ಹೇಳುವ ಮೂಲಕ ನಿಖರವಾಗಿ ಏನು ಅರ್ಥೈಸುತ್ತಾರೆ. ನಮ್ಮ ಪ್ರಾದೇಶಿಕ ಸಾರ್ವಭೌಮತ್ವವನ್ನು ರಕ್ಷಿಸಲು ನಾವು ಸಮರ್ಥರಲ್ಲ ಎಂದು ಅವರು ನಮಗೆ ಹೇಳುತ್ತಿದ್ದಾರೆಯೇ,'' ಜೈಶಂಕರ್ ಅವರು ''ವಿಫಲ ವಿದೇಶಾಂಗ ಸಚಿವರು'' ಎಂದು ಆರೋಪಿಸಿದರು.

**ಜೈಶಂಕರ್ ಮೇಲೆ ಮುಗಿಬಿದ್ದ ವಿಪಕ್ಷಗಳು**



''ಅವರ ಇಂತಹ ಹೇಳಿಕೆಗಳು ಭಾರತೀಯ ಸೇನೆಯ ವಿಶ್ವಾಸವನ್ನು ಮುರಿಯಲು ಮತ್ತು ಅಲುಗಾಡಿಸಲು ಮತ್ತು ನಮ್ಮ ಸಶಸ್ತ್ರ ಪಡೆಗಳ ಶೌರ್ಯವನ್ನು ಕೀಳಾಗಿಸುವುದಾಗಿದೆ.

ಇದು ಯಾವುದೇ ವಿದೇಶಾಂಗ ಮಂತ್ರಿ ನೀಡಿದ ಅತ್ಯಂತ ಧರ್ಮನಿಂದೆಯ ಹೇಳಿಕೆಯಾಗಿದೆ'' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಚೀನಾದಲ್ಲಿ ಅತಿ ಹೆಚ್ಚು ಕಾಲ ಭಾರತೀಯ ರಾಯಭಾರಿಯಾಗಿ ಸೇವೆ ಸಲ್ಲಿಸಿದ ಜೈಶಂಕರ್ ಅವರ ಹೇಳಿಕೆಗೆ ಕಾಂಗ್ರೆಸ್, ಆ ಸಾಮರ್ಥ್ಯದಲ್ಲಿ 2020 ರ ಏಪ್ರಿಲ್‌ನಿಂದ ಯಥಾಸ್ಥಿತಿಯನ್ನು ಯಾವಾಗ ಮರುಸ್ಥಾಪಿಸಲಾಗುತ್ತದೆ ಎಂದು ಪ್ರಶ್ನಿಸಿದೆ.

''ಪ್ರಧಾನಿ ಮತ್ತು ನೀವು ಚೀನಾದ ಬಗ್ಗೆ ಏಕೆ ಮೌನವಾಗಿರುತ್ತೀರಿ. ನಾವು ಚೀನಾದೊಂದಿಗೆ ವ್ಯಾಪಾರ ಕೊರತೆಯನ್ನು ಏಕೆ ಹೆಚ್ಚಿದೆ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

''ಚೀನಾದಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಭಾರತದ ರಾಯಭಾರಿಯಾಗಿರುವ ನೀವು ಗಡಿಯಲ್ಲಿ ಚೀನಾದ ಆಕ್ರಮಣದ ಬಗ್ಗೆ ಏನು ಹೇಳುತ್ತೀರಿ ಮತ್ತು ಭಾರತೀಯ ಸೈನಿಕರ ಪರಮ ತ್ಯಾಗದ ಬಗ್ಗೆ ಏನು ಹೇಳುತ್ತೀರಿ. ಇದು ನಮ್ಮ ಧೈರ್ಯಶಾಲಿಗಳ ಪರಮ ತ್ಯಾಗಕ್ಕೆ ನಿಮ್ಮ ಉತ್ತರವೇ'' ಎಂದು ಸುಪ್ರಿಯಾ ಅವರು ಕೇಳಿದರು.

ನೀವು ನಿಮ್ಮ ರಾಜಕೀಯ ವಿರೋಧಿಗಳ ಮೇಲೆ ದಾಳಿ ಮಾಡಬಹುದು ಆದರೆ ನಮ್ಮ ರಾಷ್ಟ್ರೀಯ ಭದ್ರತೆಯ ವೆಚ್ಚದಲ್ಲಿ ಇದನ್ನು ಮಾಡಬೇಡಿ, ''ಕೆಲವು ವಿಷಯಗಳು ಪವಿತ್ರವಾಗಿವೆ'' ಎಂದು ಅವರು ಹೇಳಿದರು.

ಇದೇ ವೇಳೆ ಕಾಂಗ್ರೆಸ್ ಅವಧಿಯಲ್ಲಿ ಎಲ್ಲ ಐಭೋಗಗಳನ್ನು (ಉನ್ನತ ನೇಮಕಾತಿ) ಅನುಭವಿಸಿ ಈಗ ತೆಗಳುವುದು ಎಷ್ಟು ಸರಿ ಎಂದು ಟಿಎಂಸಿ ಸಂಸದ ಜವಾಹರ್ ಸರ್ಕಾರ್ ತೆಗಳಿದ್ದಾರೆ.

# ಕೊನೆಗೂ ದೆಹಲಿಗೆ ಆಪ್ ಮೇಯರ್: ಫಲಿಸದ ಬಿಜೆಪಿ ಆಸೆ

**ದೆಹಲಿ:** ಆಪ್‌ನ ಶೆಲ್ಲಿ ಒಬೆರಾಯ್ ಅವರು ಕೊನೆಗೂ ದಿಲ್ಲಿಯ ಮೇಯರ್ ಆಗಿ ಆಯ್ಕೆಯಾಗಿದ್ದಾರೆ. ಈ ಹುದ್ದೆಯ ಮೇಲೆ ಕಣ್ಣಿಟ್ಟು ಅದಕ್ಕಾಗಿ ನಾನಾ ತಂತ್ರಗಳನ್ನು ಹೆಣೆದ ಬಿಜೆಪಿಯ ಅಭ್ಯರ್ಥಿಗೆ ಸೋಲುಂಟಾಗಿದೆ. ಬಿಜೆಪಿ ಅಭ್ಯರ್ಥಿ ರೇಖಾ ಗುಪ್ತಾ ಅವರನ್ನು 34 ಮತಗಳ ಅಂತರದಿಂದ ಮಣಿಸಿದ ಆಮ್ ಆದ್ಮಿ ಪಕ್ಷದಅಭ್ಯರ್ಥಿ ಶೆಲ್ಲಿ ಒಬೆರಾಯ್ ದೆಹಲಿ ಮಹಾನಗರ ಪಾಲಿಕೆಯ ಮೇಯರ್ ಆಗಿ ಆಯ್ಕೆಯಾದರು.

ಎಎಪಿಯ ಶೆಲ್ಲಿ ಒಬೆರಾಯ್ 150 ಮತಗಳನ್ನು ಪಡೆದರೆ, ಬಿಜೆಪಿಯ ಪರಾಜಿತ ಅಭ್ಯರ್ಥಿ ರೇಖಾ ಗುಪ್ತಾ 116 ಮತಗಳನ್ನು ಪಡೆದರು. ಒಟ್ಟು 266 ಮತಗಳು ಚಲಾವಣೆಯಾದವು.




ಮಹಾನಗರ ಪಾಲಿಕೆ ಚುನಾವಣೆ ನಡೆದ ಮೊದಲ ಸಭೆಯಲ್ಲೇ ಮೇಯರ್ ಆಯ್ಕೆಯಾಗಬೇಕೆಂಬ ನಿಯಮವಿದ್ದರೂ ಸಹ, ಕಳೆದ ಮೂರು ಭಾರಿ ಗಲಾಟೆ, ಗದ್ದಲ ಮತ್ತು ಚುನಾವಣಾ ಗೊಂದಲಗಳಿಂದಾಗಿ ಮೇಯರ್ ಆಯ್ಕೆ ನಡೆದಿರಲಿಲ್ಲ, 75 ದಿನಗಳ ಬಳಿಕ, ಇದೀಗ ಮೇಯರ್ ಆಯ್ಕೆ ನಡೆದಿದೆ.

ಫಲಿತಾಂಶ ಕುರಿತಂತೆ ಪ್ರತಿಕ್ರಿಯಿಸಿರುವ ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ, ಗೂಂಡಾಗಳಿಗೆ ಸೋಲಾಗಿದೆ. ಜನರಿಗೆ ಗೆಲುವಾಗಿದೆ. ಶುಭಾಶಯಗಳು ಶೆಲ್ಲಿ ಒಬೆರಾಯ್ ಎಂದು ಹೇಳಿದ್ದಾರೆ.

ಮೇಯರ್ ಚುನಾವಣೆ ಶೀಘ್ರ ನಡೆಸಲು ನಿರ್ದೇಶನ ನೀಡಬೇಕೆಂದು ಕೋರಿ ಎಎಪಿಯ ಮೇಯರ್ ಅಭ್ಯರ್ಥಿ ಶೆಲ್ಲಿ ಒಬೆರಾಯ್ ಅವರು ಸುಪ್ರೀಂ ಕೋರ್ಟ್ಗೆ ಅರ್ಜಿ ಸಲ್ಲಿಸಿದ್ದರು.

ಎಂಸಿಡಿಯ ಮುಂದಿನ ಸಭೆಯಲ್ಲೇ ಮೇಯರ್ ಆಯ್ಕೆಗಾಗಿ ಚುನಾವಣೆ ನಡೆಸಬೇಕು ಮತ್ತು ಮೇಯರ್ ಆಯ್ಕೆ ನಡೆದ ಬಳಿಕ ಉಪಮೇಯರ್ ಆಯ್ಕೆ ನಡೆಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಜೆ.ಬಿ. ಪಾರ್ದಿವಾಲಾ ಅವರನ್ನೊಳಗೊಂಡ ಸುಪ್ರೀಂ ಕೋರ್ಟ್ ಪೀಠವು ಫೆಬ್ರುವರಿ 17ರಂದು ನಿರ್ದೇಶನ ನೀಡಿತ್ತು.

ದೆಹಲಿ ಮಹಾನಗರ ಪಾಲಿಕೆಯ(ಎಂಸಿಡಿ) ನಾಮನಿರ್ದೇಶಿತ ಸದಸ್ಯರು ಮೇಯರ್ ಆಯ್ಕೆ ಚುನಾವಣೆಯಲ್ಲಿ ಮತ ಚಲಾಯಿಸುವಂತಿಲ್ಲ ಎಂದೂ ಸುಪ್ರೀಂ ಕೋರ್ಟ್ ಹೇಳಿತ್ತು.

ಮನೀಶ್‌ಗೆ ಸಿಬಿಐ ಬಾಣ:

ಪ್ರತಿ ಪಕ್ಷಗಳ ಮಾಹಿತಿಗೆ ಕನ್ನ ಹಾಕಿದ ಆರೋಪದ ಮೇಲೆ (ಫೀಡ್ಬ್ಯಾಕ್ ಯೂನಿಟ್ ಸ್ನೂಪಿಂಗ್ ಪ್ರಕರಣ) ದೆಹಲಿಯ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಭ್ರಷ್ಟಾಚಾರ ತಡೆ ಕಾಯ್ದೆಯಡಿ ವಿಚಾರಣೆಗೆ ಒಳಪಡಿಸಲು ಕೇಂದ್ರ ಗೃಹ ಸಚಿವಾಲಯ ಅನುಮತಿ ನೀಡಿದೆ. ಪ್ರಕರಣಕ್ಕೆ ಸಂಬಂಧಿಸಿ ಕೇಂದ್ರೀಯ ತನಿಖಾ ದಳ (ಸಿಬಿಐ) ಸಿಸೋಡಿಯಾ ವಿರುದ್ಧ ಹೊಸ ಪ್ರಕರಣ ದಾಖಲಾಗಿದೆ ಎಂದು ವರದಿಯಾಗಿದೆ.

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಸಿಸೋಡಿಯಾ ವಿಚಾರಣೆ ಎದುರಿಸುತ್ತಿದೆ. ಇದರ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ. 2015ರಲ್ಲಿ ದೆಹಲಿಯಲ್ಲಿ ಅಧಿಕಾರಕ್ಕೆ ಬಂದ ನಂತರ, ಆಮ್ ಆದ್ಮಿ ಪಕ್ಷವು ರಾಜಕೀಯ ಗುಪ್ತಚರ ಸಂಗ್ರಹಣೆಗಾಗಿ ಪ್ರತಿಕ್ರಿಯೆ ಘಟಕವನ್ನು ರಚಿಸಿತು ಎಂದು ಹೇಳಲಾಗಿದೆ. ಮನೀಶ್ ಸಿಸೋಡಿಯಾ ಅವರು ಸ್ನೂಪಿಂಗ್ ಘಟಕದ ಮುಖ್ಯಸ್ಥರಾಗಿದ್ದರು ಎಂದು ವರದಿಯಾಗಿದೆ. ಆದರೆ, ಎಪಿ ಈ ಹಿಂದೆ ಆರೋಪಗಳನ್ನು ತಳ್ಳಿಹಾಕಿತ್ತು.

# ತವರಿಗೆ ಮರಳಿದ ಅಗರ್

**ಹೊಸದೆಹಲಿ:** ಆಸ್ಟ್ರೇಲಿಯಾದ ಸ್ಪಿನ್ನರ್ ಆಶ್ಟನ್ ಅಗರ್ ಅವರು ದೇಶೀಯ ಕ್ರಿಕೆಟ್ ಆಡಲು ಭಾರತ ಪ್ರವಾಸದಿಂದ ತವರಿಗೆ ಹಿಂತಿರುಗಿದ್ದಾರೆ.

ಟೆಸ್ಟ್ ತಂಡದಿಂದ ಬಿಡುಗಡೆಯಾದ ನಂತರ ಅವರು ತವರಿಗೆ ಹಾರಿದ್ದಾರೆ ಎಂದು ರಾಷ್ಟ್ರೀಯ ಆಯ್ಕೆಗಾರ ಟೋನಿ ಡೋಡೆಮೈಡ್ ಹೇಳಿದ್ದಾರೆ.

ಅಗರ್ ಅವರು ದೇಶೀಯ ಋತುವಿನ ಮುಕ್ತಾಯದ ಹಂತದಲ್ಲಿ ಪಶ್ಚಿಮ ಆಸ್ಟ್ರೇಲಿಯಾ ಪರ ಆಡಲಿದ್ದಾರೆ.

29 ವರ್ಷದ ಎಡಗೈ ಸ್ಪಿನ್ನರ್ ಪ್ರವಾಸದ ಮಧ್ಯದಲ್ಲಿ ಮನೆಗೆ ಹಿಂದಿರುಗಿದವರ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ.

ನಾಲ್ಕು ಪಂದ್ಯಗಳ ಸರಣಿಯ ಮೊದಲ ಎರಡು ಟೆಸ್ಟ್‌ಗಳಲ್ಲಿ ಸೋತು ಆಸ್ಟ್ರೇಲಿಯಾ ಈಗಾಗಲೇ ದಿಕ್ಕಾಪಾಲಾಗಿದೆ.

ನಾಗ್ಪುರದಲ್ಲಿ ಮೊದಲ ಟೆಸ್ಟ್‌ಗೆ ಆಫ್ ಸ್ಪಿನ್ನರ್ ಟಾಡ್ ಮರ್ಫಿ ಅವರನ್ನು ಆಯ್ಕೆ ಮಾಡಿದ್ದರಿಂದ ಅಗರ್ ಯಾವುದೇ ಪಂದ್ಯವನ್ನು ಆಡದೆ ಮನೆಗೆ ಮರಳಿದ್ದಾರೆ.

ಎರಡನೇ ಟೆಸ್ಟ್‌ನಲ್ಲಿ, ಆಸ್ಟ್ರೇಲಿಯಾ ಮೂವರು ಸ್ಪಿನ್ನರ್‌ಗಳನ್ನು ಆಯ್ಕೆ ಮಾಡಿಕೊಂಡರೂ, ಅಗರ್ ಮತ್ತೆ ಹೊರಗುಳಿದರು, ಬದಲಿಗೆ ಎಡಗೈ ಸ್ಪಿನ್ನರ್ ಮ್ಯಾಥ್ಯೂ ಕುಹ್ನೆಮನ್ ಅವರ ಚೊಚ್ಚಲ ಪಂದ್ಯವನ್ನು ಮಾಡಿದರು.

ಬಾರ್ಡರ್-ಗವಾಸ್ಕರ್ ಟ್ರೋಫಿಯ ಮೂರನೇ ಟೆಸ್ಟ್ ಮಾರ್ಚ್ 1 ರಂದು ಇಂದೋರ್‌ನಲ್ಲಿ ಆರಂಭವಾಗಲಿದೆ. ಅಂತಿಮ ಪಂದ್ಯವು ಮಾರ್ಚ್ 9 ರಿಂದ ಅಹಮದಾಬಾದ್‌ನಲ್ಲಿ ನಡೆಯಲಿದೆ.



# ಕಲ್ಲಿದ್ದಲು ಸ್ಥಾವರ ಯೋಜನೆ ಕೈಬಿಟ್ಟ ಅದಾನಿ

**ಮುಂಬೈ:** ಮಧ್ಯ ಭಾರತದಲ್ಲಿ ಕಲ್ಲಿದ್ದಲು ಸ್ಥಾವರ ಯೋಜನೆಯನ್ನು ಸ್ವಾಧೀನಪಡಿಸಿಕೊಳ್ಳುವ ಯೋಜನೆಯನ್ನು ಅದಾನಿ ಪವರ್ ರದ್ದುಗೊಳಿಸಿದೆ ಮತ್ತು ಈ ವಿಷಯದಲ್ಲಿ ಹೆಚ್ಚಿನ ಬೆಳವಣಿಗೆ ಇಲ್ಲ ಎಂದು ಷೇರು ವಿನಿಮಯ ಕೇಂದ್ರಗಳಿಗೆ ಸ್ಪಷ್ಟಪಡಿಸಿದೆ.

ಈ ಡಿಬಿ ಪವರ್‌ನ ನಿಯಂತ್ರಣವನ್ನು ತೆಗೆದುಕೊಳ್ಳಲು ಅದಾನಿ ಪವರ್ ಸಂಸ್ಥೆಯು 2022ರಲ್ಲಿ 70 ಬಿಲಿಯನ್ ಡಾರಲ್‌ಗೆ ತೆಗೆದುಕೊಳ್ಳಲು ಮುಂದಾಗಿತ್ತು.

ಅದಾನಿ ಪವರ್ ಕಲ್ಲಿದ್ದಲು ಸ್ಥಾವರದ ಸ್ವಾಧೀನವನ್ನು ರದ್ದುಗೊಳಿಸಿದೆ ಎಂಬ ಮಾಧ್ಯಮ ವರದಿಗಳ ನಡುವೆ, ಅದಾನಿ ಪವರ್ ಮಂಗಳವಾರ ತಾನು ಸ್ವಾಧೀನಕ್ಕೆ ಮುಂದಾಗುತ್ತಿಲ್ಲ ಎಂದು ಬಿಎಸ್‌ಇ ಮತ್ತು ಎನ್‌ಎಸ್‌ಇಗೆ ತಿಳಿಸಿದೆ.

ಫೆಬ್ರವರಿ 15 ರಂದು ಒಪ್ಪಂದದ ಅವಧಿ ಮುಗಿದ ನಂತರ ಅದಾನಿ ಗ್ರೂಪ್ ಕಂಪನಿ ಮತ್ತು ಡಿಬಿ ಪವರ್ ವಹಿವಾಟನ್ನು ಮುಂದುವರಿಸದಿರಲು ಪರಸ್ಪರ ಒಪ್ಪಿಕೊಂಡಿವೆ.




ಡಿಬಿ ಪವರ್ ಛತ್ತೀಸ್‌ಗಢದಲ್ಲಿ 1.2-ಗಿಗಾವ್ಯಾಟ್ ಕಲ್ಲಿದ್ದಲು ವಿದ್ಯುತ್ ಯೋಜನೆಯನ್ನು ನಿರ್ವಹಿಸುತ್ತಿದೆ.

# ಬಿಬಿಸಿ ಬೆಂಬಲಕ್ಕೆ ನಿಂತ ಯುಕೆ ಸರಕಾರ

**ಲಂಡನ್:** ಬಿಬಿಸಿ ಕಚೇರಿಗಳ ಮೇಲೆ ತೆರಿಗೆ ಅಧಿಕಾರಿಗಳ ಸರ್ವೇ ನಂತರ ಬ್ರಿಟನ್ ಸರಕಾರವು ಥೃತ್ಯ ಮಾಧ್ಯಮ ಸಂಸ್ಥೆಯ ಬೆಂಬಲಕ್ಕೆ ನಿಂತಿದೆ. ಬ್ರಿಟನ್ ಸರಕಾರವು ಬಿಬಿಸಿಯ ಸಂಪಾದಕೀಯ ಸ್ವಾತಂತ್ರ್ಯವನ್ನು ಬಲವಾಗಿ ಸಮರ್ಥಿಸಿಕೊಂಡಿದೆ.

ಮಂಗಳವಾರ ಹೌಸ್ ಆಫ್ ಕಾಮನ್ಸ್‌ನಲ್ಲಿ ಎತ್ತಲಾದ ತುರ್ತು ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಚಾಲ್ತಿಯಲ್ಲಿರುವ ತನಿಖೆ' ಕುರಿತು ಐಟಿ ಇಲಾಖೆ ಮಾಡಿದ ಆರೋಪಗಳ ಬಗ್ಗೆ ಸರ್ಕಾರವು ಪ್ರತಿಕ್ರಿಯಿಸಲು ಸಾಧ್ಯವಿಲ್ಲ ಎಂದು ವಿದೇಶಾಂಗ, ಕಾಮನ್ವೆಲ್ತ್ ಮತ್ತು ಅಭಿವೃದ್ಧಿ ಕಚೇರಿ ಕಿರಿಯ ಸಚಿವರು ಬ್ರಿಟನ್ ಸಂಸತ್ತಿನ ಕೆಳಮನೆಗೆ ತಿಳಿಸಿದರು.

''ನಾವು ಮಾಧ್ಯಮ ಹಕ್ಕುಗಳಿಗಾಗಿ ನಿಲ್ಲುತ್ತೇವೆ. ನಾವು ಬಿಬಿಸಿಗೆ ಧನಸಹಾಯ ಮಾಡುತ್ತೇವೆ. ಬಿಬಿಸಿಯ ವರ್ಲ್ಡ್ ಸರ್ವಿಸ್ ಪ್ರಮುಖವಾದುದು ಎಂದು ನಾವು ಭಾವಿಸುತ್ತೇವೆ. ಬಿಬಿಸಿಯ ಸಂಪಾದಕೀಯ ಸ್ವಾತಂತ್ರ್ಯವನ್ನು ಹೊಂದಬೇಕೆಂದು ನಾವು ಬಯಸುತ್ತೇವೆ'' ಎಂದು ಸಚಿವ ರುಟ್ಲಿ ಹೇಳಿದರು.

ಬಿಬಿಸಿ ನಮ್ಮನ್ನು (ಸರ್ಕಾರವನ್ನು), ಲೇಬರ್ ಪಕ್ಷವನ್ನು (ವಿರೋಧ) ಟೀಕಿಸುತ್ತದೆ ಮತ್ತು ನಾವು ಆ ಟೀಕೆಯನ್ನು ಮಟ್ಟ ಹಾಕಲು ಹೋಗುವುದಿಲ್ಲ ಎಂದು ಅವರು ಹೇಳಿದ್ದಾರೆ.

# ಯುಎಸ್ ಅಧ್ಯಕ್ಷೀಯ ಚುನಾವಣೆಗೆ ಮತ್ತೋರ್ವ ಭಾರತೀಯ

**ವಾಶಿಂಗ್ಟನ್:** ಭಾರತೀಯ-ಅಮೆರಿಕನ್ ಟೆಕ್ ಉದ್ಯಮಿ ವಿವೇಕ್ ರಾಮಸ್ವಾಮಿ ಅವರು 2024 ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ.

ಚೀನಾದ ಮೇಲಿನ ಅಚೆರಿಕದ ಅವಲಂಬನೆಯನ್ನು ಕೊನೆಗೊಳಿಸುವ ಭರವಸೆಯೊಂದಿಗೆ ಅವರು ತಮ್ಮ ಪ್ರಚಾರ ಪ್ರಾರಂಭಿಸಿದ್ದಾರೆ,

ನಿಕ್ಕಿ ಹ್ಯಾಲಿ ನಂತರ ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಚುಣಾವಣೆಯ ಅಭ್ಯರ್ಥಿಯಾಗುವ ಅರ್ಹತೆಗೆ ಪೈಪೋಟಿಯಲ್ಲಿರುವ ಭಾರತೀಯ ಮೂಲದ ಎರಡನೆಯವರಾಗಿದ್ದಾರೆ.



ರಾಮಸ್ವಾಮಿ (37) ಅವರ ಪೋಷಕರು ಕೇರಳದಿಂದ ಅಮೆರಿಕಕ್ಕೆ ವಲಸೆ ಬಂದು ಒಹಾಯೋದ ಜನರಲ್ ಎಲೆಕ್ಟ್ರಿಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

ರಾಮಸ್ವಾಮಿ ಅವರು ರಿಪಬ್ಲಿಕನ್ ಅಧ್ಯಕ್ಷೀಯ ಪ್ರಾಥಮಿಕವನ್ನು ಪ್ರವೇಶಿಸಿದ ಎರಡನೇ ಭಾರತೀಯ-ಅಮೆರಿಕನ್ ಆಗಿದ್ದಾರೆ.

ಈ ತಿಂಗಳ ಆರಂಭದಲ್ಲಿ, ದಕ್ಷಿಣ ಕೆರೊಲಿನಾದ ಎರಡು ಅವಧಿಯ ಮಾಜಿ ಗವರ್ನರ್ ಮತ್ತು ವಿಶ್ವಸಂಸ್ಥೆಯ ಮಾಜಿ ಯುಎಸ್ ರಾಯಭಾರಿ, ಹ್ಯಾಲಿ ತನ್ನ ಅಧ್ಯಕ್ಷೀಯ ಪ್ರಚಾರವನ್ನು ಘೋಷಿಸಿದರು.

ರಿಪಬ್ಲಿಕನ್ ಪಕ್ಷದ ನಾಮನಿರ್ದೇಶನಕ್ಕಾಗಿ ತನ್ನ ಮಾಜಿ ಬಾಸ್ ಮತ್ತು ಮಾಜಿ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಸ್ಪರ್ಧಿಸುವುದಾಗಿ ಅವರು ಘೋಷಿಸಿದರು.

ಗುರು ಕಾಲ

ಉದಯಕಾಲ

ಹಸ್ತಗಿರಿ ಅನಂತಾರ್ ಆಚಾರ್ಯರು 11 ಸ್ತೋತ್ರ, 16 ಪ್ರಪತ್ತಿ ಹಾಗೂ 14 ಮಂಗಳಗಳನ್ನುಳ್ಳ ಬೆಳಗಿನ ಸುಪ್ರಭಾತವನ್ನು ರಚಿಸುತ್ತಾರೆ. ಇದೇ ಶ್ಲೋಕ/ಪದ್ಯಗಳು ವೆಂಕಟೇಶ್ವರ ಸುಪ್ರಭಾತ ಎಂದು ಖ್ಯಾತಿ ಪಡೆದು ಇಂದಿಗೂ ವೆಂಕಟೇಶ್ವರ ಸುಪ್ರಭಾತವಾಗಿ ಜನಪ್ರಿಯವಾಗಿದೆ.

# 'ಸುಪ್ರಭಾತ'ದ ಹಿನ್ನೆಲೆ ಮತ್ತು ಮಹತ್ವ



'ಕೌಸಲ್ಯಾ ಸುಪ್ರಜಾ ರಾಮ, ಪೂರ್ವಾಸಂಧ್ಯಾ ಪ್ರವರ್ತತೇ
ಉತ್ತಿಷ್ಠ ನರಶಾರ್ದೂಲ, ಕರ್ತವ್ಯಂ ದೈವಮಾಹ್ನಿಕಮ್...'

ಈ ಸಾಲುಗಳು ನಾವು ಪ್ರತೀದಿನ ಬೆಳಿಗ್ಗೆ ಕೇಳುವ ವೆಂಕಟೇಶ ಸುಪ್ರಭಾತದ್ದಾಗಿದೆ. ಅದು ಆರಂಭ ಆಗುವುದೇ, ಮಹಿತೋನ್ನತ ಚರಿತ್ರೆ ಹೊಂದಿರುವ ರಾಮನನ್ನು ಉದ್ದೇಶಿಸಿದ ಸಾಲುಗಳಿಂದ. ಮಹರ್ಷಿ ವಿಶ್ವಾಮಿತ್ರರು ರಾಕ್ಷಸರ ವಧೆಗಾಗಿ ರಾಮ-ಲಕ್ಷ್ಮಣರನ್ನು ಕಾಡಿಗೆ ಕರೆದೊಯ್ದಿದ್ದಾಗ ರಾಮನನ್ನು ಬೆಳಿಗ್ಗೆ ಎಬ್ಬಿಸಲು ಹೇಳಿದ ಸಾಲುಗಳಿವು.

ಹಾಗಾದರೆ ವೆಂಕಟೇಶ ಸುಪ್ರಭಾತಕ್ಕೂ, ರಾಮಾಯಣಕ್ಕೂ ಸಂಬಂಧವೇನು ಎಂಬ ಪ್ರಶ್ನೆ ಮೂಡುವುದು ಸಹಜ, ವಿಶ್ವಾಮಿತ್ರರು ರಾಮನನ್ನು ಎಬ್ಬಿಸುವುದಕ್ಕೆ ಹೇಳಿದ ಸಾಲುಗಳು ಅದ್ಹೇಗೆ ವೆಂಕಟೇಶ ಸುಪ್ರಭಾತವಾಗಲು ಸಾಧ್ಯ, ಅಂತೀರಾ?

ಅದಕ್ಕೆ ಉತ್ತರ ಇಲ್ಲಿದೆ, ನಾವು ಕೇಳುವ ಸಂಪೂರ್ಣ ಸುಪ್ರಭಾತಕ್ಕೂ, ರಾಮಾಯಣದ ಕಾಲಕ್ಕೂ ಸಂಬಂಧವಿಲ್ಲ. ಅದರಲ್ಲಿರುವ ಕೆಲವು ಸಾಲುಗಳನ್ನಷ್ಟೇ ವಿಶ್ವಾಮಿತ್ರರು ಹೇಳಿದ್ದು, ಆ ನಂತರದ್ದೆಲ್ಲಾ 600 ವರ್ಷಗಳ ಹಿಂದೆ ರಚನೆಯಾದದ್ದಾಗಿದೆ. ವೆಂಕಟೇಶ್ವರ ಸುಪ್ರಭಾತವನ್ನು ಸಂಪೂರ್ಣವಾಗಿ ರಚಿಸಿದ ಅನಂತಾಚಾರ್‌ರಿಗೆ ಪ್ರತಿವಾದಿ ಭಯಂಕರ ಎಂಬ ಬಿರುದೂ ಇತ್ತು, ಅವರು ಓರ್ವ ವೈಷ್ಣವ ಆಚಾರ್ಯರು.

ವೆಂಕಟೇಶ್ವರ ಸುಪ್ರಭಾತ ರಚಿಸಿದವರು ನಂಬಿ ಅನಂತಾಚಾರ್ಯ ದಂಪತಿಯ ಪುತ್ರ, ಹಸ್ತಗಿರಿ ಅನಂತಾಚಾರ್ ಅಣ್ಣಾರವರು ಹುಟ್ಟಿದ್ದು 1360, ಶ್ರೀವೈಷ್ಣವ ಸಂಪ್ರದಾಯದ ಸ್ವಾಮಿ ಪಿಳ್ಳೈಲೋಕಾಚಾರ್ಯಾರ್ ಹಾಗೂ ತಿರುವಿಧಿಪಿಳ್ಳೈರವರ ಮನೆತದಲ್ಲಿ. ಈ ಮನೆತನದಲ್ಲಿ ಸ್ವಾಮಿ ಮುದುಂಬೈ ನಂಬಿ ಅನಂತಾಚಾರ್ಯರು ರಾಮಾನುಜಾಚಾರ್ಯರು ನೇಮಿಸಿದ್ದ 74 ಸಿಂಹಾಧಿಪತಿಗಳಲ್ಲಿ ಒಬ್ಬರಾಗಿದ್ದರು.

ಹಸ್ತಗಿರಿ ಅನಂತಾಚಾರ್ ವೇದಾಂತ ದೇಶಿಕರ ಶಿಷ್ಯರಾಗಿದ್ದ ಸ್ವಾಮಿನಯನ ವರದಾಚಾರ್ಯಾರ್ ಎಂಬ ಗುರುವಿನ ಮಾರ್ಗದರ್ಶನದಲ್ಲಿ ಕಂಚಿಯಲ್ಲಿ (ಕಾಂಚಿಪುರ) ಅಧ್ಯಯನ ಮಾಡುತ್ತಾರೆ. ಬಾಲ್ಯದಿಂದಲೇ ದೈವಭಕ್ತಿ, ಆಸಕ್ತಿಯುತ ಅಧ್ಯಯನ ಮೊದಲಾದ ಗುಣಗಳಿಂದ ಸಂಪನ್ನರಾದ ಹಸ್ತಗಿರಿ ಗುರುಗಳ ಮೆಚ್ಚುಗೆಗೂ ಪಾತ್ರವಾಗಿರುತ್ತಾರೆ. ಹಸ್ತಗಿರಿ ತಮ್ಮ ಗುರುಗಳಲ್ಲಿ ಅಧ್ಯಯನ ಮಾಡುತ್ತಿದ್ದ ಅವಧಿಯಲ್ಲಿ ಅದ್ವೈತ ಸಿದ್ಧಾಂತದ ಪಂಡಿತರಾದ ನರಸಿಂಹ ಮಿಶ್ರಾ ಎಂಬುವರು ಕಂಚಿಗೆ (ಕಾಂಚೀಪುರ) ಭೇಟಿನೀಡಿ ಅಲ್ಲಿನ ವೇದ-ವಿದ್ವಾಂಸರೊಂದಿಗೆ ವಾದ ನಡೆಸಿ ಅದ್ವೈತದ ಶ್ರೇಷ್ಠತೆಯನ್ನು ಪ್ರಚಾರ ಮಾಡಲು ಉತ್ಸುಕರಾಗಿರುತ್ತಾರೆ.

ಒಂದುವೇಳೆ ನರಸಿಂಹ ಮಿಶ್ರಾ, ಅವರ ಬಳಿ ವಾದದಲ್ಲಿ ಸೋತರೆ ಪ್ರತಿವಾದಿಗಳು ಅದ್ವೈತ ಮತವನ್ನು ಅನುಸರಿಸಬೇಕಾಗುತ್ತದೆ ಅಥವಾ ನರಸಿಂಹ ಮಿಶ್ರರೇ ವಾದಲ್ಲಿ ಸೋತರೆ, ಪ್ರತಿವಾದಿಗಳ( ವೈಷ್ಣವ) ಮತವನ್ನು ಅಂಗೀಕರಿಸಬೇಕಾಗುತ್ತದೆ ಎಂಬುದು ಆ ವಾದದ ಷರತ್ತಾಗಿತ್ತು. ಹೀಗೆಯೇ ವಾದ ಮುಂದುವರೆಯುತ್ತಾ, ನರಸಿಂಹ ಮಿಶ್ರಾ, ಸ್ವಾಮಿನಯನ ವರದಾಚಾರ್ಯಾರವರನ್ನು ವಾದಕ್ಕೆ ಆಹ್ವಾನಿಸುತ್ತಾರೆ. ಆದರೆ ಅದನ್ನು ನಿರಾಕರಿಸಲೂ ಸಾಧ್ಯವಾಗದೆ, ಒಪ್ಪಲೂ ಸಾಧ್ಯವಾಗದೇ ವರದಾಚಾರ್ಯಾರವರು ಗೊಂದಲದಲ್ಲಿರುತ್ತಾರೆ.

ಇತ್ತ ವರದಾಚಾರ್ಯಾರವರ ಶಿಷ್ಯರಾಗಿದ್ದ ಹಸ್ತಗಿರಿ ಅನಂತಾಚಾರ್ ತಮ್ಮ ಗುರುಗಳ ಗೊಂದಲಕ್ಕೆ ಕಾರಣವಾಗಿರುವ ಅಂಶವನ್ನು ಹಿರಿಯ ವಿದ್ಯಾರ್ಥಿಗಳಿಂದ ತಿಳಿದು, ನರಸಿಂಹ ಮಿಶ್ರಾ ಅವರೊಂದಿಗೆ ವಾದ ನಡೆಸಲು ಗುರುಗಳ ಅನುಮತಿ ಕೇಳುತ್ತಾರೆ.

ಇದರಿಂದ ಅಚ್ಚರಿಗೊಳಗಾದ ವರದಾಚಾರ್ಯಾರವರು, ಹಸ್ತಗಿರಿಗೆ ಹಯಗ್ರೀವ ಮಂತ್ರೋಪದೇಶದ ಮೂಲಕ ಆಶೀರ್ವಾದ ಮಾಡಿ ಕಳಿಸುತ್ತಾರೆ.

ಅಂತಿಮವಾಗಿ ನರಸಿಂಹ ಮಿಶ್ರಾರವರೊಂದಿಗೆ ಪುಟ್ಟಬಾಲಕ ಹಸ್ತಗಿರಿ ವಾದದಲ್ಲಿ ಜಯಗಳಿಸಿ, ಪಂಡಿತ-ವಿದ್ವಾಂಸರಿಂದ ಮೆಚ್ಚುಗೆ ಗಳಿಸುತ್ತಾರೆ. ಇದರಿಂದ ಅತ್ಯಂತ ಸಂತುಷ್ಟರಾದ ವರದಾಚಾರ್ಯಾರವರು, ಹಸ್ತಗಿರಿಗೆ ಪ್ರತಿವಾದಿ ಭಯಂಕರ ಎಂಬ ಬಿರುದು ನೀಡುತ್ತಾರೆ.

**ವೆಂಕಟೇಶ್ವರ ಸುಪ್ರಭಾತ ರಚನೆ:** ಪ್ರತಿವಾದಿ ಭಯಂಕರ ಹಸ್ತಗಿರಿ ಅನಂತಾರ್ ಅಣ್ಣ, ಶ್ರೀನಿವಾಸನ ದರ್ಶನಕ್ಕಾಗಿ ತಿರುಪತಿಗೆ ತೆರಳುತ್ತಾರೆ. ಅಲ್ಲಿ ವೆಂಕಟೇಶ್ವರನ ಸೇವಕರಾಗಿದ್ದ ಸ್ವಾಮಿ ಅನಂತಪಿಳ್ಳೈ ಅವರೊಂದಿಗೆ ವೆಂಕಟೇಶ್ವರಸ್ವಾಮಿಯ ಸೇವೆಗೆ ಮುಂದಾಗುತ್ತಾರೆ. ಪ್ರತೀದಿನ ವೆಂಕಟೇಶ್ವರಸ್ವಾಮಿಯ ಪೂಜೆಗೆ ಅಗತ್ಯವಿರುವ ಆಕಾಶ ಗಂಗೆಯಿಂದ ನೀರನ್ನು ತರುವ ಜವಾಬ್ದಾರಿ ಹೊತ್ತಿದ್ದ ಹಸ್ತಗಿರಿಗೆ ಒಂದುದಿನ ಹಸ್ತಗಿರಿಗೆ ಅಚ್ಚರಿ ಎದುರಾಗುತ್ತದೆ.

ಶ್ರೀರಂಗಂನಿಂದ ಬಂದ ಭಕ್ತರೊಬ್ಬರು ನೀರು ತರುತ್ತಿದ್ದ ಹಸ್ತಗಿರಿಗೆ ಎದುರಾಗುತ್ತಾರೆ. ಹಸ್ತಗಿರಿಯೊಂದಿಗೆ ಮಾತನಾಡುತ್ತಾ ಶ್ರೀರಂಗಂನ ಭಕ್ತರು ಅಲ್ಲಿ ಸಾಕಷ್ಟು ಸೇವೆಗಳನ್ನು ಮಾಡಿ, ರಾಮಾನುಜಾಚಾರ್ಯರ ತತ್ವವನ್ನು ಚಾಚೂ ತಪ್ಪದೇ ಅನುಸರಿಸುತ್ತಿರುವ ಮಾಮುನಿಗಳ್ ಸ್ವಾಮಿಗಳ ಬಗ್ಗೆ ಹೇಳಲು ಪ್ರಾರಂಭಿಸುತ್ತಾರೆ.

ಇದರಲ್ಲೆ ತಲ್ಲೀನರಾದ ಹಸ್ತಗಿರಿ ವೆಂಕಟೇಶ್ವರಸ್ವಾಮಿಯ ಪೂಜಾಕೈಂಕರ್ಯಕ್ಕೆ ನೀರು ನೀಡುವುದನ್ನೂ ಮರೆತುಹೋಗುತ್ತಾರೆ. ಕೆಲವು ಸಮಯದ ನಂತರ ದೇವಾಲಯದವರೇ ಹಸ್ತಗಿರಿಯನ್ನು ಹುಡುಕಿಕೊಂಡು ಬಂದು ನೀರನ್ನು ಪಡೆದು ಹೋಗುತ್ತಾರೆ. ಆದರೆ ಅದಕ್ಕೆ ಸುಗಂಧವಸ್ತುಗಳನ್ನು ಸೇರಿಸುವುದಕ್ಕೆ ಮರೆತಿರುತ್ತಾರೆ, ಇದನ್ನು ಹೇಳುವಷ್ಟರಲ್ಲಿ ಪೂಜೆಯೂ ಮುಕ್ತಾಯಗೊಂಡಿರುತ್ತದೆ. ಮಾಡಿದ ಪಶ್ಚಾತ್ತಾಪಕ್ಕೆ ದೇವರ ಬಳಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದ ಹಸ್ತಗಿರಿಯೊಂದಿಗೆ ಸ್ವತಃ ವೆಂಕಟೇಶ್ವರನೇ ಮಾತನಾಡಲು ಪ್ರಾರಂಭಿಸಿ, ನೀರು ಸುಗಂಧಭರಿತ ವಾಗಿತ್ತೆಂದೂ ಪಶ್ಚಾತ್ತಾಪಪಡದಂತೆಯೂ ಹೇಳುತ್ತಾರೆ.

ಇದನ್ನು ಸ್ವಾಮಿ ಮನವಾಳ ಮಾಮುನಿಗಳ್‌ರ ವೈಭವವೆಂದೇ ಪರಿಗಣಿಸಿದ ಹಸ್ತಗಿರಿ ಅವರನ್ನು ಭೇಟಿ ಮಾಡಲು ಶ್ರೀರಂಗಂಗೆ ತೆರಳುತ್ತಾರೆ.

ಇದಾದ ನಂತರ ಶ್ರೀರಂಗಂನಿಂದ ಹಸ್ತಗಿರಿ ಹಾಗೂ ಸ್ವಾಮಿ ಮಾಮುನಿಗಳ್ ಇಬ್ಬರೂ ತಿರುಮಲಕ್ಕೆ ಭೇಟಿ ನೀಡುತ್ತಾರೆ. ಭೇಟಿಯ ವೇಳೆ ಶ್ರೀನಿವಾಸ/ ವೆಂಕಟೇಶ್ವರಸ್ವಾಮಿಯ ವೈಭವ ಎಲ್ಲರಿಗೂ(ಸಾಮಾನ್ಯರಿಗೂ) ತಿಳಿಯುವ ರೀತಿಯಲ್ಲಿ ಕೀರ್ತನೆ ರಚಿಸುವಂತೆ ಸ್ವಾಮಿ ಮಾಮುನಿಗಳ್ ಹಸ್ತಗಿರಿ ಆಚಾರ್ಯರಿಗೆ ಸೂಚಿಸುತ್ತಾರೆ.

ಅದರಂತೆಯೇ ಹಸ್ತಗಿರಿ ಅನಂತಾರ್ ಆಚಾರ್ಯರು 11 ಸ್ತೋತ್ರ, 16 ಪ್ರಪತ್ತಿ ಹಾಗೂ 14 ಮಂಗಳಗಳನ್ನುಳ್ಳ ಬೆಳಗಿನ ಸುಪ್ರಭಾತವನ್ನು ರಚಿಸುತ್ತಾರೆ.

ಇದೇ ಶ್ಲೋಕ/ ಪದ್ಯಗಳು ವೆಂಕಟೇಶ್ವರ ಸುಪ್ರಭಾತ ಎಂದು ಖ್ಯಾತಿ ಪಡೆದು ಇಂದಿಗೂ ವೆಂಕಟೇಶ್ವರ ಸುಪ್ರಭಾತವಾಗಿ ಜನಪ್ರಿಯವಾಗಿದೆ.

● **ಡಾ. ಗುರುರಾಜ ಪೋಶೆಟ್ಟಿಹಳ್ಳಿ** ಬೆಂಗಳೂರು

# ಕೋಟಿ ಚೆನ್ನಯ್ಯರ ಪುಣ್ಯಕ್ಷೇತ್ರ: ಗೆಜ್ಜೆಗಿರಿಯ ನಂದನ ಬಿತ್ತಲ್ ಕ್ಷೇತ್ರ

ಪರಶುರಾಮ ಸೃಷ್ಟಿಯ ತುಳುನಾಡು ಪುಣ್ಯಭೂಮಿಯಲ್ಲಿ ಜನ್ಮತಾಳಿದ ವೀರಪುರುಷರು ಕೋಟಿ-ಚೆನ್ನಯ್ಯರು. ಸತ್ಯದ ರಕ್ಷಣೆಯನ್ನು ಮಾಡಿ ಅನ್ಯಾಯದ ವಿರುದ್ಧ ಹೋರಾಡಿದ ವೀರರಿವರು. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕು ಬಡಗನ್ನೂರು ಗ್ರಾಮದ ಪಡುಮಲೆಯಿಂದ ಸುಮಾರು 2 ಕಿ. ಮೀ. ದೂರದಲ್ಲಿರುವ ಗೆಜ್ಜೆಗಿರಿ ನಂದನ ಬಿತ್ತಲ್, ಕೋಟಿ-ಚೆನ್ನಯ್ಯರ ಪುಣ್ಯಕ್ಷೇತ್ರವಾಗಿದೆ. ದೇಯಿ ಬೈದ್ಯೆತಿಗೆ ಆಶ್ರಯ ನೀಡಿ ಹೊಸಬದುಕನ್ನು ನೀಡಿದ, ಸಾಯನ ಬೈದ್ಯನ ಕರ್ಮಭೂಮಿಯೂ ಆಗಿರುವ, ಕೋಟಿ ಚೆನ್ನಯ್ಯರು ಬಾಲ್ಯದಲ್ಲಿ ಆಡಿ ಬೆಳೆದ ಈ ಗೆಜ್ಜೆಗಿರಿಯ ನಂದನ ಬಿತ್ತಲ್ ಕ್ಷೇತ್ರ ಕೋಟಿ-ಚೆನ್ನಯ್ಯರ ಮೂಲಸ್ಥಾನವಾಗಿದೆ.

**ಈ ಕ್ಷೇತ್ರದ ಸಂಕ್ಷಿಪ್ತ ಹಿನ್ನೆಲೆ:** ಹಲವು ವರ್ಷಗಳ ಹಿಂದೆ ಮೂರ್ತೆಗಾರಿಕೆ ಕುಲಕಸುಬಾಗಿದ್ದ ಸಾಯನಬೈದ್ಯ ಎಂಬ ನಾಟಿವೈದ್ಯನೊಬ್ಬ ಎಂದಿನಂತೆ ಒಂದು ದಿನ ಸಂಕಮಲೆ ಬೆಟ್ಟದಲ್ಲಿ ತಾಳೆ ಮರವನ್ನೇರಿ ಮುರ್ತೆಗಾರಿಕೆ ಮಾಡುತ್ತಿದ್ದ. ಆಗ ಯಾರೋ ಅಳುತ್ತಿರುವ ಶಬ್ದ ಅವನ ಕಿವಿಗೆ ಬಿದ್ದಾಗ, ಆತ ತಾಳೆಮರದಿಂದ ಕೆಳಗೆ ಇಳಿಯುತ್ತಾನೆ. ನೋಡಿದರೆ ತಾನು ತಾಳೆಮರವನ್ನೇರಲು ಕಟ್ಟಿದ್ದ ಬಿದಿರಿನ ಏಣಿಗೆ ಒರಗಿ ಕುಳಿತ ಒಬ್ಬಳು ಹೆಣ್ಣುಮಗಳ ಅಳುವೇ ಅದು ಎಂದು ಅವನಿಗೆ ತಿಳಿಯುತ್ತದೆ. ಆ ಹುಡುಗಿಯ ಕಣ್ಣಿಗೆ ಬಟ್ಟೆಯಿಂದ ಕಟ್ಟಲಾಗಿತ್ತು. ಅವಳ ಅಳುವಿಗೆ ಕಾರಣವೇನೆಂದು ಸಾಯಿಬೈದ್ಯನು ಕೇಳಿದಾಗ, ಮದುವೆಗೆ ಮುಂಚೆ ಋತುಮತಿಯಾದ ಕಾರಣ ತಂದೆ-ತಾಯಿ ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿಗೆ ಬಿಟ್ಟರು ಎಂದು ಹೇಳುತ್ತಾಳೆ. (ಆ ಕಾಲದಲ್ಲಿ ಹೆಣ್ಣುಮಕ್ಕಳನ್ನು ಋತುಮತಿಯಾಗುವ ಮುಂಚೆಯೇ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಬೇಕಿತ್ತು. ಅಜ್ಜಿಯಿಂದ ಕೇಳಿ ತಿಳಿದಪ್ರಕಾರ, ಹೆಚ್ಚುಕಡಿಮೆ 100 ವರ್ಷಗಳ ಹಿಂದೆಯೂ ಕೂಡ ಈ ಸಂಪ್ರದಾಯ ನಡೆಯುತ್ತಿತ್ತು. ಒಂದುವೇಳೆ ಮದುವೆಗೆ ಮೊದಲು ಹುಡುಗಿ ಮೈನೆರೆದರೆ ಹೆತ್ತವರು ಅವಳ ಕಣ್ಣಿಗೆ ಬಟ್ಟೆಯ ಪಟ್ಟಿಯನ್ನು ಕಟ್ಟಿ ಕಾಡಿಗೆ ಬಿಟ್ಟುಬರಬೇಕು. ಆ ಕಾಲದಲ್ಲಿ ಹುಡುಗಿಯರ ಬಾಳು ಎಷ್ಟೊಂದು ದಯನೀಯವಾಗಿತ್ತೆಂದರೆ 10 ವರ್ಷದೊಳಗಿನ ವಯಸ್ಸಿನ ಹುಡುಗಿಯರನ್ನು 60 ವರ್ಷ ಕಳೆದ ಮುದುಕರಿಗೆ ಮದುವೆ ಮಾಡಿಸುತ್ತಿದ್ದರು. ಕಣ್ಣುಕಟ್ಟಿ ಕಾಡಿಗೆ ಬಿಡಬೇಕಾದ ಪರಿಸ್ಥಿತಿಗೆ ಹೆದರಿ, ಈ ರೀತಿ ಸಿಕ್ಕಿದ ಯಾವುದಾದರೊಂದು ಗಂಡಿಗೆ ಗಂಟು ಹಾಕಿದರೆ ಕಣ್ಣು ಕಟ್ಟದೆಯೇ ದಟ್ಟ ಕಾಡಿನೊಳಗೆ ಬಿಟ್ಟು ಬಂದ ಹಾಗೆ ಆಗುತ್ತಿತ್ತು ಅವಳ ಬದುಕು)

ಅಳುತ್ತಿರುವ ಆ ಹುಡುಗಿಯನ್ನು ಸಾಯನಬೈದ್ಯ ತನ್ನ ತಂಗಿಯಾಗಿ ಸ್ವೀಕರಿಸಿ ತನ್ನ ಮನೆಗೆ ಕರೆದು ತಂದು ಅವಳಿಗೆ ನಾಟಿ ವೈದ್ಯವನ್ನು ಕಲಿಸಿ, ಸಲಹುತ್ತಾನೆ. ಆ ಹುಡುಗಿಯೇ ದೇಯಿ ಬೈದ್ಯೆತಿ.





ಮುಂದೆ ಸಾಯನ ಬೈದ್ಯನ ಭಾವನಾದ ಕಾಂತಣ್ಣ ಬೈದ್ಯನ ಜೊತೆಯಲ್ಲಿ ದೇಯಿ ಬೈದ್ಯೆತಿಯ ವಿವಾಹವಾಗುತ್ತದೆ. ಅವಳಿ ಮಕ್ಕಳಾದ ಕೋಟಿ ಚೆನ್ನಯ್ಯ ರಿಗೆ ಜನ್ಮನೀಡಿದ 16ನೇ ದಿನದಂದು ಆಕಸ್ಮಿಕವಾಗಿ ಬೀಡಿನ ಸಮೀಪದ ಕೆರೆಯಲ್ಲಿ ಅವಳು ಸಾವನ್ನಪ್ಪುತ್ತಾಳೆ. ತಂಗಿಯ ಕಳೇಬರವನ್ನು ಗೆಜ್ಜೆಗಿರಿ ಮನೆಗೆ ತಂದು ದಫನ ಮಾಡಿದ ಸಾಯನ ಬೈದ್ಯಸುಧೀರ ಮಕ್ಕಳನ್ನು ತನ್ನ ಮನೆಗೆ ಕರೆದುತಂದು ಆರೈಕೆ ಮಾಡುತ್ತಾನೆ. ಹೀಗೆ ಕೋಟಿ-ಚೆನ್ನಯ್ಯರು ಮಾವನ ಮನೆಯಾದ ಗೆಜ್ಜೆಗಿರಿಯಲ್ಲಿ ಬೆಳೆದು ದೊಡ್ಡವರಾಗಿ ಅಲ್ಲಿನ ಗರಡಿಯಲ್ಲಿ ಪರಿಶೀಲನೆ ಪಡೆದು ವೀರ ಪರಾಕ್ರಮಿಗಳಾಗುತ್ತಾರೆ.

ದೇಯಿ ಬೈದ್ಯೆತಿಗೆ ಬದುಕು ನೀಡಿದ ಮನೆಯೇ, ಗೆಜ್ಜೆಗಿರಿ ನಂದನ ಬಿತ್ತಲ್ ಕ್ಷೇತ್ರ. ಕೋಟಿ ಚೆನ್ನಯ್ಯರು, ಸಾಯನ ಬೈದ್ಯ, ದೇಯಿ ಬೈದ್ಯೆತಿ ಬಾಳಿ ಬದುಕಿದ ಮೂಲಮನೆಯೇ ಸತ್ಯ-ಧರ್ಮ ಚಾವಡಿ. ಸಾಯನ ಬೈದ್ಯನ ಹಿರಿಯರ ಕಾಲದಿಂದಲೂ ಆರಾಧಿಸುತ್ತಿದ್ದ ಧೂಮಾವತಿ ದೈವದ ಗುಡಿ ಸರೋಳಿ ಮಂಜ ಕಟ್ಟೆ ಮುಂಭಾಗದಲ್ಲಿದೆ. ದೇಯಿ ಬೈದ್ಯೆತಿಯ ಮಹಾ ಸಮಾಧಿಯನ್ನೂ ಅಲ್ಲಿ ಕಾಣಬಹುದು. ದೇಯಿ ಬೈದ್ಯೆತಿ ನಾಗಬ್ರಹ್ಮರನ್ನು ನೆನೆದು ನಾಟಿಔಷಧಿ ಕೊಡುತ್ತಿದ್ದ ಜಾಗವೇ ನಾಗನಕಟ್ಟೆ, ಕೋಟಿ-ಚೆನ್ನಯ್ಯರು ವ್ಯಾಯಾಮ ಮಾಡುತ್ತಿದ್ದ ಸ್ಥಳ ಗರಡಿ ಮನೆ.

ಗೆಜ್ಜೆಗಿರಿಯ ಶಿಖರಾಗ್ರದಲ್ಲಿ ನಿರ್ಮಿಸಲಾದ ಮೂಲಸ್ಥಾನ ಗರಡಿಯಲ್ಲಿ ಕೋಟಿ-ಚೆನ್ನಯ್ಯರ ಜೊತೆಗೆ ಗುರುಸಾಯಿ ಬೈದ್ಯರ ಬಿಂಬ ಪ್ರತಿಷ್ಠೆ ಮಾಡಲಾಗಿದೆ. ಸ್ವಲ್ಪ ದೂರದಲ್ಲಿರುವ ಸತ್ಯ-ಧರ್ಮ ಚಾವಡಿಯಲ್ಲಿ ಮಾತೆ ದೇಯಿ ಬೈದ್ಯೆತಿಯ ಬಿಂಬ ಹಾಗೂ ಗುರುಸಾಯನ ಬೈದ್ಯರ ಗುರುಪೀಠ ಸ್ಥಾಪಿಸಲಾಗಿದೆ. ದೇಯಿ ಬೈದ್ಯೆತಿಯ ಹೆಸರಲ್ಲಿ ಪ್ರಾರ್ಥನೆ ಮಾಡಿ ಭಕ್ತರಿಗೆ ನೀಡುವ ನೋವಿನ ಎಣ್ಣೆ (ನೋವು ನಿವಾರಕ) ಇಲ್ಲಿನ ವಿಶೇಷತೆಯಾಗಿದೆ. ಗೆಜ್ಜೆಗಿರಿ ಮೇಳ ಎಂಬ ಯಕ್ಷಗಾನ ಮೇಳವೂ ಇಲ್ಲಿನದಾಗಿದೆ.

ಪುತ್ತೂರಿನಿಂದ ಮುಂದೆ ಸಾಗಿದರೆ ಪ್ರಕೃತಿಸೌಂದರ್ಯವನ್ನು ವೀಕ್ಷಿಸುತ್ತಾ ತಿರುವು ರಸ್ತೆಗಳಲ್ಲಿ ಪ್ರಯಾಣ ಮಾಡುವುದು ಖುಶಿಯ ಅನುಭವ ನೀಡುತ್ತದೆ. ಗೆಜ್ಜೆಗಿರಿಯನ್ನು ತಲುಪಿದರೆ ಅಲ್ಲಿನ ಪ್ರಶಾಂತವಾದ ವಾತಾವರಣ ಹಾಗೂ ಸುಂದರಕ್ಷೇತ್ರ ಮತ್ತು ಪರಿಸರ ನೋಡುವುದು ಮನೋಲ್ಲಾಸಕರವಾಗಿದೆ. ಪುತ್ತೂರು ತಾಲೂಕಿನ ಈಶ್ವರಮಂಗಲದಲ್ಲಿರುವ ಸುಪ್ರಸಿದ್ಧ ಕೋದಂಡರಾಮ- ಪಂಚಮುಖಿ ಆಂಜನೇಯ ಕ್ಷೇತ್ರ ಹನುಮಗಿರಿಯಿಂದ ಗೆಜ್ಜೆಗಿರಿಗೆ ಹೋಗಲು ಹತ್ತಿರದ ದಾರಿಯಿದೆ, ಅಪರೂಪದ ಈ ಕ್ಷೇತ್ರವನ್ನು ಸಂದರ್ಶಿಸಿದರೆ ತುಳುನಾಡಿನ ವೈಭವವನ್ನು ಕಣ್ತುಂಬಿಸಲು ಸಾಧ್ಯವಾಗುತ್ತದೆ.

● **ರೇಣುಕಾ ಸುಧೀರ್ ಅರಸಿನಮಕ್ಕಿ**
ಬೆಳ್ತಂಗಡಿ

# ಮಹತ್ವದ ತತ್ವದ ಸಾರ: ಕೇನೋಪನಿಷತ್ತು

ಕೇನೋಪನಿಷತ್ತು ಸಾಮವೇದದ ತಲವಕಾರ ಬ್ರಾಹ್ಮಣಕ್ಕೆ ಸೇರಿದ್ದು, ಇದಕ್ಕೆ ತಲವಕಾರೋಪನಿಷತ್ತು ಎನ್ನುವ ಹೆಸರೂ ಇದೆ. ಪ್ರಾಚೀನವಾದ ದಶೋಪನಿಷತ್ತುಗಳಲ್ಲಿ ಒಂದಾಗಿರುವ ಇದು ಕೇವಲ ಮೂವತ್ನಾಲ್ಕು ಮಂತ್ರಗಳನ್ನು ಒಳಗೊಂಡಿದೆ. ಮಂತ್ರಗಳ ಸಂಖ್ಯೆಯ ದೃಷ್ಟಿಯಲ್ಲಿ ಚಿಕ್ಕದಾದರೂ ಇದು ಬೋಧಿಸುವ ತತ್ವ ಮಹತ್ವದ್ದಾಗಿದೆ. ಈ ಉಪನಿಷತ್ತಿನ ಮೊದಲನೆಯ ಮಂತ್ರ 'ಕೇನ' ಎನ್ನುವ ಶಬ್ದದಿಂದ ಪ್ರಾರಂಭವಾಗುವುದರಿಂದ ಇದಕ್ಕೆ ಕೇನೋಪನಿಷತ್ತು ಎನ್ನುವ ಹೆಸರು ಬಂದಿದೆ. ಸಂಸ್ಕೃತದಲ್ಲಿ ಕೇನ ಎಂಬ ಪದ ಪ್ರಶ್ನಾರ್ಥವಾದುದಾಗಿದೆ. 'ಯಾರಿಂದ' ಎಂಬುದು ಅದರ ಅರ್ಥ. ಇಂದ್ರಿಯಗಳಿಗೂ, ಮನಸ್ಸಿಗೂ ಸತ್ಯವನ್ನು ಅರಿಯುವ ಶಕ್ತಿ ಇದೆ ಎನ್ನುವುದನ್ನು ತತ್ವಶಾಸ್ತ್ರವು ಹೇಳುತ್ತದೆ. ಇಂತಹ ಮೂಲಭೂತವಾದ ಭಾವನೆಗಳನ್ನು ಪ್ರಶ್ನಿಸುವುದರ ಮೂಲಕವೂ, ಅನುಭವವನ್ನು ತೀವ್ರವಾದ ಪರೀಕ್ಷೆಗೆ ಗುರಿಪಡಿಸುವುದರ ಮೂಲಕವೂ ಕೇನೋಪನಿಷತ್ತು ಅನಂತವೂ, ಕೇವಲವೂ ಆದ ಶುದ್ಧಆತ್ಮವು ಅನುಭವದಲ್ಲಿಯೇ ಇದೆ ಎಂಬುದನ್ನು ಕಂಡುಕೊಳ್ಳಲು ನಮಗೆ ನೆರವು ನೀಡುತ್ತದೆ. ಜಗತ್ತಿನಲ್ಲಿ ಅತ್ಯಂತ ಪ್ರಾಚೀನವಾದ ಇತಿಹಾಸವನ್ನು ಹೊಂದಿರುವ ಭಾರತದಲ್ಲಿ ಆ ಕಾಲದಲ್ಲಿಯೇ ವಿಚಾರಪೂರ್ಣವಾದ ತತ್ವಶಾಸ್ತ್ರ ತಲೆದೋರಿತ್ತು ಎಂಬುದಕ್ಕೆ ಈ ಉಪನಿಷತ್ತು ಒಂದು ಉತ್ತಮ ಉದಾಹರಣೆಯಾಗಿದೆ.

ಸಾಂಪ್ರದಾಯಿಕವಾಗಿ ಇದು ಈಶಾವಾಸ್ಯೋಪನಿಷತ್ತಿನ ನಂತರ ಬರುವುದಾದರೂ ಸಹ ಪಾಶ್ಚಾತ್ಯ ಪಂಡಿತರ ಪ್ರಕಾರ ಅದಕ್ಕಿಂತಲೂ ಪ್ರಾಚೀನವಾದುದು. ಹಳೆಯ ಗದ್ಯ-ಪದ್ಯ ರೂಪದಲ್ಲಿರುವ ಬೃಹದಾರಣ್ಯಕ, ಛಾಂದೋಗ್ಯ, ತೈತ್ತಿರೀಯ ಉಪನಿಷತ್ತುಗಳ ಗುಂಪಿಗೆ ಸೇರುತ್ತದೆ. ಶಂಕರಾಚಾರ್ಯರು ಈ ಉಪನಿಷತ್ತಿಗೆ ಎರಡು ಭಾಷ್ಯಗಳನ್ನು ಬರೆದಿದ್ದು ಒಂದು ಪದಭಾಷ್ಯವಾದರೆ ಇನ್ನೊಂದು ವಾಕ್ಯಭಾಷ್ಯವಾಗಿದೆ. ನಾಲ್ಕು ಖಂಡಗಳನ್ನು ಒಳಗೊಂಡಿರುವ ಈ ಉಪನಿಷತ್ತು ಪರಬ್ರಹ್ಮ ವಿಷಯವನ್ನು ಒಳಗೊಂಡಿದೆ. ಪರಬ್ರಹ್ಮವು ಅತೀಂದ್ರಿಯ ವಸ್ತುವೆಂದೂ, ಜಡವಾದ ಇಂದ್ರಿಯಗಳ ಚೇತನತ್ವವು ಅದರಿಂದಲೇ ಉಂಟಾಗಿದೆಯೆಂದೂ, ಅದರ ಸ್ವರೂಪವನ್ನು ಪ್ರಮಾಣಗಳಿಂದ ಇತರರಿಗೆ ಉಪದೇಶಿಸುವುದು ಅಸಾಧ್ಯವೆಂದು ಮೊದಲನೆಯ ಖಂಡವು ತಿಳಿಸುತ್ತದೆ. ಭಗವಂತನನ್ನು ತಾನು ಪೂರ್ಣವಾಗಿ ತಿಳಿದಿದ್ದೇನೆ ಎಂದು ಭಾವಿಸುವವನು ನಿಜವಾಗಿ ಭಗವಂತನನ್ನು ತಿಳಿದಿಲ್ಲ. ಅವನಿಗೆ ಭಗವಂತನ ಪೂರ್ಣತೆಯ ಜ್ಞಾನವಿದ್ದಿದ್ದರೆ ತಾನು ಪರಮಾತ್ಮನನ್ನು ತಿಳಿದಿದ್ದೇನೆ ಎಂಬ ಭ್ರಮೆಗೆ ಒಳಗಾಗುತ್ತಿರಲಿಲ್ಲ. ಆದುದರಿಂದ ಅವನು ಅಜ್ಞಾನಿಯಾಗಿದ್ದಾನೆ ಎಂದು ಹೇಳಬಹುದು. ತಾನು ಭಗವಂತನನ್ನು ಚೆನ್ನಾಗಿ ತಿಳಿದಿಲ್ಲವೆಂದು ಭಾವಿಸುವವನೇ ನಿಜವಾದ ಬ್ರಹ್ಮಜ್ಞಾನಿಯು ಜ್ಞಾನ, ಅಜ್ಞಾನಗಳ ವಿವೇಚನೆಯನ್ನು ಈ ರೀತಿಯಾಗಿ ಮಾಡಬೇಕೆಂದು ಈ ಉಪನಿಷತ್ತು ತಿಳಿಸುತ್ತದೆ.





ಕೇನೋಪನಿಷತ್ತಿನಲ್ಲಿ ಹೇಳಿರುವ ತತ್ತ್ವ ಪ್ರತಿಪಾದನೆ ವಿಮರ್ಶಾತ್ಮಕವಾದುದು. ಪ್ರಾಚೀನ ಭಾರತದ ತತ್ತ್ವ ಚಿಂತನೆಯಲ್ಲಿ ಈಗಿರುವುದೇ ಸರಿ ಎನ್ನುವ ಭಾವನೆಗಿಂತ ವಿಮರ್ಶಾತ್ಮಕ ಮನೋಭಾವನೆ ಬೆಳೆಯಲು ಈ ಉಪನಿಷತ್ತು ಕಾರಣವಾಯಿತು. ಶಿಷ್ಯನು ಗುರುವಿಗೆ ಕೇಳುವ ಪ್ರಶ್ನೆಯಿಂದ ಈ ಉಪನಿಷತ್ತು ಪ್ರಾರಂಭವಾಗುತ್ತದೆ. ಮಾನವನ ಮನಸ್ಸು, ಇಂದ್ರಿಯಗಳು ಮತ್ತು ಪ್ರಾಣವು ಯಾರಿಂದ ನಿಯಂತ್ರಣಗೊಳ್ಳುತ್ತಿವೆ? ಬೇರೆ-ಬೇರೆ ಇಂದ್ರಿಯಗಳ ಹಿಂದಿರುವ ಶಕ್ತಿಯು ಆತ್ಮವೇ ಎಂದು ಗುರುವು ತನ್ನ ಶಿಷ್ಯನಿಗೆ ವಿವರಿಸುತ್ತಾನೆ. ಮಾನವನ ಹೃದಯದಲ್ಲಿರುವ ಅದ್ಭುತವಾದ ಪ್ರೇರಣೆ ಯೆಂದರೆ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು, ಕಲ್ಪನೆಯ ಸ್ತರದಲ್ಲಿ ಬಾಳಬಾರದು ಎನ್ನುವುದಾಗಿದೆ. ಭಗವಂತ ಇರುವುದಾದರೆ ಅವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು ಎನ್ನುವ ಮನೋಭಾವನೆ ಕೇನೋಪನಿಷತ್ತಿನ ಸಾಧಕನಲ್ಲಿ ಕಂಡುಬರುತ್ತದೆ. ಆಧ್ಯಾತ್ಮಿಕವಾಗಿ ಬೆಳಕು ನೀಡುವ ಗುರು ಮತ್ತು ಶ್ರದ್ಧೆಯಿಂದ ಕೂಡಿದ ವಿದ್ಯಾರ್ಥಿಯ ನಡುವೆ ನಡೆದ ಸಂವಾದದ ರೂಪದಲ್ಲಿರುವ ಈ ಉಪನಿಷತ್ತಿನಲ್ಲಿ ಅಡಗಿರುವ ತತ್ತ್ವಗಳು ಬಹಳ ಸುಂದರವಾಗಿವೆ ಮತ್ತು ನಮ್ಮಲ್ಲಿರುವ ಅಹಂಕಾರವನ್ನು ದೂರೀಕರಿಸುತ್ತವೆ. ಮಾನವನ ಮಾನಸಿಕ ವಿಕಾಸವು ಉನ್ನತ ಸ್ತರಗಳಲ್ಲಿ ಆಗಬೇಕು. ಬೆಳವಣಿಗೆಯ ಶಿಖರದಲ್ಲಿ ಸತ್ಯವು ಬದುಕನ್ನು ಆದ್ಯಂತವಾಗಿ ಪ್ರವೇಶಿಸಿ ವ್ಯಾಪಿಸಬೇಕು. ಈ ಉಪನಿಷತ್ತಿನ ಎರಡನೆಯ ಅಧ್ಯಾಯದ ಕೊನೆಯ ಮಂತ್ರವು ನಮಗೆ ಇಂತಹ ಸತ್ಯವನ್ನು ತಿಳಿಸುತ್ತದೆ. ವಿವೇಕಿಗಳು ಪ್ರತಿಯೊಂದು ವಸ್ತುವಿನಲ್ಲೂ ಆತ್ಮತತ್ತ್ವವನ್ನು ಕಂಡು ಈ ಲೋಕದಿಂದ ದೂರವಾದರೂ ಸಹ ಅಮೃತರಾಗುತ್ತಾರೆ. ದುಷ್ಟಶಕ್ತಿ ಮತ್ತು ಸತ್‌ಶಕ್ತಿಗಳ ನಡುವೆ, ಕತ್ತಲೆ ಮತ್ತು ಬೆಳಕಿನ ನಡುವೆ, ಅಸುರರು ಮತ್ತು ಸುರರ ನಡುವೆ ನಡೆದ ಯುದ್ಧದಲ್ಲಿ ವಿಜಯಿಗಳಾದ ದೇವತೆಗಳ ಅಹಂಕಾರವನ್ನು ಹೋಗಲಾಡಿಸಿದ ರೀತಿ ಇಲ್ಲಿ ಅತ್ಯಂತ ಸುಂದರವಾಗಿ ಚಿತ್ರಿತವಾಗಿದೆ.

ಪ್ರಜಾಪತಿಯ ಮಕ್ಕಳು ಎರಡು ರೀತಿಯವರಾಗಿದ್ದಾರೆ. ಒಬ್ಬರು ಸುರರು ಮತ್ತು ಇನ್ನೊಬ್ಬರು ಅಸುರರು. ಸುರರ ಸಂಖ್ಯೆ ಕಡಿಮೆ ಹಾಗೂ ಅಸುರರ ಸಂಖ್ಯೆ ಹೆಚ್ಚು. ದೇವತೆಗಳು ಅಲ್ಪಸಂಖ್ಯರಾದರೂ ಅವರು ಜ್ಞಾನಿಗಳು ಮತ್ತು ಶಾಸ್ತ್ರವನ್ನು ಅರಿತವರು. ಅಸು ಎಂದರೆ ಪ್ರಾಣ, ಹೀಗಾಗಿ ಅಸುರರು ಹೆಸರಿಗೆ ತಕ್ಕಂತೆ ತಮ್ಮ ಪ್ರಾಣದಲ್ಲೇ ರತರಾದವರು. ಇವರು ಶಾಸ್ತ್ರವನ್ನು ಅರಿಯದೇ ಇಂದ್ರಿಯ ಸುಖಭೋಗಗಳಲ್ಲಿ ತೊಡಗಿಕೊಂಡವರು. ಇದು ಸುಲಭವಾದದ್ದು ಮತ್ತು ಸುಖವನ್ನು ನೀಡುವಂತದ್ದಾಗಿದೆ. ನಾವು ಒಂದು ಸಮಾಜವನ್ನು ಅವಲೋಕಿಸಿದರೂ ಸಹ ಅಲ್ಲಿ ಅಸುರರ ಸಂಖ್ಯೆ ಹೆಚ್ಚಿರುತ್ತದೆ. ಮನುಷ್ಯನ ಒಳಗೂ ಅಸುರೀ ಗುಣಗಳು ಹೆಚ್ಚಿರುತ್ತವೆ. ಆದರೆ ಯಾವನು ಅಸುರೀ ಗುಣಗಳನ್ನು ಹೊಡೆದೋಡಿಸಿ ಜ್ಞಾನಪ್ರಾಪ್ತಿಗೆ ಬಯಸುತ್ತಾನೋ, ಅವನು ಅಂತಿಮವಾಗಿ ವಿಜಯಿಯಾಗುತ್ತಾನೆ, ದೇವಾಸುರ ಯುದ್ಧ ಸದಾ ನಡೆಯುತ್ತಲೇ ಇರುತ್ತದೆ.

(ಮುಂದುವರಿಯುವುದು)

● **ಭಾರತಿ ಹೆಗಡೆ**